ಕರ್ಣಾಟಕ

ನಾಗಾನಂದ ನಾಟಕಂ

ನಂಜನಗೂಡು ಅನಂತನಾರಾಯಣ ಶಾಸ್ತ್ರಿ

ಬೆಲೆ: ೧ ರೂಪಾಯಿ]

ಕರ್ಣಾಟಕ

ನಾಗಾನಂದ ನಾಟಕಂ

ಕರ್ಣಾಟಕ ಪಂಡಿತ

ನಂಜನಗೂಡು ಅನಂತನಾರಾಯಣ ಶಾಸ್ತ್ರಿ

ಗಳವರಿಂದ ವಿರಚಿತವಾದುದು

ನಾಲ್ಕನೆಯ ಮುದ್ರಣ 1,000 ಪ್ರತಿಗಳು

೧೯೪೩

ಉಪೋದ್ಘಾತ

ಶ್ರೀಮಚ್ಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ. ಅವರು ತಮ್ಮ ದೇಶದಲ್ಲಿ ಕರ್ಣಾಟಕ ಭಾಷಾರಮಣಿಗುಂಟಾಗುತ್ತಿರುವ ಅತಿ ಶೋಚನೀಯವಾದ ಕ್ಷಯಾವಸ್ಥೆಯನ್ನು ಹೇಗಾದರೂ ಪರಿಹರಿಸಬೇಕೆಂದು ಚಿಂತಿಸಿ, ನಾಟಕವೆಂಬುದು ಕರ್ಣಾಟಕ ಭಾಷೆಯಲಿಲ್ಲದಿದ್ದರೂ ಅದನ್ನು ನೂತನವಾಗಿ ನಿರ್ಮಿಸಿ 'ಕರ್ಣಾಟಕನಾಟಕ ನಿರ್ಮಾಪಕರು' ಎಂಬ ಬಿರುದನ್ನು ಸಂಪಾದಿಸಿಕೊಂಡಿರುವರಷ್ಟೆ? ಈಗ ಇವರಿಂದ ಪ್ರೇರಿತನಾದ ನಾನು ಮಹಾ ಕವಿಯಾದ ಶ್ರೀಹರ್ಷ ಮಹಾರಾಜನಿಂದ ಸಂಸ್ಕೃತ ಭಾಷೆಯಲ್ಲಿ ರಚಿಸಲ್ಪಟ್ಟಿದ್ದ 'ನಾಗಾನಂದ'ವೆಂಬ ನಾಟಕವನ್ನು ಕನ್ನಡಿಸಿದೆನು. 'ನಾಗ ಎಂದರೆ ಸರ್ಪಗಳನ್ನು—ಆನಂದ ಎಂದರೆ ಸಂತೋಷಪಡಿಸುವುದು' ಎಂಬರ್ಥ. ಇದನ್ನು ನಿರ್ಮತ್ಸರತೆಯಿಂದ ಆಮೂಲಾಗ್ರವಾಗಿ ನೋಡಿ ಅಲ್ಲಲ್ಲಿ ಕೆಲವು ಸಂಗತಿಗಳನ್ನು ತಿಳಿಸಿದ ಕರ್ಣಾಟಕ ಕಾವ್ಯಮಂಜರಿ ಎಡಿಟರಾದ ಮ|| ರಾ|| ಎಸ್. ಜಿ. ನರಸಿಂಹಾಚಾರ್ಯರಿಗೂ, ಕರ್ಣಾಟಕ ಪಂಡಿತರಾದ ಕಾನಕಾನಹಳ್ಳಿಯ ವರದಾಚಾರ್ಯರಿಗೂ, ಶ್ರೀಮನ್ಮಹಾರಾಜರವರ ಕಾಲೇಜ್ ಕರ್ಣಾಟಕ ಪಂಡಿತರಾದ ಕರಿಬಸವಶಾಸ್ತ್ರಿಗಳಿಗೂ, ಗೌರ್ನಮೆಂಟ್ ಕನಡಾಸ್ಕೂಲ್ ಹೆಡ್ಮಾಸ್ಟರ್ ಬಿ. ಮಲ್ಲಪ್ಪನವರಿಗೂ, ಲೋಕೋಪಕಾರಾರ್ಥವಾಗಿ ಪ್ರತಿಮಾಸದಲ್ಲಿಯೂ ಪ್ರಕಟಿಸುವ ಗ್ರಂಥಮಾಲೆಯಲ್ಲಿ ನನ್ನ ಗ್ರಂಥವನ್ನೂ ಮುದ್ರಿಸಿ ಪ್ರೋತ್ಸಾಹಪಡಿಸಿದ ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಮ|| ರಾ|| ಎಂ. ಶಾಮರಾವ್, ಎಂ.ಎ., ಯವರಿಗೂ ಅತ್ಯಂತ ಕೃತಜ್ಞನಾಗಿರುವೆನು. ಇದರಲ್ಲಿ ನನ್ನ ಪ್ರಮಾದದಿಂದ ವಿದ್ವತ್ಸಮ್ಮತಗಳಾದ ಇನ್ನಾವ ತಪ್ಪುಗಳು ಬಿದ್ದಿದ್ದರೂ ಗುಣಜ್ಞರು ದಯವಿಟ್ಟು ಅವುಗಳನ್ನು ನನಗೆ ತಿಳಿಸಿದರೆ ಕೃತಜ್ಞತೆಯಿಂದ ಮುಂದಣ ಮುದ್ರಣದಲ್ಲಿ ನೇರ್ಪಡಿಸುವೆನು.

ನಂಜನಗೂಡು ಅನಂತನಾರಾಯಣಶಾಸ್ತ್ರಿ,

ಕೃಷ್ಣರಾಜಮೊಹಲ್ಲಾ, ಮೈಸೂರು.

ನಾಲ್ಕನೆಯ ಮುದ್ರಣದ ಪೀಠಿಕೆ

ನನ್ನ ಜ್ಯೇಷ್ಠ ಸಹೋದರರಾದ ನಂಜನಗೂಡು ಅನಂತನಾರಾಯಣ ಶಾಸ್ತ್ರಿಗಳವರಿಂದ ಕನ್ನಡಿಸಲ್ಪಟ್ಟ ಈ ನಾಟಕವು ಮೈಸೂರು ಮತ್ತು ಮದರಾಸು ವಿಶ್ವವಿದ್ಯಾಪೀಠಗಳಿಂದ ಶ್ರೇಷ್ಠ ವರ್ಗದ ಕರ್ಣಾಟಕ ನಾಟಕ ಶ್ರೇಣಿಯಲ್ಲಿ ಸ್ಥಾನಪಡೆದಿರುವುದರಿಂದ ಬಿ.ಎ. ಮುಂತಾದ ಪ್ರೌಢ ವಿದ್ಯಾರ್ಥಿಗಳಿಗೆ ಪದೇ ಪದೇ ಪಠ್ಯಗ್ರಂಥವಾಗಿ ನಿಯಮಿಸಲ್ಪಡುತ್ತಿರುವುದು. ಇದರಿಂದ ನನ್ನ ಆ ಪೂಜ್ಯ ಭ್ರಾತೃಗಳು ಕರ್ಣಾಟಕದಲ್ಲಿ ಯಶಶ್ಶರೀರಿಗಳಾಗಿ ಪ್ರಕಾಶಿಸುತ್ತಿರುವುದು ನಮ್ಮ ಸಂತತಿಗೊಂದು ಹೆಮ್ಮೆಯನ್ನು ಉಂಟುಮಾಡುವ ಸಂಗತಿಯಾಗಿದೆ.

ಇದರ ನಾಲ್ಕನೆಯ ಮುದ್ರಣವು ಮಹಾರಾಜಾ ಕಾಲೇಜು ಕರ್ಣಾಟಕ ಸಂಘದ ಪ್ರೋತ್ಸಾಹ ಬಲದಿಂದ ಪ್ರಕಟವಾಯಿತು. ಈ ಪರಮೋಪಕಾರಕ್ಕಾಗಿ ನಾನು ಕರ್ಣಾಟಕ ಸಂಘದ ಅಧಿಕಾರಿಗಳಿಗೆ ಚಿರಋಣಿಯಾಗಿರುತ್ತೇನೆ.

ಅಂದವಾಗಿ ಸಕಾಲದಲ್ಲಿ ಮುದ್ರಿಸಿಕೊಟ್ಟ ಮೈಸೂರು ವೆಸ್ಲಿಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್ ಅಧಿಕಾರಿಗಳಿಗೆ ನನ್ನ ಕೃತಜ್ಞತೆಯನ್ನು ಈ ಮೂಲಕ ಸಮರ್ಪಿಸಿರುತ್ತೇನೆ.

ಗ್ರಂಥ ಕರ್ತರ ಸಹೋದರ

ತಾ. 1—8—1943.

ಆಸ್ಥಾನ ಮಹಾ ವಿದ್ವಾನ್, ನಂ. ಶ್ರೀಕಂಠಶಾಸ್ತ್ರಿ

[illegible]
[illegible]
[illegible]
[illegible]
[illegible]

[illegible]

[illegible]

with [illegible]'s
warnin[illegible]

[illegible]
[illegible]
[illegible]
[illegible]
[illegible]

[illegible]

[illegible]

[illegible]

[illegible]

ಕರ್ಣಾಟಕ

ನಾಗಾನಂದ ನಾಟಕಂ

ಪ್ರಥಮಾಂಕಂ

ವೃತ್ತಂ || ಧ್ಯಾನವ್ಯಾಜದಿನಾವಳಂ ನೆನೆವೆ ಪೇಳ್ ಪೂಗೋಲ್ಗೆ ಪಕ್ಕಾಗಿ ಬಂ | ದೀ
ನಮ್ಮಂನಸುನೋಡುಕಣ್ದೆರೆದಿದೇಂ ಕಾವಾತನೇಕಾಯೆಯಾ ? || ನೀನೆಂ
ತಪ್ಪೆ ? ದಯಾಳು ನಿರ್ಘೃಣರದಾ ರ್ನಿನ್ನಿಂದಮೆಂದೀರ್ಷ್ಯೆಯಿಂ | ದಾನಂ
ಗಾಂಗನೆಯುಕ್ಕ್ಕಳಾಡಿದನಘಂ ಕೈಗಾಯ್ಗೆ ಮಾಯಾಸುತಂ || ೧ ||

ವೃತ್ತಂ || ನನೆವಿಲ್ಲೇರಿಸೆಕಾವನುರ್ಬಿಪಳಹಂ ಸೂಳೈಸೆತತ್ಸೇನೆ:ಪು | ರ್ವಿನಕೊಂಕ್ತಾಗು
ಳಿಕಂಪನಂ ನಗೆಬೆಡಂಗಾಂತಪ್ಸರೋರಾಜಿ ಚ || ಕ್ಕನೆ ಮೇಲ್ವಾಯಲ
ಡಂಗದಾರ ತಪದಿಂ ಸಿದ್ಧಾಳಿಕುಂಬಿಟ್ಟುದಿಂ | ದ್ರನವಂ ಪೊಂಪುಳಿವೋ
ದನಚ್ಚರಿಯೊಳಾತ್ತಂ ನೀಡುಗಾನಂದಮಂ || ೨ ||

ಸೂತ್ರಧಾರ—(ನಾಂದ್ಯಂತದಲ್ಲಿ ಪ್ರವೇಶಿಸಿ) ಸಾಕು, (ಸಾಕು, ನಿಲ್ಲಿಸು,) ಅತಿ ವಿಸ್ತರದಿಂದೇನುಪ್ರಯೋಜನ? ಈಗ ನಮ್ಮೊಡೆಯನಾದ ಶ್ರೀಹರ್ಷಮಹಾರಾಜನು ಅಪೂರ್ವಕಥಾಸಂದರ್ಭಗಳಿಂದ ಅಲಂಕೃತವಾಗಿಯೂ, ವಿದ್ಯಾಧರರಾಜನ ಚರಿತ್ರೆಯಿಂದ ಮನೋಹರವಾಗಿಯೂ, ಇರುವ ನಾಗಾನಂದವೆಂಬ ನಾಟಕವನ್ನು ಮಾಡಿರುವನೆಂದು ಜನಗಳಾಡುತ್ತಿದ್ದ ಮಾತು ಕಿವಿಗೆ ಬಿತ್ತೇ ಹೊರತು ಅದರ ಅಭಿನಯವನ್ನು ಬೇರೆ, ಕಣ್ಣಾರೆ ನೋಡಲಿಲ್ಲ. ಆದುದರಿಂದ ಆ ರಾಜನ ವಿಷಯದಲ್ಲಿ ನಿನಗಿರ ತಕ್ಕ ಗೌರವದಿಂದಾಗಲೀ, ಅಲ್ಲದಿದ್ದರೆ ನಮ್ಮಲ್ಲಿ ಅನುಗ್ರಹಬುದ್ಧಿಯಿಂದಾಗಲೀ, ಈ ವಸಂತೋತ್ಸವದಲ್ಲಿ ನೀನು ಆ ನಾಟಕವನ್ನು ಪ್ರಯೋಗಾನುಸಾರವಾಗಿ ಅಭಿನಯಿಸಬೇಕೆಂದು ಶ್ರೀಹರ್ಷಮಹಾರಾಜನ ಪಾದಸೇವೆಗಾಗಿ ನಾನಾ ದಿಗ್ದೇಶಗಳಿಂದ ಬಂದಿರುವ ರಾಜಸಮೂಹವು ಬಹುಮಾನಪುರಸ್ಸರವಾಗಿ ನನಗೆ ನಿಯಮಿಸಿರುವುದು. ಆದುದರಿಂದ ಈಗ ವೇಷಗಳನ್ನು ಸಿದ್ಧಪಡಿಸಿ ನನ್ನ ಕೋರಿಕೆಯು ಕೈಗೂಡುವ ಹಾಗೆ ಮಾಡಿಕೊಳ್ಳುವೆನು. ಸಭಾಸದರ ಮನಸ್ಸುಗಳಂತೂ ನನಗಧೀನಗಳಾಗಿಯೇ ಇರುವುವೆಂದು ನನ್ನ ಮನಸ್ಸಿಗೆ ಚೆನ್ನಾಗಿ ನಂಬಿಕೆಯುಂಟಾಗಿರುವುದು, ಏಕೆಂದರೆ:—

ವೃತ್ತಂ || ಕವಿಯುಂ ಶ್ರೀಹರ್ಷದೇವಂ ಸಭೆಯುಮಿದು ಗುಣಗ್ರಾಹಿ ನಾವುಂ
ಮಹಾನಾ| ಟ್ಯವಿದರ್ವಿದ್ಯಾಧರೋರ್ವೀಪತಿಯ ಚರಿತಮುಂ ಲೋಕಕಾ
ಸಂದಕಂದಂ:|| ಇವರಲ್ಲೊಂದೊಂದೆ ನಮ್ಮಿಷ್ಟಮನಳವಡಿಸಲ್ಸಾಲ್ಗುಮೇ
ನೆಂಬೆನಾಂಮೇ| ಳವಿಸರ್ಕುಂ ಸದ್ಗುಣಂಗಳ್ ಸಮಸಮಯದೆ ಮತ್ಪೂ
ರ್ವಪುಣ್ಯಂಗಳಿಂದಂ || ೩ ||

ಆದುದರಿಂದ ನನ್ನ ಹೆಂಡತಿಯನ್ನು ಕರೆದು ಸಂಗೀತವನ್ನು ಪ್ರಾರಂಭಿಸುವೆನು. (ಎಂದು ಎರಡು ಮೂರು ಹೆಜ್ಜೆ ಇಟ್ಟು ತೆರೆಗಿದಿರಾಗಿ ನೋಡಿ) ಆರ್ಯಳೇ!

ನಟಿ—(ಕಣ್ಣೀರನ್ನು ಸುರಿಸುತ್ತಾ ಬರುವಳು.)

ಸೂ—ಆರ್ಯಳೆ, ನಾಗಾನಂದ ನಾಟಕವನ್ನು ಅಭಿನಯಿಸಬೇಕೆಂದು ನಾನು ಯೋಚನೆಮಾಡಿರುವಾಗ ನೀನು ನಿಷ್ಕಾರಣವಾಗಿ ಹೀಗೇಕೆ ಅಳುವೆ?

ನಟಿ—ಆರ್ಯನೆ, ನಾನು ಹೇಗೆತಾನೆ ಅಳದಿರಲಿ? ಏಕೆಂದರೆ ನಿನ್ನ ತಾಯಿತಂದೆಗಳಿಬ್ಬರೂ ಮುಪ್ಪಿನಿಂದ ಬೇಸತ್ತು 'ನೀನು ಗೃಹಕೃತ್ಯಗಳನ್ನು ನಿರ್ವಹಿಸಲು ಶಕ್ತನಾಗಿದ್ದೀಯೆ' ಎಂದು ಆಲೋಚಿಸಿ ತಪೋವನಕ್ಕೆ ಹೊರಟುಹೋದರು.

ಸೂ—ಏನು! ಅವರು ನನ್ನನ್ನೂ ಬಿಟ್ಟುಹೋದರೇ! (ಯೋಚಿಸಿ) ಈಗ ನಾನೇನು ಮಾಡುವುದು; ಒಳ್ಳೇದು, ಅಥವಾ ನಾನು ನಮ್ಮ ಪಿತೃಗಳ ಪಾದಸೇವಾಸುಖವನ್ನು ಬಿಟ್ಟು ಮನೆಯಲ್ಲಿ ಹೇಗಿರಲಿ?

ಕಂದಂ || ಪರಿವಿಡಿಯಿಂದೊದವಿರ್ಪೈ |
ಸಿರಿಯಂ ತೊರೆಯುತ್ತೆ ಪಿತೃಗಳಂ ಪರಿಚರಿಸಲ್ ||
ತೆರಳ್ದಪೆನ್ನಾನುಮರಣ್ಯಾ |
ಕ್ಕಿರದೀ ಜೀಮೂತವಾಹನನ ತೆರದಿಂದಂ || ೪ ||

(ಎಂದು ಹೊರಟುಹೋದರು.)

(ಇದು ಪ್ರಸ್ತಾವನೆ)

(ಅನಂತರ ಜೀಮೂತವಾಹನನು ವಿದೂಷಕನೊಡನೆ ಪ್ರವೇಶಿಸಿ)

ವೃತ್ತಂ || ಅರಿವೆಂ ರಾಗದ ಪುತ್ತಿದೆಂದುಮರಿವೆಂ ನೀರ್ಗುಳ್ಳೆಪಾಂಗಿಂದಿದ| ಸ್ಥಿರ
ಮೆಂದುಂ ಸದಸದ್ವಿವೇಕಮನಿದೇಪಾಳ್ಗೆಯ್ವುದೆಂದುಂ ವಸುಂ || ಧರೆಯೊ
ಳ್ಕಾಣದರರ್ಪರೇ ಪರಗಿದಿಂತೀಡಾದೊಡಂ ಭಕ್ತಿಯಿಂ| ಗುರುಶುಶ್ರೂಷೆ
ಯೊಳಿಂತುಟೇ ಕಳೆಯೆ ತಾರುಣ್ಯಂ ಮದನಾನಂದದಂ || ೫ ||

ವಿದೂಷಕ—(ಕೋಪದಿಂದ) ಅಯ್ಯೋ, ಇದೇನು, ಸ್ವಲ್ಪವೂ ವಿಷಾದಪಡದಿರುವೆ! ಇಷ್ಟು ವಯಸ್ಸಾದರೂ ಇನ್ನೂ ಬದುಕಿರುವ ಕಂಗಳರಾದ ಆ ತಾಯಿ

Variants [illegible]

[illegible]
[illegible]
[illegible]
[illegible] ॥

[illegible]

[illegible] ॥ [illegible]

[illegible]
[illegible]
[illegible] ॥

[illegible] (
[illegible]
[illegible]
[illegible] ॥

which?

who does not know that if arise is the Knowing of ...

Yet how ... blame ... secure ... deserved ... spirit in the ... service of my language

* [illegible]
[illegible]

[illegible]

[illegible]

[illegible]
[illegible]
[illegible]
[illegible]

[illegible] — In the [illegible] 3 words

[illegible]
[illegible]
[illegible]
[illegible]

[illegible]
[illegible]

[illegible]

What [illegible] is to Connor: the [illegible]

1165 Rat I 10. } King's Satisfn.
HPriy I 6. } x : Kingdom Councillors are retained
Ratnavali

ತಂದೆಗಳಿಗಾಗಿ ವಿಜನವಾದ ಈ ವನದಲ್ಲಿ ವಾಸಮಾಡುತ್ತಾ ದುಃಖಪಡುವುದೆ? ಬಹಳ ಚೆನ್ನಾಯಿತು. ನಾನು ಹೇಳುವ ಮಾತನ್ನು ಸ್ವಲ್ಪ ಲಾಲಿಸಿ ಆ ಪಿತೃಪಾದಸೇವೆಯನ್ನು ಬಿಟ್ಟು ಸರ್ವಸೌಖ್ಯಪೂರ್ಣವಾದ ರಾಜ್ಯದಲ್ಲಿ ಸುಖವಾಗಿರು.

ಜೀಮೂತವಾಹನ—ನೀನು ಹೀಗೆ ಹೇಳುವುದು ಯುಕ್ತವಲ್ಲ. ಏಕೆಂದರೆ,

ವೃತ್ತಂ|| ಇರೆ ಸಿಂಹಾಸನದಲ್ಲಿ ತಂದೆಯಿದಿರಲ್ಲಿರ್ಪಂತೆವೊಲ್ ಕಾಣ್ಬೆನೇ | ಧರೆಯೊ
ಳ್ತಂದೆಯ ಕಾಲ್ಗಳೊತ್ತುವೆನಗಾರಾಜಾಳಿಯೊಳ್ ಸೌಖ್ಯಮೇ || ಗುರು
ಭುಕ್ತೋಜ್ಝಿತದಲ್ಲಿತೋರ್ಪ ಸೊಗಮಾಮೂಲೋಕದಲ್ಲಿರ್ಪುದೇ | ಬರೆ
ರಾಜ್ಯಂ ಶ್ರಮಮಲ್ತೆ ತಾತರಹಿತಂಗಾರಾಜ್ಯದಿಂದೇಂಫಲಂ ||೬||

ವಿದೂ—(ಆತ್ಮಗತಂ) ಓಹೊ! ಈತನಿಗೆ ಪಿತೃಪಾದಸೇವಾನುರಾಗವು ಬಲವತ್ತರವಾಗಿರುವುದು (ಎಂದು ಯೋಚಿಸಿ) (ಆದುದರಿಂದ ಹೀಗೆ ಹೇಳುವೆನು.) (ಪ್ರಕಾಶಂ) ಅಯ್ಯಾ ಮಿತ್ರನೆ! ನೀನು ಮಾಡತಕ್ಕ ಕಾರ್ಯಗಳು ಇನ್ನೂ ಅನೇಕಗಳಿರುವುವೆಂದು ಹೇಳಿದೆನೇ ಹೊರತು ಸೌಖ್ಯವನ್ನು ಮಾತ್ರ ಉದ್ದೇಶಿಸಿ ಹೇಳಲಿಲ್ಲ.

ಜೀಮೂತವಾ—(ಸ್ವಲ್ಪನಕ್ಕು) ಮಿತ್ರನೆ! ನಾನು ಮಾಡಬೇಕಾದ ಕೆಲಸವನ್ನೆಲ್ಲಾ ಮಾಡಿಯೇ ಇರುವೆನಲ್ಲವೆ? ನೋಡು.

ವೃತ್ತಂ|| ಜನಮಂ ನಲ್ಮೆಯಮಾರ್ಗದೊಳ್ನಿರಿಸಿದೆಂ ಸಂತೋಷಮಿರ್ಪಂತೆವೋ | ಲನು
ಗೆಯ್ದೆಂ ಸುಜನಗ್ಗೆಸಂಟರುಮನಾನೆನ್ನನ್ನರಂಗೆಯ್ದೆನೊ || ಲ್ದುನೆಲಕ್ಕಂ
ತವೆಕಾವುಗೆಯ್ದೆ ಸೆರೆವರ್ಗೊಂದಕ್ಕೆಪತ್ತೀವೆ ಕ | ಲ್ಪನಗಂಗೊಟ್ಟೆನದಾವು
ದಿನ್ನೆಗಳ್ವುದೋಪೇಳ್ನಿನ್ನಭಿಪ್ರಾಯಮಂ ||೭||

ವಿದೂ—ಅಯ್ಯಾ, ನಿನ್ನ ಶತ್ರುವಾದ ಆ ದುಷ್ಟಮತಂಗನು ಅತಿ ಸಾಹಸಿ. ಅವನು ಈಗ ಸಮೀಪದಲ್ಲಿಯೇ ಇರುವುದರಿಂದ ನಿನ್ನ ರಾಜ್ಯವನ್ನು ನೀನು ನಿನ್ನ ಮುಖ್ಯಮಂತ್ರಿಯ ವಶಮಾಡಿ ಬಂದಿದ್ದಾಗ್ಯೂ, ಅದಕ್ಕೆ ಬೇರೆ ಕುಂದಕವುಂಟಾಗದಿರಲಾರದು.

ಜೀಮೂತ—ಏನು ಮತಂಗನು ರಾಜ್ಯವನ್ನು ಆಕ್ರಮಿಸುವನೆಂದು ಯೋಚಿಸುವೆಯೊ? ಆದರೇನು? ನಾನು ನನ್ನ ದೇಹಮೊದಲುಗೊಂಡು ಎಲ್ಲವನ್ನೂ ಪರಾರ್ಥವಾಗಿಯೇ ಕಾಪಾಡುತ್ತಿರುವೆನಲ್ಲವೆ? ಆದರೆ ಇನ್ನೂ ಕೆಲವು ಪದಾರ್ಥಗಳನ್ನು ನೀನು ಏತಕ್ಕೆ ಪರರಿಗೆ ಕೊಡುವುದಿಲ್ಲವೆಂದು ನೀನು ನನ್ನನ್ನು ಆಕ್ಷೇಪಿಸಬಹುದು. ಆ ವಿಷಯದಲ್ಲಿ ನಮ್ಮ ಪಿತ್ರಾಚಾರವನ್ನೇ ಅನುಸರಿಸಿರುವೆನು. ಈಗ ಈ ಕಥೆಯಿಂದ ಫಲವೇನು? ತಂದೆಯು ಆಜ್ಞೆಯಾದಂತೆ ನಡೆಯುವುದೇ ಒಳ್ಳೇದು. "ಮಗೂ, ಜೀಮೂತವಾಹನ, ಅನೇಕ ದಿನಗಳಿಂದ ನಾವು ಒಂದೇ ಸ್ಥಳದಲ್ಲಿ ವಾಸಮಾಡು

ತ್ತಿರುವಕಾರಣ ಈ ಪ್ರದೇಶದಲ್ಲಿದ್ದ ದರ್ಭೆಗಳೂ, ಸಮಿತ್ತುಗಳೂ, ಪುಷ್ಪಗಳೂ ಕಂದಮೂಲ, ಫಲಾದಿಗಳೂ, ಎಲ್ಲವೂ ಮುಗಿದುಹೋದುವು. ಆದುದರಿಂದ ಮಲಯ ಪರ್ವತಕ್ಕೆ ಹೋಗಿ ವಾಸಮಾಡುವುದಕ್ಕೆ ಯೋಗ್ಯವಾಗಿರುವ ಒಂದಾನೊಂದು ಆಶ್ರಮವನ್ನು ನೋಡಿಕೊಂಡು ಬಾ" ಎಂದು ನಮ್ಮ ತಂದೆಯು ಆಜ್ಞಾಪಿಸಿರುವನು. ಆದುದರಿಂದ ಮಲಯಪರ್ವತಕ್ಕೆ ಹೋಗೋಣ ನಡೆ.

(ಎಂದಿಬ್ಬರೂ ಹೊರಡುವರು.)

ವಿದೂ—ಅಯ್ಯಾ ಮಿತ್ರನೆ! ಸೊಂಪಾಗಿ ಸಾಂದ್ರವಾಗಿರುವ ಚಂದನವನಗಳಲ್ಲಿ ಸಂಚರಿಸಿ ಅಧಿಕ ಪರಿಮಳವುಳ್ಳದ್ದಾಗಿಯೂ, ವಿಷಮಗಳಾದ ತಟಗಳಲ್ಲಿ ಬಿದ್ದು ಬಿದ್ದು ತಣ್ಣಗಿರುವ ಗಿರಿನದೀ ಜಲಬಿಂದುಗಳಿಂದ ಶೀತಳವಾಗಿಯೂ, ಇರುವ ಮನೋಹರವಾದ ಈ ಮಲಯಮಾರುತವು ಪ್ರಥಮಸಂಗಮಾನುರಾಗಿಣಿಯಾದ ಪ್ರಿಯಳ ಕಂಠಾಲಿಂಗನದಂತೆ ನಿನ್ನ ಮಾರ್ಗಾಯಾಸವನ್ನು ಹೋಗಲಾಡಿಸಿ ರೋಮಾಂಚವನ್ನುಂಟುಮಾಡುತ್ತಿರುವುದು.

ಜೀಮೂತ—(ನೋಡಿ) ಓಹೋ ಇದೇನು! ಆಗಲೇ ಮಲಯಪರ್ವತಕ್ಕೆ ಬಂದೆವು. (ನೋಡಿ) ಆಹಾ! ಈ ಮಲಯಪರ್ವತವು ಅತಿ ರಮಣೀಯವಾಗಿರುವುದು, ಇದೋ ನೋಡು!

ವೃತ್ತಂ || ಮದದಿಂ ತೀಂಟೆತ್ತಿ ಗಂಡಸ್ಥಳಮನೊರಸೆ ದಿಗ್ದಂತಿಗಳ್ ಸೋರ್ವಬಾವ |
ನ್ನದೊಳಂ, ತಳ್ಪೊಯ್ವಮುನ್ನೀರ್ದೆರೆದನಿಗುಡುವೀಕಂದರಾಗಹ್ವರಪ್ರಾಂ ||
ತದೊಳಂ, ಪೋತರ್ಪಸಿದ್ಧಾಂಗನೆಯರ ಚರಣಾಲಕ್ತಕಂ ತಳ್ತಮುಕ್ತಾ |
ಶ್ಮದೊಳಂ, ಚೆಲ್ವಾದ ಸೈದ್ಧಂ ಮಲಯಮಿದೆನಗೌತ್ಸುಕ್ಯಮಂ ಮಾಳ್ಪು
ದೊಂದಂ || ೮ ||

ಆದುದರಿಂದ ಈ ಪರ್ವತವನ್ನು ಹತ್ತಿ ವಾಸಯೋಗ್ಯವಾದ ಆಶ್ರಮವನ್ನು ನೋಡೋಣ ಬಾ.

(ಎಂದಿಬ್ಬರೂ ಪರ್ವತವನ್ನು ಹತ್ತುವರು.)

ಜೀಮೂತ—(ಬಲಗಣ್ಣು ಹಾರಿದಂತೆ ನಟಿಸಿ)

ಕಂದಂ || ಅದಿರ್ವುದು ಬಲಗಣ್ಣೀಗಳ್ |
ಹೃದಯಮಿದಾಶಿಸದು ಫಲಮನೊಂದುಮನೆತ್ತಂ ||
ತೊದಳಾಗದು ಮುನಿಗಳ ನುಡಿ
ಯಿದು ಮುಂದಣ ಫಲಮನೆನಗದೇಂ ಸೂಚಿಪುದೋ || ೯ ||

1- [illegible]

cf [illegible] : Garden of mountain h[illegible] trees & flowers
[illegible] : [illegible]

[illegible]:

wall like chests .. [illegible]

[illegible]

school. valley . cave.

[illegible]

(head) Peak Rocks Summit = [illegible]

[illegible]

[illegible]

[illegible] ॥

cf sak

[illegible]

[illegible] ॥

[illegible]

[illegible]

[illegible] out of ... for [illegible]

not very broad

[illegible]

[illegible]

[illegible]

[illegible]

[illegible] not brought out

nice phrase

[illegible]

[illegible]

[illegible]

[illegible]

[illegible] ॥

ವಿದೂ—ಮಿತ್ರನೇ, ನಿನಗೊಂದು ಶುಭವು ಜಾಗ್ರತೆಯಾಗಿ ಕೈಗೂಡುವುದೆಂದು ಸೂಚಿಸುತ್ತಿರುವುದು.

ಜೀಮೂತ—ನೀನು ಹೇಳಿದ ಹಾಗೆಯೇ ಇರಬಹುದು.

ವಿದೂ—ಮಿತ್ರನೇ! ಮನೋಹರವಾಗಿ ಒತ್ತೊತ್ತಾಗಿರುವ ಎಲೆಗಳುಳ್ಳ ಮರಗಳಿಂದಲೂ, ಹೋಮಧೂಮದ ಸುವಾಸನೆಯಿಂದಲೂ, ಮಾರ್ಗದಲ್ಲಿ ಭಯವಿಲ್ಲದೆ ಸುಖವಾಗಿ ಮಲಗಿರುವ ಹುಲ್ಲೆಯ ಮರಿಗಳಿಂದಲೂ, ಒಪ್ಪುತ್ತಿರುವ ಈ ಪ್ರದೇಶವು ತಪೋವನದಂತೆ ಕಾಣಿಸುತ್ತಿರುವುದು.

ಜೀಮೂತ—ಚೆನ್ನಾಗಿ ಹೇಳಿದೆ, ಇದು ತಪೋವನವೇ ಸರಿ. ಇದೋ ಇಲ್ಲಿ

ವೃತ್ತಂ || ನಗದೊಳ್‌ವಲ್ಕಕೆ ನಾರ್ಗಳಿಲ್ಲಿ ಕಿರಿದೆತ್ತಿರ್ಕುಂ ಪಸದಂಗೆಟ್ಟುಗುಂ| ಡಿಗೆಗಳ್ಸೀ
ಳ್ದನೆ ಸೀಳ್ದುಕಾಣ್ಬವೆನಸುಂ ಸ್ವಚ್ಛೋದಕಂ ಸೈರ್ಝರಂ || ಬಗೆವಂದಿ
ರ್ಪುದು ಕಿಳ್ತುಪೋದ ಕತದಿಂದೀಮೇಖಲಾಮೌಂಜಿಗಳ್| ತೆಗೆದಿಟ್ಟಿ
ರ್ಪುವು, ಕೇಳ್ದುಕೇಳ್ದು ಗಿಳಿಯುಂ ಸಾಮಂಗಳಂ ಪಾಡುಗುಂ || ೧೦ ||

ಆದುದರಿಂದ ಹೋಗಿ ನೋಡೋಣ ಬಾ.

(ಎಂದಿಬ್ಬರೂ ಆಶ್ರಮವನ್ನು ಪ್ರವೇಶಿಸುವರು.)

ಜೀಮೂತ—ಅಯ್ಯಾ, ಇದು ಆಶ್ಚರ್ಯವಲ್ಲವೇ? ನೋಡು, ಒಂದು ಕಡೆಯಲ್ಲಿ ತಮಗೆ ಸಂದೇಹ ಬಂದ ವೇದವಾಕ್ಯಗಳನ್ನು ವಿಚಾರಿಸುತ್ತಾ ತಪಸ್ವಿಜನಗಳು ಕುಳಿತಿರುವರು. ಮತ್ತೊಂದು ಕಡೆಯಲ್ಲಿ ವಟುಜನಗಳು ಅಧ್ಯಯನವನ್ನು ಹೇಳುತ್ತಾ ಹಸಿದಾದ ಸಮಿತ್ತುಗಳನ್ನು ಅಳತೆಗೆ ಸರಿಯಾಗಿ ತುಂಡುತುಂಡಾಗಿ ಕತ್ತರಿಸುತ್ತಿರುವರು. ಮತ್ತೊಂದು ಕಡೆಯಲ್ಲಿ ಮುನಿಕನ್ಯಕೆಯರು ಎಳಸಸಿಗಳ ಪಾತೆಗಳಿಗೆ ನೀರೆರೆಯುತ್ತಿರುವರು. ಇದರಿಂದ ಈ ತಪೋವನವು ಬಹು ಸೌಮ್ಯವಾಗಿಯೂ, ಮನೋಹರವಾಗಿಯೂ, ಇರುವುದಲ್ಲವೆ? ಇತ್ತಲಾದರೋ,

ವೃತ್ತಂ || ಮುಸುರುತ್ತಿಂಚರಮೆತ್ತಿ ಪಾಡೆ ಬವರಂ, ಮತ್ತಾಸ್ವಗತಂಗೇಳ್ವವೋ|
ಲೆಸೆಗುಂ ಪಣ್ಗಳ ಜೊಂಪೆ ಜಗ್ಗಿ ಬಡಿಯಲ್ ಬಲ್ಭಾರದಿಂ ಬಾಗಿ ವಂ ||
ದಿಸುವಂತಿರ್ಪುದು, ಸೂಸೆ ಪೂಮಳೆಯನಿಂದೊಲ್ದರ್ಘ್ಯವಿನಾವಂತೆ ರಂ|
ಜಿಸೆಗುಂ ಬಂದರಸಿಂತು ಸೇವಿಪುದನೆಂತೀಶಾಖಿಯುಂ ಕಲ್ತುವೋ! || ೧೧ ||

ಆದುದರಿಂದ ಈ ತಪೋವನವು ನಮಗೆ ವಾಸಯೋಗ್ಯವಾಗಿರಬಹುದೆಂದೆಣಿಸುವೆನು. ಇಲ್ಲಿ ವಾಸಮಾಡುವ ನಮಗೆ ಮುಂದಕ್ಕೆ ಸುಖವುಂಟಾಗಬಹುದು.

ವಿದೂ—ಎಲೈ ಮಿತ್ರನೇ! ಇದೇನು ನೋಡು, ತಮ್ಮ ಕೊರಲುಗಳನ್ನು ವಕ್ರವಾಗಿಟ್ಟುಕೊಂಡು ಮೆಲುಕು ಮಾಡುವುದನ್ನೂ ಬಿಟ್ಟು ಅರೆಗಚ್ಚಿದ ಹುಲ್ಲು

ಕೆಳಕ್ಕೆ ಬಿದ್ದಿದ್ದಾಗ್ಯೂ ತಿಳಿಯದೆ ಒಂದು ಕಿವಿಯನ್ನು ಮಾತ್ರ ಮೇಲಕ್ಕೆತ್ತಿ, ಕಣ್ಣುಗಳನ್ನು ಮುಚ್ಚಿ ಈ ಹುಲ್ಲೆಗಳು ಏನೋ ಕೇಳುವಂತೆ ಕಾಣುವುದು.

ಜೀಮೂತ—(ಕಿವಿಗೊಟ್ಟು ಕೇಳಿ)

ವೃತ್ತಂ || ತತ್ತತಾಸ್ಥಸಮನ್ವೈದಿ ಪತ್ತುಗಮಕಂಗಳ್ಮಂದ್ರತಾರಂಗಳ| ಲ್ಲೆತ್ತಂ
ಪೊಣ್ಮಿರೆ, ತುಂಬಿಯಿಂಚರದವೋಲ್ವೀಣಾರವಂ ತುಂಬಿರಲ್,|| ಚಿತ್ತಂ
ಗೊಳ್ವಪದಂಗಳಿಂ ಲಲಿತಮಾದೀಗೀತಮುಂ ಬಾಯವು| ಲ್ದುತ್ತಂ ಮೆಲ್ಲ
ಲಿಯಿಕ್ಕದಾಲಿಪ್ಪುವು ಮೆಯ್ಯಂ ಕೊಂಕಿಸೀಪುಲ್ಲೆಗಳ್ || ೧೨ ||

ವಿದೂ—ಎಲೈ ಮಿತ್ರನೆ! ಇವನ್ನು ಯಾರು? ತಪೋವನದಲ್ಲಿ ಗಾನಮಾಡುವನು.

ಜೀಮೂತ—ಅತಿ ಮೃದುವಾದ ಬೆರಲುಗಳಿಂದ ಮಿಾಟುತ್ತಿರುವ ಕಾರಣ ತಂತಿಗಳ ನಾದವು ಸ್ಫುಟವಾಗಿ ಕೇಳಿಸುವುದಿಲ್ಲ. ಗಾನವಾದರೋ ಅವ್ಯಕ್ತಮಧುರವಾಗಿಯೂ, ಬಹು ಸೂಕ್ಷ್ಮವಾಗಿಯೂ, ಇರುವುದು. ಆದುದರಿಂದ ನನಗೆ ಹೀಗೆ ತೋರುವುದು, (ಎಂದು ಬೆರಲಿನ ಕೊನೆಯಿಂದ ಸನ್ನೆಮಾಡಿ ತೋರಿಸಿ) ಈ ದೇವಾಲಯದಲ್ಲಿ ಯಾವಳೋ ಒಬ್ಬ ದೇವಸ್ತ್ರೀಯು ದೇವತಾಪೂಜೆಯನ್ನು ಮಾಡುತಾ ವೀಣೆಯನ್ನು ಬಾಜಿಸುತ್ತಿರುವಳು.

ವಿದೂ—ಮಿತ್ರನೆ! ನಡೆ, ನಾವೂ ಈ ದೇವಾಲಯವನ್ನು ನೋಡೋಣ.

ಜೀಮೂತ—ಒಳ್ಳೇ ಮಾತನ್ನು ಹೇಳಿದೆ; ದೇವತೆಗಳು ಪೂಜ್ಯರಲ್ಲವೆ; (ಎಂದು ಮುಂದೆ ಹೋಗಿ ಥಟ್ಟನೆ ನಿಂತು) ಮಿತ್ರನೆ! ಈ ಸ್ತ್ರೀಯು ಒಂದುವೇಳೆ ನಾವು ನೋಡತಕ್ಕವಳಲ್ಲವೋ, ಏನೋ, ಆದುದರಿಂದ ಈ ತಮಾಲವೃಕ್ಷದ ಪೊದರಿನಲ್ಲಿಯೇ ಮರೆಯಾಗಿದ್ದು ದೇವತಾದರ್ಶನಕಾಲವನ್ನು ನಿರೀಕ್ಷಣೆ ಮಾಡೋಣ.

(ಎಂದಿಬ್ಬರೂ ತಮಾಲವೃಕ್ಷದ ಪೊದರಿನಲ್ಲಿಯೇ ಮರೆಯಾಗಿರುವರು.)

ಮಲಯವತಿ—ಶೌರಿಸಹೋದರಿ ವಿಕಸಿತ|
ಸಾರಸಕೇಸರಪರಾಗಗೌರೀಗೌರೀ ||
ಕಾರುಣ್ಯದೆ ನೀನಿಚ್ಛಾ|
ಪೂರಣಮಪ್ಪಂತೆ ವರ್ದನನೆಸಗುವುದೀಗಳ್ || || ೧೩ ||

ಜೀಮೂತ—(ಕಿವಿಗೊಟ್ಟು ಕೇಳಿ) ಆಹಾ, ಏನು ಗಾನ! ಏನು ವಾದ್ಯ!

ವೃತ್ತಂ || ಈರೈದುಂ ಗಮಕಂಗಳುಲ್ಬಣತೆಯುಂ ತಾಳ್ದಿರ್ಪುವೀಗಾನದೊಳ್ |
ಮೂರುಂ ಮಧ್ಯ ವಿಲಂಬಿತದ್ರುತಲಯಂಗಳ್ ಬೇರೆಬೇರೊಪ್ಪುಗುಂ ||
ಮೂರುಂ ಬೆನ್ನನೆ ಬಂದುವಿಲ್ಲಿವರಗೋಪುಚ್ಛಾದಿವಿಚ್ಛಿತ್ತಿಗಳ್ | ಮೂರುಂ
ವಾದ್ಯ ವಿಧಾನವೈದೆ ಮೆರೆಗುಂ ತಂತ್ರೀಸ್ವನಾಧಾರದಿಂ || ೧೪ ||

కఠిన ద్వైతత గంధరా, [illegible] వినిర్గత దర్శయంత సభ్య: [illegible]
నిజాన్ను వక్త దత్త [illegible]
[illegible] ... [illegible]

(స్ఫీతి స్ఫురంజన ధారానా దరాధేర అప్యత్ర లభ్యమానా
విష్టిష్టై ప్రేత నాభ్య లంబిత రసజ్ఞన్ని స్త్రీ ధారాం లతా:
సావిభ్య ప్రముఖా: ప్రసేరా అకతా: విప్రేరవి సంపాదితా:
శ్రీతరీ ద్వైజన రోధ వాద్యవిధయ: సంయత్ప్రయోగ దర్శితా:)

variants [illegible] (Ban) Truth
[illegible] విప్రర ప్రై ప్య దధానం ప్రేంచిత నకరా సాక్షి కార్యసంప్రా
Sounding [illegible] విప్ర వినప్య విసంబ్య [illegible] తంత్రే స్పృతీ
వతే సన్నిగితాల స్మిత రత్న [illegible]
Best- గ్యజవ్యంగా: సరంగా: [illegible] ||
[[illegible] - [illegible]]
అస్మిన్నాయ తనే దేవతాం ఆరాధయంత్యా [illegible]
[illegible] ||

Suggestion from [illegible]

జ-
... [illegible] ప్రపద్య అనర్హతాయాం స్త్రీజనో భవతి [illegible]
తదా నాం తసావనాన్తే తేన అన్తరితే దేవతారాధనా [illegible]
ప్రతిపాలయన్ స:
(తత: ప్రవిశతి [illegible] పాదయతిరే
[illegible])
స- (గా[illegible]) [illegible]
[illegible] [illegible] భవతి [illegible]

నా- (Man of sense) స్ఫీతే స్ఫురంజన ద్వైతేనా దరాధరేనాప్యత్ర లభ్యమానా
[illegible] విష్టిష్టైః ప్రేత నాభ్య లంబిత రసజ్ఞన్ని స్త్రీ ధారాం లతా:
సావిభ్య ప్రముఖా: ప్రసేరా అకతా: విప్రేరవి సంపాదిత
ప్రే [illegible] వాద్యవిధయ: సంయత్ప్రయోగ[illegible]
Accompanying instrument player దర్శితా: ||
([illegible]) [illegible] [illegible]

ಚತುರಿಕೆ—ಎಲೆ ರಾಜಪುತ್ರಿ, ನೀನು ಬಹುಕಾಲದಿಂದಲೂ ವೀಣೆಯನ್ನು ಬಾಜಿಸುತ್ತಿರುವೆಯಲ್ಲ. ನಿನ್ನ ಬೆರಳಿಗೆ ನೋವಾಗುವುದಿಲ್ಲವೆ?

ಮಲಯವತಿ—ಚತುರಿಕೆ, ದೇವರ ಮುಂದೆ ವೀಣೆಯನ್ನು ಬಾಜಿಸುತ್ತಿರುವಾಗ ನನ್ನ ಬೆರಳಿಗೆ ನೋವೆಂದರೇನು?

ಚತುರಿಕೆ—(ನಿಂದಿಸುತ್ತಾ) ಎಲೆ ರಾಜಪುತ್ರಿ! ನೀನು ಕನ್ಯಾಜನಕ್ಕೆ ಅಸಾಧ್ಯವಾದ ನಿಯಮೋಪವಾಸಗಳನ್ನು ಮಾಡಿ ಇದುವರೆಗೆ ಪೂಜಿಸಿದಾಗ್ಯೂ ಇವಳಿಗೆ ಬೇರೆ ನಿನ್ನ ವಿಷಯದಲ್ಲಿ ಅನುಗ್ರಹವುಂಟಾಗಲಿಲ್ಲ. ಇಂಥಾ ನಿಷ್ಕರುಣೆಯಾದ ಇವಳ ಮುಂದೆ ವೀಣೆಯನ್ನು ಬಾಜಿಸಿ ಫಲವೇನು?

ವಿದೂಷಕ—ಅಯ್ಯಾ ಮಿತ್ರನೆ, ಇವಳು ಕನ್ನಿಕೆಯಲ್ಲವೆ? ಇವಳನ್ನು ನಾವೇತಕ್ಕೆ ನೋಡಬಾರದು?

ಜೀಮೂತ—ತಪ್ಪೇನು? ಕನ್ನಿಕೆಯರನ್ನು ನೋಡುವುದರಿಂದ ಏನೇನೂ ದೋಷವಿಲ್ಲ. ಆದರೆ ಈಕೆಯು ನನ್ನನ್ನು ನೋಡಿ ಬಾಲಿಕಾಜನ ಸುಲಭವಾದ ಲಜ್ಜೆಯಿಂದಾಗಲೀ ಭಯದಿಂದಾಗಲಿ ಬಹುಕಾಲದವರೆಗೆ ಇಲ್ಲಿ ನಿಲ್ಲದೆ ಹೊರಟುಹೋದಾಳು! ಆದುದರಿಂದ ಈ ಬಳ್ಳಿಗಳ ಗುಂಪಿನಲ್ಲಿಯೇ ನಿಂತುನೋಡೋಣ.

(ಎಂದಿಬ್ಬರೂ ನೋಡುತ್ತಿರುವರು.)

ವಿದೂಷಕ—ಮಿತ್ರನೆ, ಈ ಆಶ್ಚರ್ಯವನ್ನು ನೋಡುನೋಡು, ಈಕೆಯು ವೀಣಾನಾದದಿಂದ ಕರ್ಣಾನಂದವನ್ನು ಮಾತ್ರವೇ ಮಾಡುತ್ತಿಲ್ಲ; ವೀಣಾನಾದಕ್ಕೆ ಅನುರೂಪವಾದ ರೂಪದಿಂದ ನೇತ್ರಾನಂದವನ್ನೂ ಉಂಟುಮಾಡುತ್ತಿರುವಳು. ಈಕೆ ಯಾರು? ದೇವಕನ್ನಿಕೆಯೋ, ನಾಗಕನ್ನಿಕೆಯೋ, ವಿದ್ಯಾಧರ ರಾಜಕನ್ನಿಕೆಯೋ, ಅಥವಾ ಸಿದ್ಧಕನ್ನಿಕೆಯೋ?

ಜೀಮೂತ—(ಚೆನ್ನಾಗಿ ನೋಡಿ) ಮಿತ್ರನೆ! ಈಕೆ ಯಾರೋ, ಏನೋ, ನನಗೆ ಬೇರೆ ತಿಳಿಯದು. ಇಷ್ಟು ಮಾತ್ರ ನಾನು ಬಲ್ಲೆ.

ವೃತ್ತಂ || ಸುರರಲ್ಲೀಕನ್ಯೆ ಪುಟ್ಟಿರ್ದೊಡೆ ಸುರಪನ ಕಣ್ಣಾಸಿರಂ ಸಾರ್ಥಕಂ ಮೇ |
ಣುರಗಸ್ತ್ರೀಯಾದೊಡೀ ನಾರಿಯ ಮೊಗದಿನಧೋಲೋಕದೊಳ್ ಚಂದ್ರ
ನಿಲ್ಲಂ || ಖಚರಜಾತೀಸ್ತ್ರೀಯಾದೊಡೆನ್ನೊಂದಿಗಳಿವಳೆನೆ ಮಜ್ಜಾತಿ ಸರ್ವೋತ್ತಮಂ
ಪು | ಟ್ಟಿರೆ ಸಿದ್ಧಾವಾಸದೊಳ್ ಮೂಜಗದೊಳಮಿದರಿಂ ಸಿದ್ಧರಾದರ್
ಪ್ರಸಿದ್ಧರ್ ||

ವಿದೂಷಕ—(ಜೀಮೂತವಾಹನನನ್ನು ನೋಡಿ ಸಂತೋಷದಿಂದ ಮನಸ್ಸಿನಲ್ಲಿ)

ಈತನು ದೈವಯೋಗದಿಂದ ಬಹುಕಾಲಕ್ಕೆ ಮನ್ಮಥನ ಕೈಗೆ ಸಿಕ್ಕಿದನು (ಎಂದು ತನ್ನನ್ನು ಕುರಿತು) ಅಥವಾ ಅಲ್ಲ ಅಲ್ಲ, ಬ್ರಾಹ್ಮಣನಾದ ನನ್ನ ಕೈಗೆ.

ಚತುರಿಕೆ—(ವಿಶ್ವಾಸದಿಂದ) ಎಲೆ ರಾಜಪುತ್ರಿ, ಕಠಿನ ಮನಸ್ಕಳಾದ ಇವಳ ಮುಂದೆ ಬಾಜಿಸಿದ್ದರಿಂದ ಏನೂ ಫಲವಿಲ್ಲವೆಂದು ನಾನು ಮೊದಲಿಂದಲೂ ಹೇಳುತ್ತಿರುವೆನಲ್ಲವೆ?

(ಎಂದು ವೀಣೆಯನ್ನು ಮಲಯವತಿಯ ಕೈಯಿಂದ ಕಿತ್ತುಕೊಳ್ಳುವಳು.)

ಮಲಯವತಿ—ಎಲೆ ಚತುರಿಕೆ, ಪೂಜ್ಯಳಾದ ಗೌರಿಯನ್ನು ನಿಂದಿಸಬೇಡ. ಈಕೆಯು ಈಗತಾನೇ ಅನುಗ್ರಹಿಸಿದಳಲ್ಲವೆ?

ಚತುರಿಕೆ—(ಸಂತೋಷದಿಂದ) ಎಲೆ ರಾಜಪುತ್ರಿ, ಏನೆಂದು ನಿನಗೆ ಅನುಗ್ರಹಿಸಿದಳು?

ಮಲಯವತಿ—ಎಲೆ ಚತುರಿಕೆ, ಕೇಳು. ಸ್ವಪ್ನದಲ್ಲಿ ನಾನು ಹೀಗೆಯೇ ಗೌರಿಯ ಮುಂದೆ ವೀಣೆಯನ್ನು ಬಾಜಿಸುತ್ತಿದ್ದೆ; ಆಗ ಗೌರಿಯು ಪ್ರತ್ಯಕ್ಷಳಾಗಿ "ಎಲೆ ಮಗುವೆ, ಬಾಲಿಕಾಜನ ದುರ್ಲಭವಾದ ನಿನ್ನ ಈ ಭಕ್ತಿಗೆ ನಾನು ಮೆಚ್ಚಿದೆನು. ಆದುದರಿಂದ ಸ್ವಲ್ಪಕಾಲದಲ್ಲಿಯೇ ವಿದ್ಯಾಧರ ಚಕ್ರವರ್ತಿಯು ನಿನಗೆ ವರನಾಗುವನೆಂದು"

ಚತುರಿಕೆ—ಎಲೆ ರಾಜಪುತ್ರಿ, ಆದರೆ ಸ್ವಪ್ನದಲ್ಲೆಂದು ಯಾಕೆ ಹೇಳುವೆ. ಈಕೆಯ ವರವು ಮುಂದೆಯೇ ಕಾಣುವುದಲ್ಲವೇ.

ವಿದೂಷಕ—ದೇವತಾದರ್ಶನವನ್ನು ಮಾಡುವುದಕ್ಕೆ ನಮಗೂ ಇದೇ ಸಮಯ. ಆದುದರಿಂದ ಬಾ ಹೋಗೋಣ.

(ಎಂದಿಬ್ಬರೂ ಹೋಗುವರು.)

ವಿದೂಷಕ—(ಮಲಯವತಿಯ ಮುಂದೆ ಬರುವುದಕ್ಕೆ ಜೀಮೂತವಾಹನನಿಗೆ ಅಪೇಕ್ಷೆಯಿಲ್ಲದಿದ್ದರೂ ಬಲಾತ್ಕಾರದಿಂದೆಳೆದು) ಪೂಜ್ಯಳೆ, ಚತುರಿಕೆ ಹೇಳಿದ ಮಾತು ನಿಜ. ಈತನೇ ಗೌರಿಯಿಂದ ಕೊಡಲ್ಪಟ್ಟ ವರ.

ಮಲಯವತಿ—(ಭಯದಿಂದ ಮೇಲಕ್ಕೆ ಏಳುತ್ತಾ ಜೀಮೂತವಾಹನನನ್ನು ತೋರಿಸಿ) ಎಲೆ ಯಾರೀತನು?

ಚತುರಿಕೆ—(ಜೀಮೂತವಾಹನನನ್ನು ನೋಡಿ) ಎಲೆ ರಾಜಪುತ್ರಿ, ಪರಸ್ಪರಾನುರೂಪವಾದ ಈ ರೂಪಕ್ಕೆ ಗೌರಿಯು ಮಾಡಿದ ಅನುಗ್ರಹವೆಂದೂಹಿಸುವೆನು.

ಮಲಯವತಿ—(ಅನುರಾಗದಿಂದಲೂ ಲಜ್ಜೆಯಿಂದಲೂ ಜೀಮೂತವಾಹನನನ್ನು ನೋಡುವಳು.)

[illegible]

[illegible]

[illegible]

[illegible]

Shall stay [illegible] just for a while [illegible]

[illegible]

[illegible]

[illegible]

[illegible]

[illegible]

Proceed[illegible]

[illegible]

[illegible]

[illegible]

[illegible]

[illegible]

[illegible]

ಜೀಮೂತ—

ಕಂದ || ತರಳಾಯತಾಕ್ಷಿ ನಿಡುಸು |
ಯ್ಯೆರಲಿಂ ಕದಕದಿಪ ಬಟ್ಟನೆಲೆವೊಲೆಗಳಬಲ್ ||
ಭರವಾಂತೊಡಲಿದುತಪದೊಳೆ |
ನೆರೆನೊಂದಿರೆಮುರಳ್ದು ಸಡಗರದೆ ಕಂದಿಪುದೇಂ || ೧೬ ||

ಮಲಯವತಿ—ಎಲೆ, ನನಗೆ ಅತ್ತಿ ಭೀತ್ತಿಯಾಗುವುದರಿಂದ ಈತನ ಇದಿರಿಗೆ ನಿಲ್ಲಲಾರೆ (ಎಂದು ನಾಚಿಕೆಪಟ್ಟು ಓರೆಗಣ್ಣಿನಿಂದ ನೋಡುತ್ತಾ ಮುಖವನ್ನು ಸ್ವಲ್ಪ ತಿರುಗ್ಗಿಸ್ಕಿಕೊಂಡು ನಿಂತಿರುವಳು.)

ವಿದೂಷಕ—ಪುಜ್ಯಳೆ, ತಪೋವನಕ್ಕೆ ಬಂದ ಅತಿಥಿಯನ್ನು ವಾಜ್ಮಾತ್ರದಿಂದಲೂ ಆದರಿಸದೆ ಇರುವುದೇ ನಿಮ್ಮ ಪದ್ಧತಿಯೋ ?

ಚತುರಿಕೆ—(ಮಲಯವತಿಯನ್ನು ನೋಡಿ ಮನಸ್ಸಿನಲ್ಲಿ) ಈಕೆಯ ನೋಟವನ್ನು ನೋಡಿದರೆ ಈತನಲ್ಲಿಯೇ ನಟ್ಟಹಾಗೆ ಕಾಣುವುದು. ಆದುದರಿಂದ ಹೀಗೆ ಹೇಳುವೆನು. (ಪ್ರಕಾಶಂ) ಎಲೆ ರಾಜಪುತ್ರಿ, ಈ ಬ್ರಾಹ್ಮಣನು ಹೇಳಿದ್ದು ನಿಜ. ಬಂದ ಅತಿಥಿಗಳನ್ನು ಸತ್ಕರಿಸುವುದೇ ಆಶ್ರಮವಾಸಿಗಳ ಕಾರ್ಯವಲ್ಲವೆ? ಹೀಗಿರುವಾಗ ಮಹಾನುಭಾವನಾದ ಈತನು ಇಲ್ಲಿಗೆ ಬಂದು ಇಷ್ಟು ಹೊತ್ತಾದಾಗ್ಯೂ ಏನೂ ತೋರದೆ ಏಕೆ ಸುಮ್ಮನಿರುವೆ. ಅಥವಾ, ನೀನು ಸುಮ್ಮನಿರು. ನಾನೇ ತಕ್ಕಮಟ್ಟಿಗೆ ಸತ್ಕರಿಸುವೆನು. (ಎಂದು ಜೀಮೂತವಾಹನನನ್ನು ಕುರಿತು) ಆರ್ಯನೆ, ಸುಖವಾಗಿ ಬಂದೆಯಾ ? ಪೀಠವನ್ನು ಪರಿಗ್ರಹಿಸಿ ಈ ಪ್ರದೇಶವನ್ನಲಂಕರಿಸು.

ವಿದೂಷಕ—ಮಿತ್ರನೇ, ಈಕೆಯು ಒಳ್ಳೆಯ ಮಾತನ್ನು ಹೇಳುವಳು. ಕುಳಿತುಕೋ. ಒಂದು ಮುಹೂರ್ತದವರೆಗೆ ವಿಶ್ರಮಿಸಿಕೊಳ್ಳೋಣ.

ಜೀಮೂತ—ನೀನು ಹೇಳುವುದು ಯುಕ್ತ.

(ಎಂದಿಬ್ಬರೂ ಕುಳಿತುಕೊಳ್ಳುವರು.)

ಮಲಯವತಿ—ಎಲೆ ಪರಿಹಾಸಶೀಲೆ, ನೀನು ಹೀಗೆಲ್ಲಾ ಮಾಡಬೇಡ. ಎಲ್ಲಿಂದಾದರೂ ಯಾವನಾದರೂ ತಪಸ್ವಿಯು ಬಂದು ನೋಡಿದರೆ ನನ್ನನ್ನು ಅವಿನೀತಳೆಂದೂಹಿಸುವನು.

ಶಾಂಡಿಲ್ಯ—(ಬಂದು) "ಮುಂದಕ್ಕೆ ವಿದ್ಯಾಧರ ಚಕ್ರವರ್ತಿಯಾಗತಕ್ಕ ಜೀಮೂತವಾಹನನು ಈಗ ಮಲಯಪರ್ವತದಲ್ಲಿ ಆವುದೋ ಒಂದು ಪ್ರದೇಶದಲ್ಲಿ ವಾಸಮಾಡುತ್ತಿರುವನು. ಅವನು ನಿನ್ನ ತಂಗಿಯಾದ ಮಲಯವತಿಗೆ ಅನುರೂಪನಾದ ವರನಾಗಿರುವನೋ, ಇಲ್ಲವೋ, ನೋಡಿಕೊಂಡು ಬಾ" ಎಂದು ಮಹಾರಾಜನಾದ

ವಿಶ್ವಾವಸುವು ತನ್ನ ಮಗನಾದ ಮಿತ್ರಾವಸುವಿಗೆ ಹೇಳಿಕಳುಹಿಸಿದನು. ಮಲಯವತಿಯು ತನ್ನ ಅಣ್ಣನಾದ ಮಿತ್ರಾವಸುವನ್ನೇ ನಿರೀಕ್ಷಣೆಮಾಡುತ್ತಾ ಇದ್ದ ಪಕ್ಷದಲ್ಲಿ ಮಾಧ್ಯಾಹ್ನಿಕ ಸಂಧ್ಯಾವಂದನವೇಳೆಯು ಮಿಾರಿಹೋಗುವುದು. ಆದುದರಿಂದ ಆಕೆಯನ್ನು ಜಾಗ್ರತೆಯಾಗಿ ಕರೆದುಕೊಂಡು ಬಾ" ಎಂದು ಕುಲಗುರುವಾದ ಕೌಶಿಕಮಹರ್ಷಿಯು ನನಗೆ ನೇಮಿಸಿರುವನು. ಆದುದರಿಂದ ಗೌರೀದೇವಾಲಯಕ್ಕೆ ಹೋಗುವೆನು. (ಎಂದು ಸ್ವಲ್ಪದೂರ ನಡೆದು ನೆಲವನ್ನು ನೋಡಿ) ಓಹೋ! ಧೂಳಿಯಿಂದ ವ್ಯಾಪ್ತವಾದ ಈ ಪ್ರದೇಶದಲ್ಲಿ ರಾಜಲಕ್ಷಣವನ್ನು ಸೂಚಿಸುತ್ತಿರುವ ಈ ಹೆಜ್ಜೆಗಳ ಗುರ್ತು ಯಾರದಾಗಿರಬಹುದು? (ಎಂದು ಮುಂದಿರುವ ಜೀಮೂತವಾಹನನನ್ನು ನೋಡಿ) ಈ ಮಹಾಪುರುಷನದೇ ಇದು.

ವೃತ್ತಂ || ಶಿರದೊಳ್‌ಸುಣ್ಬೊಗರೇರೆ ಮೌಳಿಸುಳಿಯುಂ ಭ್ರೂಮಧ್ಯದೊಳ್‌ತೋ
ರೆತಾ | ವರೆಯಂಕಣ್ಗಳವೆದೂರೆಪೋರೆ ವರಲಕ್ಷ್ಮೀಕಾಂತನೋಳ್ಪೇರುರಂ ||
ಕರದೊಳ್ಚಕ್ರದರೇಖೆಬೀರೆಸೊಬಗಂ ಮೈದೋರುವೀಪೂರುಷಂ| ವರವಿದ್ಯಾ
ಧರರಾಜನಲ್ಲದೊಡಿವಂಗೆಂತಕ್ಕುಮಿಾಲಕ್ಷಣಂ ||

ಅಥವಾ ಸಂದೇಹವೇಕೆ? ಈತನೇ ಜೀಮೂತವಾಹನನು. (ಎಂದು ಮಲಯವತಿಯನ್ನು ನೋಡಿ) ಆಹಾ! ರಾಜಪುತ್ರಿಯಾದ ಮಲಯವತಿಯೂ ಇಲ್ಲಿಯೇ ಇರುವಳು. (ಎಂದಿಬ್ಬರನ್ನೂ ನೋಡಿ) ಬ್ರಹ್ಮನು ಪರಸ್ಪರವಾಗಿ ಅನುರೂಪರಾದ ಇವರಿಬ್ಬರನ್ನೂ ಸೇರಿಸಿದರೆ ಬಹುಕಾಲದಿಂದಲೂ ತನಗೆ ಬಂದಿರುವ ಅಯುಕ್ತಕಾರಿ ಎಂಬ ಅಪವಾದವನ್ನು ಹೋಗಲಾಡಿಸಿಕೊಳ್ಳುವನು. (ಎಂದು ಮುಂದೆ ಹೋಗಿ ಜೀಮೂತವಾಹನನನ್ನು ಕುರಿತು) ನಿನಗೆ ಶುಭವಾಗಲಿ.

ಜೀಮೂತ—ಪೂಜ್ಯರೇ, ಜೀಮೂತವಾಹನನು ಅಭಿವಂದಿಸುವನು. (ಎಂದು ಏಳಲಿಚ್ಛಿಸುವನು.)

ಶಾಂಡಿಲ್ಯ—ಅಯ್ಯಾ, ನೀನೇತಕ್ಕೆ ಏಳುವೆ? ಸಮಸ್ತರಿಗೂ ಅಭ್ಯಾಗತರೇ ಗುರುಗಳೆಂದಿರುವುದರಿಂದ ನೀನೇ ನನಗೆ ಪೂಜ್ಯನು. ಆದುದರಿಂದ ಸುಖವಾಗಿ ಕುಳಿತುಕೋ.

ಮಲಯವತಿ—ಆರ್ಯರೇ, ವಂದಿಸುವೆನು.

ಶಾಂಡಿಲ್ಯ—(ಮಲಯವತಿಯನ್ನು ನೋಡಿ) ಎಲೆ ರಾಜಪುತ್ರಿ, ನಿನಗೆ ಅನುರೂಪವರ ಪ್ರಾಪ್ತಿಯಾಗಲಿ. ಮಾಧ್ಯಾಹ್ನಿಕ ಸಂಧ್ಯಾವಂದನದ ವೇಳೆಯು ಮಿಾರಿಹೋಗುವುದಾದುದರಿಂದ ಜಾಗ್ರತೆಯಾಗಿ ನಿನ್ನನ್ನು ಕರೆದುಕೊಂಡು ಬಾರೆಂದು ಕುಲಗುರುವಾದ ಕೌಶಿಕ ಮಹರ್ಷಿಯು ಆಜ್ಞಾಪಿಸಿರುವನು.

[illegible]

[illegible]

[illegible]

Curved or a chariot mark, indicating of hair (c[illegible]) [illegible] sandals

[illegible]

Red lotus

[illegible]

will not remain without attaining the object of

[illegible]

= track of foot prints

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible] Sthāi

[illegible]

[illegible]

శ్రీరాగం

[illegible]

attached to [illegible]

[illegible]

[illegible]

[illegible] ప్రాణినాం [illegible]

ಮಲಯವತಿ—ಪೂಜ್ಯರ ಅಪ್ಪಣೆಯಾದಂತೆ. (ಎಂದು ಮೇಲಕ್ಕೆ ಎದ್ದು ನಿಟ್ಟುಸಿರು ಬಿಟ್ಟು ಲಜ್ಜೆಯಿಂದಲೂ ವಿಶ್ವಾಸದಿಂದಲೂ ಜೀಮೂತವಾಹನನನ್ನು ನೋಡುತ್ತಾ ಶಾಂಡಿಲ್ಯನೊಡನೆ ಹೊರಟುಹೋಗುವಳು.)

ಜೀಮೂತ—(ಔತ್ಸುಕ್ಯದಿಂದ ನಿಟ್ಟುಸಿರು ಬಿಟ್ಟು ಮಲಯವತಿಯನ್ನು ನೋಡುತ್ತಾ)

ಕಂದ || ಪಿರಿದೆನಿಸಿದಘನಜಘನದ |
ಭರದಿಂಮೆಲ್ಲಡಿಯನಿಡುತೆ ಬೇರೆಡೆಗಾಸುಂ ||
ದರಿಪೋದೊಡಮೆನ್ನೆರ್ದೆಯೋ |
ವರಿಯೊಳ್ಳೆಲೆಗೊಂಡು ಮೆರೆವಳೇವೇಳ್ದಪ್ಪೆಂ || ೧೮ ||

ವಿದೂ—ನೋಡತಕ್ಕದ್ದನ್ನು ನೋಡಿದ್ದಾಯಿತು. ಈಗಲಾದರೊ ಒಳ್ಳೇ ಮಧ್ಯಾಹ್ನವು. ಬಿಸಲಿನ ತಾಪವಾದರೋ ನನ್ನ ಜಠರಾಗ್ನಿಯನ್ನು ಧಗ್‌ಧಗ್ಗೆಂದು ಹತ್ತುವಂತೆ ಮಾಡುತ್ತಿದೆ. ಆದುದರಿಂದ ಹೋಗೋಣ, ನಡೆ. ಏತಕ್ಕೆಂದರೆ, ಬ್ರಾಹ್ಮಣನಾದ ನಾನು ತಪಸ್ವಿಗಳ ಸಮೀಪಕ್ಕೆ ಅಭ್ಯಾಗತನಾಗಿ ಹೋಗಿ ಅಲ್ಲಿ ದೊರೆತ ಕಂದಮೂಲಫಲಗಳಿಂದಲೇ ಈ ದೇಹವನ್ನು ಕಾಪಾಡಬೇಕಾಗಿರುವುದಲ್ಲವೆ?

ಜೀಮೂತ—(ಮೇಲೆ ನೋಡಿ) ಪೂಜ್ಯನಾದ ಸೂರ್ಯನು ಗಗನಮಧ್ಯವನ್ನ ಲಂಕರಿಸುತ್ತಿರುವನು. ಇದೊ, ಈಗ

ವೃತ್ತಂ || ಪೊಸತಾಗಂಟ್ಟಿದ ಚಂದನಾರ್ದ್ರರಸದಿಂ ಬೆಳ್ಪೇರೆ ಗಂಡಸ್ಥಳಂ| ಬಿಸುಪು
ಣ್ಮುತ್ತಿರ್ಕರ್ಣತಾಳದ್ದೆಲರಾದಂ ಬೀಸೆತನ್ನಾಸ್ಯದೊಳ್,|| ಮಿಸುಗುತ್ತಿರ್ಪ
ಕರಾಗ್ರದಿಂದೆರ್ದೆಗೆತಾಂ ತಂದಲ್ಲಳಂ ಸೂಸಿತ| ಣ್ಪಿಸುತಿರ್ಪೀಕರಿಪುಂಗ
ವಂ ವಿರಹವಮಂ ತಾಳ್ದಂತೆವೋಲ್ತೋರುಗುಂ || ೧೯ ||

(ಎಲ್ಲರೂ ಹೊರಟುಹೋಗುವರು.)

ಪ್ರಥಮಾಂಕಂ ಸಮಾಪ್ತಂ

ದ್ವಿತೀಯಾಂಕಂ

ಚತುರಿಕೆ—(ಬಂದು) ಎಲೆ ಚತುರಿಕೆ, ನಮ್ಮ ಆರ್ಯಮಿತ್ರಾವಸುವು ಇನ್ನೂ ಮನೆಗೆ ಬಂದೆನೋ ಇಲ್ಲವೋ ವಿಚಾರಿಸಿಕೊಂಡು ಬಾರೆಂದು ರಾಜಪುತ್ರಿಯಾದ ಮಲಯವತಿಯು ನನಗೆ ನೇಮಿಸಿರುವಳು. (ಎಂದು ಮುಂದೆ ಹೋಗಿ ತೆರೆಗಿದಿರಾಗಿ ನೋಡಿ) ಓಹೋ! ಈಕೆ ಯಾರು? ಈಕಡೆಯೇ ಬರುತ್ತಿರುವಳು. ಏನು ಮನೋಹರಿಕೆಯೊ?

(ಮನೋಹರಿಕೆಯು ಪ್ರವೇಶಿಸುವಳು.)

ಚತುರಿಕೆ—(ಅವಳ ಸಮೀಪಕ್ಕೆ ಹೋಗಿ) ಎಲೆ ಮನೋಹರಿಕೆ, ಇದೇನು? ಇಷ್ಟುಬೇಗನೆ ಹೋಗುವೆ?

ಮನೋಹರಿಕೆ—ಎಲೆ ಚತುರಿಕೆ, ಕೇಳು,—"ಹೂವುಗಳನ್ನು ಕೊಯ್ಯುವದಕ್ಕೆ ಹೋಗಿ ಬಳಲಿರುವ ನನ್ನ ಶರೀರವು ಈ ಶರತ್ಕಾಲದ ಬಿಸಿಲಿನ ತಾಪವನ್ನು ಸಹಿಸಲಾರದು. ಆದುದರಿಂದ ನೀನು ಹೋಗಿ ಎಳೆ ಬಾಳೆಯೆಲೆಗಳಿಂದ ಮನೋಹರವಾದ ಚಂದನಲತಾಗೃಹದಲ್ಲಿ ಚಂದ್ರಕಾಂತಮಣಿಶಿಲಾತಲವನ್ನು ಸಿದ್ಧಪಡಿಸಿ ಬಾ" ಎಂದು ರಾಜಪುತ್ರಿಯಾದ ಮಲಯವತಿಯು ನನಗಾಜ್ಞಾಪಿಸಿದ್ದಳು. ನಾನು ಅದನ್ನು ನೆರವೇರಿಸಿದ್ದಾಯಿತು; ಆದುದರಿಂದ ಆಕೆಗೆ ಅದನ್ನು ತಿಳಿಸಬೇಕೆಂದು ಹೋಗುತ್ತಿರುವೆನು.

ಚತುರಿಕೆ—ಅಲ್ಲಿಗೆ ಹೋದರೆ ಆಕೆಯ ಸಂತಾಪವು ಕಡಮೆಯಾಗುವುದಾದುದರಿಂದ ಜಾಗ್ರತೆಯಾಗಿ ಹೋಗಿ ತಿಳಿಸು.

ಮನೋಹರಿಕೆ—(ನಕ್ಕು ಮನಸ್ಸಿನಲ್ಲಿ) ಈಗ ಆಕೆಗೆ ಉಂಟಾಗಿರುವ ಸಂತಾಪವು ಚಂದನ ಲತಾಗೃಹಕ್ಕೆ ಹೋದರೆ ಕಡಿಮೆಯಾದೀತೆ? ಜನರಹಿತವಾಗಿ ಮನೋಹರವಾದ ಆ ಚಂದನ ಲತಾಗೃಹವನ್ನು ನೋಡಿದೊಡನೆಯೇ ಆಕೆಯ ತಾಪವು ಇಮ್ಮಡಿಯಾಗುವುದೆಂದೆಣಿಸುವೆನು. (ಪ್ರಕಾಶಂ) ಆದರೆ ನೀನು ನಡೆ, ಶಿಲಾತಲವನ್ನು ಸಿದ್ಧಪಡಿಸಿರುವೆನೆಂದು ನಾನೂ ಆಕೆಗೆ ತಿಳಿಸುವೆನು.

(ಎಂದಿಬ್ಬರೂ ಹೊರಟುಹೋಗುವರು.)

ಪ್ರವೇಶ—ಮಲಯವತಿ, ಚತುರಿಕೆ.

ಮಲಯವತಿ—(ಉತ್ಸುಕಳಾಗಿ ನಿಟ್ಟುಸಿರು ಬಿಟ್ಟು, ಮನಸ್ಸಿನಲ್ಲಿ) ಎಲೆ ಕೆಟ್ಟಮನವೆ, ಆ ದಿವಸದಲ್ಲಿ ಆತನನ್ನು ನೋಡುವುದಕ್ಕೂ ಇಲ್ಲದಂತೆ ನನಗೆ ನೀನು

[illegible]

[illegible]

corrected by the fifth of gallery

[illegible]

[illegible]

[illegible]

[illegible]

శ్రీ — [illegible]
[illegible]
Red like a [illegible]

[illegible]

[illegible] Sufitnen Sufansai

[illegible]

[illegible]

[illegible]

[illegible]

[illegible]

ನಾಚಿಕೆಯನ್ನುಂಟುಮಾಡಿ ಈಗ ನೀನು ಮಾತ್ರ ಆತನ ಸಮೀಪಕ್ಕೆ ಹೋಗಬಹುದೆ? ಅಯ್ಯೊ! ನಿನಗಿರುವ ಆಶೆಯು ಯಾರಿಗೂ ಇಲ್ಲ! (ಪ್ರಕಾಶಂ) ಎಲೆ ಚತುರಿಕೆ, ಗೌರೀದೇವಾಲಯದ ಮಾರ್ಗವನ್ನು ತೋರಿಸು.

ಚತುರಿಕೆ—ಎಲೆ ರಾಜಪುತ್ರಿ, ಇದೇನು ಹೀಗೆ ಹೇಳುವೆ? ಚಂದನ ಲತಾ ಗೃಹಕ್ಕೆಂದಲ್ಲವೇ ನೀನು ಹೊರಟದ್ದು.

ಮಲಯವತಿ—ಎಲೆ, ನೀನು ಚೆನ್ನಾಗಿ ಜ್ಞಾಪಿಸಿದೆ, ನಡೆ. ಅಲ್ಲಿಗೇ ಹೋಗ ಬೇಕಾದುದು.

ಚತುರಿಕೆ—ಆರ್ಯಳೆ, ಹೀಗೆ ಬಾ.

(ಮಲಯವತಿ ದಾರಿಯನ್ನು ಬಿಟ್ಟು ಮತ್ತೊಂದುಕಡೆಗೆ ಹೋಗುವಳು.)

ಚತುರಿಕೆ—(ಹಿಂದೆ ನೋಡಿ ಮನಸ್ಸಿನಲ್ಲಿ ವಿಷಾದದಿಂದ) ಅಯ್ಯೋ, ಇನ್ನೇನು ಗತಿ! ಈಕೆಯ ಬುದ್ಧಿಯು ಸರಿಯಾಗಿರುವ ಹಾಗಿಲ್ಲ. ಇದೇನು, ಪುನಃ ದೇವಾಲ ಯದ ಮಾರ್ಗವನ್ನೇ ಹಿಡಿದಳು! (ಪ್ರಕಾಶಂ) ಆರ್ಯಳೆ, ಈ ಕಡೆಯಲ್ಲಲ್ಲವೆ ಚಂದನ ಲತಾಗೃಹ. ಆದುದರಿಂದ ಹೀಗೆ ಬಾ.

(ಮಲಯವತಿ ಆಶ್ಚರ್ಯದಿಂದ ಸ್ವಲ್ಪ ನಗುವಳು.)

ಚತುರಿಕೆ—ಆರ್ಯಳೆ, ನೋಡು. ಇದೇ ಚಂದನ ಲತಾಗೃಹ. ಇದನ್ನು ಪ್ರವೇಶಮಾಡಿ ಚಂದ್ರಕಾಂತ ಶಿಲಾತಲದಲ್ಲಿ ಕುಳಿತುಕೊ.

ಮಲಯವತಿ—(ಚತುರಿಕೆಯೊಡನೆ ಕುಳಿತುಕೊಂಡು) ನಿಟ್ಟುಸಿರು ಬಿಟ್ಟು ಮನಸ್ಸಿನಲ್ಲಿ) ಭಗವಂತನೇ! ಮನ್ಮಥನೇ, ನಿನ್ನ ರೂಪಲಾವಣ್ಯವನ್ನೆಲ್ಲಾ ಜಯಿಸಿದ ಅಪರಾಧಿಯನ್ನು ಶಿಕ್ಷಿಸದೆ ಅನಪರಾಧೆಯಾದ ನನ್ನನ್ನು ಅಬಲೆಯೆಂದು ಯೋಚಿಸಿ ಶಿಕ್ಷಿಸುವೆಯಲ್ಲಾ. ನಿನಗೆ ಸ್ವಲ್ಪವೂ ನಾಚಿಕೆಯಾಗುವುದಿಲ್ಲವೆ? (ಎಂದು ತನ್ನ ದೇಹವನ್ನು ನೋಡಿಕೊಂಡು ಮದನಾವಸ್ಥೆಯನ್ನಭಿನಯಿಸಿ, ಪ್ರಕಾಶಂ) ಎಲೆ ಚತು ರಿಕೆ, ಈ ಚಂದನ ಲತಾಗೃಹಕ್ಕೆ ಸ್ವಲ್ಪವೂ ಬಿಸಲಿನ ಜಳವಿಲ್ಲದಂತೆ ಚಿಗುರುಗಳನ್ನು ಹೊದಿಸಿದೆ. ಆದರೂ ನನ್ನ ತಾಪವು ಮಾತ್ರ ಏತಕ್ಕೆ ಶಾಂತವಾಗಲಿಲ್ಲ?

ಚತುರಿಕೆ—(ಸ್ವಲ್ಪ ನಗುತ್ತಾ) ನಿನ್ನ ತಾಪಕಾರಣವನ್ನು ನಾನು ಬಲ್ಲೆ. ಆದರೆ ನೀನು ಮಾತ್ರ ನನಗೆ ಗೊತ್ತಿಲ್ಲವೆಂದು ತಿಳಿದುಕೊಂಡಿರುವೆ.

ಮಲಯವತಿ—(ಮನಸ್ಸಿನಲ್ಲಿ) ಓಹೋ! ನನ್ನ ರಹಸ್ಯವು ಈಕೆಗೂ ತಿಳಿದಿರುವ ಹಾಗೆ ಇದೆ. ಇರಲಿ, ಕೇಳುವೆನು. (ಪ್ರಕಾಶಂ) ಎಲೆ, ಅದೇನು ಹೇಳು?

ಚತುರಿಕೆ—ಇದೋ, ನಿನ್ನ ಮನಸ್ಸಿನಲ್ಲಿಯೇ ಇರುವ ವರ.

ಮಲಯವತಿ—(ಸಡಗರದಿಂದಲೂ ಸಂತೋಷದಿಂದಲೂ ಎದ್ದು ಎರಡು ಮೂರಡಿ ಇಟ್ಟು) ಆತನೆಲ್ಲಿ?

ಚತುರಿಕೆ—(ಮೇಲಕ್ಕೆ ಎದ್ದು ಮುಗುಳುನಗೆ ನಗುತ್ತಾ) ಒಡತಿಯೆ, ಯಾರು?

ಮಲಯವತಿ—(ನಾಚಿಕೆಯಿಂದ ಕುಳಿತುಕೊಂಡು ತಲೆಯನ್ನು ಬಗ್ಗಿಸಿಕೊಳ್ಳುವಳು.)

ಚತುರಿಕೆ—ಎಲೆ, ರಾಜಪುತ್ರಿ, ನಿನ್ನ ಮನಸ್ಸಿನಲ್ಲಿ ಯೋಚಿಸುತ್ತಿದ್ದ ವರನನ್ನೇ ದೇವಿಯೂ ಅನುಗ್ರಹಿಸಿದಳು. ನೀನು ಕಣ್ಣುಬಿಟ್ಟ ಕೂಡಲೆ ಕುಸುಮಬಾಣವನ್ನು ತೆಗೆದಿಟ್ಟು ಬಂದ ಮನ್ಮಥನಂತೆ ಇರುವ ಆ ವರನನ್ನು ಕಂಡೆಯಲ್ಲವೇ? ಆತನೇ ಈ ತಾಪಕ್ಕೆ ಕಾರಣನೆಂದೂಹಿಸುವೆನು. ಇಲ್ಲದಿದ್ದರೆ ಸ್ವಭಾವದಿಂದ ಶೀತಲವಾಗಿರುವ ಈ ಶಿಲಾತಲವು ನಿನ್ನ ಸಂತಾಪವನ್ನು ಹೋಗಲಾಡಿಸದೆ ಇರುವುದೆಂದರೇನು?

ಮಲಯವತಿ—(ಚತುರಿಕೆಯ ಮುಂಗುರುಳನ್ನು ತಿದ್ದುತ್ತಾ) ಎಲೆ, ನೀನು ಚತುರಿಕೆಯಲ್ಲವೆ? ನಿನ್ನ ಮುಂದೆ ಮರೆಮಾಚುವುದೇನು? ಹೇಳುವೆನು ಕೇಳು.

ಚತುರಿಕೆ—ಎಲೆ ರಾಜಪುತ್ರಿ! ನೀನು ಹೇಳುವುದೇನು? ವರಾಲಾಪಮಾತ್ರಜನಿತವಾದ ನಿನ್ನ ಸಡಗರವೇ ನನಗೆ ಹೇಳಿತು. ಇದಕ್ಕೆ ಕಳವಳವೇಕೆ? ನೀನು ನನ್ನನ್ನು ಹಿತಕಾರಿಣಿಯಾದ ಚತುರಿಕೆಯೆಂದು ಭಾವಿಸಿರುವುದಾದರೆ ಆತನನ್ನು ಒಂದು ಮುಹೂರ್ತದೊಳಗಾಗಿಯೇ ಎಲ್ಲಿದ್ದರೂ ಹುಡುಕಿ ನಿನ್ನ ಸಮೀಪಕ್ಕೆ ಕರೆದುಕೊಂಡು ಬರಬಲ್ಲೆ.

ಮಲಯವತಿ—(ಕಣ್ಣೀರನ್ನು ಬಿಡುತ್ತಾ) ಅಯ್ಯೋ! ನಾನಷ್ಟು ಪುಣ್ಯವತಿಯೆ!

ಚತುರಿಕೆ—ಎಲೆ ರಾಜಪುತ್ರಿ, ಹಾಗೆನ್ನಬೇಡ. ಮಧುಮಥನನಾಗಿದ್ದರೂ ನಾರಾಯಣನಿಗೆ ವಕ್ಷಸ್ಥಳದಲ್ಲಿ ಲಕ್ಷ್ಮಿಯಿಲ್ಲದಿದ್ದರೆ ಸೌಖ್ಯವುಂಟೇ?

ಮಲಯವತಿ—ಸಜ್ಜನಗಳು ಪ್ರಿಯವನ್ನೇ ಹೇಳುತ್ತಾರಲ್ಲದೆ ಅಪ್ರಿಯವನ್ನು ಎಂದಿಗೂ ಹೇಳುವುದಿಲ್ಲ. ಅದು ಹಾಗಿರಲಿ. ಮೊದಲು ಆ ಮಹಾನುಭಾವನು ಇಲ್ಲಿಗೆ ಬಂದಿದ್ದ ಕಾಲದಲ್ಲಿ ವಾಙ್ಮಾತ್ರದಿಂದಲೂ ನಾನು ಆತನನ್ನು ಆದರಿಸದೆ ಹೋದೆನು. ಆದುದರಿಂದ ಆತನು ನನ್ನನ್ನು ವಕ್ರಳನ್ನಾಗಿ ಭಾವಿಸುತ್ತಾನಲ್ಲ, ಎಂಬ ಚಿಂತೆಯು ಈ ತಾಪಕ್ಕಿಂತಲೂ ಎಷ್ಟೋ ಹೆಚ್ಚಾಗಿ ನನ್ನನ್ನು ಸಂಕಟಪಡಿಸುತ್ತಿರುವುದು (ಎಂದಳುವಳು).

ಚತುರಿಕೆ—(ಕಣ್ಣೀರನ್ನು ಬಿಡುತ್ತಾ) ಎಲೆ ರಾಜಪುತ್ರಿ, ಅಳಬೇಡ, ಅಳಬೇಡ. (ಎಂದು ಆಕಾಶದಲ್ಲಿ ಚಂದನಪಲ್ಲವವನ್ನು ತೆಗೆದುಕೊಂಡು ಆಕೆಯ ಹೃದಯಕ್ಕೆ ಹಿಂಡಿ) ಈ ನಿನ್ನ ಸ್ತನತಟದಲ್ಲಿ ಲೇಪಿಸಿರುವ ರಸಕ್ಕೆ ಧಾರಾಕಾರವಾಗಿ ಸೋರುತ್ತಿರುವ ಕಣ್ಣೀರು ಸೋಕಿದರೆ ನಿನ್ನ ಸಂತಾಪವು ಕಡಿಮೆಯಾಗಲಾರದು. (ಎಂದು ಬಾಳೆಲೆಯನ್ನು ತೆಗೆದುಕೊಂಡು ಬೀಸುವಳು.)

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]
[illegible]

[illegible]
as if having much lots of black buck skins suspended from branches
[illegible]
[illegible]
[illegible]
[illegible]

[illegible]
[illegible]
[illegible]
[illegible]

[illegible]
[illegible]
[illegible]

ಮಲಯವತಿ—(ಅವಳ ಕೈಯನ್ನು ನೂಕುತ್ತಾ) ಎಲೆ, ಬೇಡ. ಈ ಬಾಳೆಲೆ ಗಾಳಿಯೂ ಬಿಸಿಯಾಗಿರುವುದಲ್ಲವೆ?

ಚತುರಿಕೆ—ಎಲೆ ರಾಜಪುತ್ರಿ, ಏಕಿದನ್ನು ದೂಷಿಸುವೆ? ಇದು ಚಂದನಪಲ್ಲವ ಸಂಸರ್ಗದಿಂದ ಅತಿ ಶೀತಳವಾಗಿದ್ದರೂ ನಿನ್ನ ನಿಟ್ಟುಸಿರಿನ ಬಿಸಿಯಿಂದ ನೀನೇ ಇದನ್ನು ಬಿಸಿಯಾಗುವ ಹಾಗೆ ಮಾಡುತ್ತಿರುವೆ.

ಮಲಯವತಿ—ಎಲೆ ಚತುರಿಕೆ, ಈ ತಾಪಶಾಂತಿಗೆ ಏನಾದರೂ ಒಂದುಪಾಯ ವಿರುವುದೊ?

ಜೀಮೂತ—(ವಿದೂಷಕನೊಡನೆ ಪ್ರವೇಶಿಸಿ)

ವೃತ್ತಂ || ಪೊರೆದಬೆಳರ್ಪುಕರ್ಪಿಡಿದ ಕಣ್ಬೊಗರ್ಗಾಶ್ರಮ ವೃಕ್ಷ ಶಾಖೆಯು | ಲ್ಲೆರಳೆಯ
ಸಮ್ಮಮಂಪುದಿಸಿದಂತಿರೆ, ಮೌನಿಯ ಮುಂದುಮಳ್ಕದಾ || ದರದೊಳೆ
ನೋಡಿದಾಕೆಯ ದೃಗಂತದ ಕುಂತದಿನಂದೆನೊಂದನೊಳ್ | ಸ್ಮರಬರಿದಲ್ತೆ
ನೀನಿಸುವವೂಸರಮೆನ್ನೊಳಿದೇಕೆ ಸಾಹಸಂ || ೨೦ ||

ವಿದೂಷಕ—ಎಲೈ ಮಿತ್ರನೆ, ಇದೇನು ನಿನ್ನ ಧೈರ್ಯವೆಲ್ಲಾ ಎಲ್ಲಿ ಅವಿತು ಕೊಂಡಿತು?

ಜೀಮೂತ—ಅಯ್ಯಾ, ಏತಕ್ಕೆ ಹೀಗೆ ಹೇಳುವೆ? ನನ್ನ ಧೈರ್ಯವಿದ್ದೇ ಇರುವುದಲ್ಲವೆ?

ವೃತ್ತಂ || ಕಳಿಯೆನೆಜೊನ್ನದಿಂ ತೊಳಪಿರುಳ್ಗಳನಾಲಿಸೆನೇಕೊಳಂಗಳ | ಲ್ಲಳಿಕುಲಗೀ
ತದಿಂಚರಮನೇಂ ನೆರೆವಾಸಿಸೆನೇಮರಲ್ದನೈ || ದಿಲೆಗಳ ಕಂಪನಾನನೆ
ನಿಶಾಗ್ರದೆ ಜಾತಿಸುಗಂಧಮಾಂತತ | ಣ್ಬೆಲರ್ಗಳಸೋಂಕನೇಕೆ ಪಳಿವಯ್ಯ
ಳಿಪೊಂದೆಯೆನಾನಗಲ್ದರೊಳ್ || ೨೧ ||

ಅಥವಾ ನಾನು ಹೀಗೆ ಹೇಳುವುದೂ ಅನ್ಯಾಯ; ಏತಕ್ಕೆಂದರೆ,—

ಕಂದ || ವನಿತಾಮನನಾದೆನ್ನ |
ಲ್ಲನಂಗನಿಸುತಿರ್ಪ ಪೂಸರಗಳು ಮನೀಗಳ್ ||
ಇನಿಸುಂಸೈಸೆನ್ನಯ |
ನಸಿಹದೆನಾಂ ಧೀರನೆಂದು ನುಡಿದಪೆನೆಂತೈ || ೨೨ ||

ವಿದೂಷಕ—(ಮನಸ್ಸಿನಲ್ಲಿ) ಈಗ ಈತನು ಅಧೈರ್ಯದಿಂದ ತನ್ನ ಮನೋವ್ಯಥೆ ಯನ್ನು ನನ್ನೊಡನೆ ಹೇಳಿಕೊಂಡನು. ಇರಲಿ, ಈತನಿಗೆ ಆಕೆಯ ಕಥೆಯೇ ಮರೆತು ಹೋಗುವಂತೆ ಮಾಡುವೆನು. (ಪ್ರಕಾಶಂ) ಅಯ್ಯಾ ಮಿತ್ರನೆ, ಗುರುಜನವನ್ನು ಸೇವಿಸುತ್ತಾ ಇರದೆ ಇಷ್ಟುಬೇಗ ಇಲ್ಲಿಗೇತಕ್ಕೆ ಬಂದೆ?

ಜೀಮೂತ—ನೀನು ಕೇಳುವುದು ಸರಿಯೆ, ಇನ್ನು ಯಾರೊಡನೆ ತಾನೇ ನಾನು ಇದನ್ನು ಹೇಳಿಕೊಳ್ಳಲಿ? ಈ ದಿವಸದಲ್ಲಿ ನಾನು ನಿದ್ರೆಮಾಡುತ್ತಿದ್ದಾಗ, ಆ ಪ್ರಿಯತಮಳೇ (ಎಂದು ಬೆರಲಿಂದ ತೋರಿಸುತ್ತಾ) ಈ ಚಂದನಲತಾಗೃಹದಲ್ಲಿ ಚಂದ್ರಕಾಂತ ಮಣಿಶಿಲಾತಲದ ಮೇಲೆ ಕುಳಿತುಕೊಂಡು ಪ್ರಣಯಕೋಪದಿಂದ ನನ್ನನ್ನು ಏನೋ ನಿಂದಿಸುವ ಹಾಗೆ ಅಳುತ್ತಿದ್ದುದನ್ನು ಕಂಡೆನು. ಆದುದರಿಂದ ಆ ಸ್ವಪ್ನಾನುಭೂತಳಾದ ಕಾಂತೆಯಿಂದ ಮನೋಹರವಾಗಿರುವ ಈ ಚಂದನ ಲತಾಗೃಹದಲ್ಲಿಯೇ ಈ ದಿನವನ್ನು ಕಳೆಯಬೇಕೆಂದು ಅಪೇಕ್ಷಿಸಿರುವೆನು. ನಡೆ, ಹೋಗೋಣ.

(ಎಂದಿಬ್ಬರೂ ಹೊರಡುವರು.)

ಚತುರಿಕೆ—(ಸಡಗರದಿಂದ) ಎಲೆ ರಾಜಪುತ್ರಿ! ಹೆಜ್ಜೆಯ ಸದ್ದಾಗುವಂತಿದೆ.

ಮಲಯವತಿ—(ಸಡಗರದಿಂದ ತನ್ನನ್ನು ನೋಡಿಕೊಂಡು) ಎಲೆ, ನನ್ನ ಇಂಥಾ ಆಕಾರವನ್ನು ನೋಡಿದರೆ ಯಾರಾದರೂ ನನ್ನ ಮನಸ್ಸನ್ನು ಬಹಳ ತುಚ್ಛವಾದುದೆಂದು ತಿಳಿದುಕೊಂಡಾರು. ಆದುದರಿಂದ ನಡೆ, ಈ ರಕ್ತಾಶೋಕವೃಕ್ಷದ ಹಿಂದೆ ಮರೆಯಾಗಿದ್ದು ಈತನು ಯಾರಾಗಿರಬಹುದೋ ನೋಡೋಣ.

(ಎಂದಿಬ್ಬರೂ ಮರೆಯಾಗಿ ನಿಂತು ನೋಡುತ್ತಿರುವರು.)

ವಿದೂಷಕ—ಇದೇ ಆ ಚಂದನಲತಾಗೃಹ. ಬಾ, ಒಳಗೆ ಹೋಗೋಣ.

(ಎಂದಿಬ್ಬರೂ ಪ್ರವೇಶವನ್ನು ಅಭಿನಯಿಸುವರು.)

ಜೀಮೂತವಾಹನ—

ಕಂದ || ಚಂದಿರಗಲ್ಲಿಂಚಂದಮು |
ನೊಂದಿಯುಮಾಚಂದ್ರ ಮುಖಿಯನೊಂದದೆ ಕಾಣ್ಬೀ ||
ಚಂದನ ಲತಾಗೃಹಂನನ |
ಗಿಂದೊಪ್ಪದು ಜೊನ್ನಮಿಲ್ಲದಿರ್ರುಳ ಮೊಗಂಬೋಲ್ || ೨೩ ||

ಚತುರಿಕೆ—(ನೋಡಿ ಸಂತೋಷದಿಂದ) ಎಲೆ ರಾಜಪುತ್ರಿ, ದೈವಯೋಗದಿಂದ ನೀನೇ ಪುಣ್ಯವತಿ. ನಿನ್ನ ಪ್ರಾಣಕಾಂತನಾದ ಆತನೇ ಈತನು.

ಮಲಯವತಿ—(ಸಂತೋಷದಿಂದಲೂ, ಭಯದಿಂದಲೂ) ಎಲೆ ಚತುರಿಕೆ, ಈತನನ್ನು ನೋಡಿ ನನಗೆ ಬಹಳ ಭಯವುಂಟಾಗಿದೆ. ಆದುದರಿಂದ ಇಷ್ಟು ಸಮೀಪದಲ್ಲಿ ನಾನು ನಿಂತಿರಲಾರೆನು. ಈತನೆಲ್ಲಾದರೂ ನನ್ನನ್ನು ನೋಡಿಬಿಟ್ಟಾನು. ಆದುದರಿಂದ ಬೇಗಬಾ, ಇನ್ನೊಂದು ಕಡೆಗೆ ಹೋಗೋಣ. (ಎಂದು ತೊಡೆಗಳನ್ನು ನಡುಗಿಸುತ್ತಾ ಎರಡಡಿಗಳನ್ನಿಟ್ಟು) ಎಲೆ, ನನ್ನ ತೊಡೆಗಳು ನಡುಗುವಂತಿವೆ.

(!!)
there [illegible]
[illegible]

[illegible]

[illegible]
[illegible]
[illegible]
[illegible]

ಚತುರಿಕೆ—(ನಕ್ಕು) ಎಲೆ ಭಿರುವೆ, ನೀನು ಇಲ್ಲೇ ಇದ್ದರೂ ಯಾರ ಕಣ್ಣಿಗೂ ಕಾಣಿಸುವುದಿಲ್ಲ. ಈ ರಕ್ತಾಶೋಕ ವೃಕ್ಷವು ಮರೆಯಾಗಿದೆಯೆಂಬುದನ್ನು ನೀನು ಮರತೇಬಿಟ್ಟೆ. ನಡೆ, ಇಲ್ಲಿ ಕುಳಿತುಕೊಂಡಿರೋಣ.

(ಎಂದಿಬ್ಬರೂ ಕುಳಿತುಕೊಳ್ಳುವರು.)

ವಿದೂ—(ನೋಡಿ) ಅಯ್ಯಾ ಮಿತ್ರನೆ, ಇದೇ ಆ ಚಂದ್ರಕಾಂತ ಶಿಲೆಯಲ್ಲವೆ?

ಜೀಮೂತವಾಹನ—(ಕಣ್ಣೀರನ್ನು ಬಿಟ್ಟು, ನಿಟ್ಟುಸಿರು ಬಿಡುವನು.)

ಚತುರಿಕೆ—ಎಲೆ ರಾಜಪುತ್ರಿ, ಇವರಿಬ್ಬರೂ ಏನೋ ಮಾತಾಡುವಂತಿದೆ. ಆದುದರಿಂದ ಇಲ್ಲಿಯೇ ಮನಸ್ಸಿಟ್ಟು ಕೇಳೋಣ.

(ಎಂದಿಬ್ಬರೂ ಕೇಳುತ್ತಿರುವರು.)

ವಿದೂ—(ಕಯ್ಯಿಂದಲ್ಲಾಡಿಸುತ್ತಾ) ಅಯ್ಯಾ ಮಿತ್ರನೆ, ಇದೇ ಆ ಚಂದ್ರ ಕಾಂತಶಿಲೆ ಎಂದು ಹೇಳತ್ತಿರುವೆನಲ್ಲವೆ?

ಜೀಮೂತವಾಹನ—ಮಿತ್ರನೆ, ಚೆನ್ನಾಗಿ ಹೇಳಿದೆ.

(ಎಂದು ಬೆರಳಿಂದ ತೋರಿಸುತ್ತಾ)

ವೃತ್ತಂ || ಎಡಗಯ್ಯಿಂದಳಿರೊಳ್ಬೆಳರ್ತ್ತವದನಂ ಚೆಲ್ವಾಗೆಬಿಂಬಾಧರಂ | ನಿಡುಸು
ಯ್ಯಿಂಕಳೆಗುಂದೆ ಚಿತ್ತದಿರವುಂ ಮೆಯ್ದೋರೆತಾಂಮೆಲ್ಲನಾ || ಕಡುವುರ್ವಂ
ಕುಣಿದಾಡೆ ಮಾನಸದೆ ಕಾಯ್ಪೇರುತ್ತಳಲ್ವಾಕೆಯಂ | ತಡಗೈದ್ದೈದಿದನಾಂ
ವಿಲೋಕಿಸಿದೆ ನೀಚಂದ್ರಾಶ್ಮದೋಳ್ಪ್ರೀತಿಯಿಂ || ೨೪ ||

ಆದುದರಿಂದ ಈ ಶಿಲಾತಲದಲ್ಲಿಯೇ ಕುಳಿತುಕೊಳ್ಳೋಣ.

(ಎಂದಿಬ್ಬರೂ ಕುಳಿತುಕೊಳ್ಳುವರು.)

ಮಲಯವತಿ—(ಯೋಚಿಸಿ) ಈಗ ಈತನು ಯಾವ ಸ್ತ್ರೀಗಾಗಿ ಇಷ್ಟು ವ್ಯಸನ ಪಡುತ್ತಿರಬಹುದು?

ಚತುರಿಕೆ—ಎಲೆ ರಾಜಪುತ್ರಿ, ನಾವು ರಕ್ತಾಶೋಕವೃಕ್ಷದ ಮರೆಯಲ್ಲಿ ನಿಂತಿರು ವುದರಿಂದ ನಮ್ಮ ಕಣ್ಣಿಗೆ ಆತನು ಕಾಣಿಸುವನೇ ಹೊರತು ಆತನ ಕಣ್ಣಿಗೆ ನಾವು ಕಾಣಿಸುವುದಿಲ್ಲ.

ಮಲಯವತಿ—ನೀನು ಹೇಳಿದ ಮಾತು ಒಪ್ಪತಕ್ಕದ್ದಾಗಿದೆ. ಆದರೆ ಈತನು ಪ್ರಣಯಕುಪಿತವಾದ ಜನವನ್ನೇ ಮನಸ್ಸಿನಲ್ಲಿಟ್ಟುಕೊಂಡು ಹೀಗೆ ಚಿಂತಿಸುವುದಕ್ಕೆ ಕಾರಣವೇನು?

ಚತುರಿಕೆ—ಎಲೆ ರಾಜಪುತ್ರಿ, ಏತಕ್ಕೆ ಹೀಗೆ ಸಂದೇಹಪಡುವೆ? ಸ್ವಲ್ಪ ತಾಳು. ಪುನಃ ಇವರಾಡುವ ಮಾತುಗಳಿಂದಲೇ ಸ್ಪಷ್ಟವಾಗುವುದು.

ವಿದೂಷಕ—(ಮನಸ್ಸಿನಲ್ಲಿ) ಈತನಿಗೆ ಈ ಕಥೆಯನ್ನೇ ಹೇಳುತ್ತಿದ್ದರೆ ಬಹು ವಿನೋದವಾಗಿ ಕಾಲವನ್ನು ಕಳೆಯುತ್ತಿರುವನು. ಇರಲಿ, ಈತನಿಗೆ ಆಕೆಯಲ್ಲಿರುವ ಅನುರಾಗವನ್ನೇ ವೃದ್ಧಿಹೊಂದಿಸುವೆನು. (ಪ್ರಕಾಶಂ) ಅಯ್ಯಾ ಮಿತ್ರನೆ, ಆಕೆಯು ಅಳುತ್ತಿದ್ದುದನ್ನು ಕಂಡೆನೆಂದು ನೀನು ಹೇಳಿದೆಯಲ್ಲ. ಆಗ ಅವಳೊಡನೆ ನೀನೇನಾದರೂ ಮಾತನಾಡಿದೆಯೋ ?

ಜೀಮೂತವಾಹನ—ಮಿತ್ರನೆ, ಕೇಳು.

ಕಂದ || "ವನಜಾಕ್ಷಿ ನಿನ್ನಕಣ್ಬನಿ |
ವೊನಲಿಂದಂನಾಂದುಸೊಬಗುವಡೆದೀಜಿದ್ದುಗಳ್ ||
ಮಿನುಗುವ ನಿನ್ನಯ ಮುಖಚಂ |
ದ್ರನುದಯದಿಂನಾಡೆಕರಗುವಂತೆ ವೊಲೆಸೆಗುಂ ||" || ೨೫ ||

(ಎಂದು ಹೇಳಿದೆನು.)

ಮಲಯವತಿ—(ಕೋಪದಿಂದ) ಎಲೆ ಚತುರಿಕೆ, ಇದಕ್ಕಿಂತಲೂ ಕೇಳತಕ್ಕ ಭಾಗವು ಬೇರೆ ಯಾವುದೂ ಇಲ್ಲ. (ಎಂದು ಕಣ್ಣೀರನ್ನು ಸುರಿಸುತ್ತಾ) ನಡೆ ಹೋಗೋಣ.

ಚತುರಿಕೆ—(ಮಲಯವತಿಯ ಕೈಯ್ಯನ್ನು ಹಿಡಿದುಕೊಂಡು) ಎಲೆ ಮಲಯವತಿ, ಹಾಗಲ್ಲ, ಕೇಳು. ನಿನ್ನನ್ನು ನೋಡಿದಾತನು ಮತ್ತೊಬ್ಬಳ ವಿಷಯದಲ್ಲಿ ಮಾತನಾಡುವುದೆಂದರೆ ನನ್ನ ಮನಸ್ಸೇ ನಂಬುವುದಿಲ್ಲ. (ಆದುದರಿಂದ ಇವರಾಡುತ್ತಿರುವ ಮಾತುಗಳೆಲ್ಲಾ ಮುಗಿಯುವವರೆಗೂ ಇಲ್ಲಿಯೇ ಕಾದುಕೊಂಡಿರೋಣ.)

ಜೀಮೂತವಾಹನ—ಮಿತ್ರನೆ, ಈಗಲೂ ಆ ಸುಂದರಿಯು ಈ ಚಂದ್ರಕಾಂತ ಶಿಲಾತಲದಲ್ಲಿಯೇ ಕುಳಿತಿರುವಂತೆ ನನಗೆ ಕಾಣುತ್ತಿರುವುದು. ಆಕೆಯ ಭಾವಚಿತ್ರವನ್ನಾದರೂ ಬರೆದು ಸಂತೋಷವಾಗಿ ನೋಡುತ್ತಾ ಕಾಲವನ್ನು ಕಳೆಯಬೇಕೆಂದು ಯೋಚಿಸಿರುವೆನು. ಆದುದರಿಂದ ಈ ಬೆಟ್ಟದ ತಪ್ಪಲಿಗಾದರೂ ಹೋಗಿ ಮಣಿಶಿಲೆಯ ಚೂರುಗಳನ್ನು ತೆಗೆದುಕೊಂಡು ಬಾ.

ವಿದೂಷಕ—ಅಪ್ಪಣೆ, (ಎಂದು ಹೋಗಿ ಪುನಃ ಬಂದು) ಅಯ್ಯಾ! ನೀನಾದರೋ ಮಣಿಶಿಲೆಯೊಂದನ್ನು ತರುವಂತೆ ನನಗೆ ಹೇಳಿದೆ. ನಾನಾದರೋ ಐದು ಬಣ್ಣಗಳನ್ನೂ ತಂದಿರುವೆನು. ತೆಗೆದುಕೊ. ಚಿತ್ರವನ್ನು ಬರೆ.

(ಎಂದು ಸಮೀಪದಲ್ಲಿಡುವನು.)

ಜೀಮೂತವಾಹನ—ಮಿತ್ರನೆ, ಒಳ್ಳೇ ಕೆಲಸಮಾಡಿದೆ. (ಎಂದು ತೆಗೆದುಕೊಂಡು ಕಲ್ಲಿನ ಮೇಲೆ ಬರೆಯುತ್ತಾ ರೋಮಾಂಚದಿಂದ) ಸಖನೆ, ನೋಡು ನೋಡು,

— make him speak of the whole [illegible] [illegible] the [illegible] [illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]
[illegible]
[illegible]
[illegible]

[illegible]
[illegible]

[illegible]
[illegible]
[illegible]

[illegible]
[illegible]
[illegible]
[illegible]
[illegible]

ಕಂದ || ಸುಂದರಬಿಂಬಕಳಾಧರ |
ಮೆಂದೆನಿಸುತೆ ನಯನಸುಖದಮಿನಿಯಳವೊಗದೀ ||
ಯೊಂದುಂಗೆರೆಯುಂಮೋದಮ |
ಸೊಂದಿಸುಗುಂಪ್ರಥಮದೃಷ್ಟ ಶಶಿರೇಖೆಯವೋಲ್ || ೨೬ ||

ವಿದೂಷಕ—(ಕುತೂಹಲದಿಂದ ನೋಡಿ)—ಅಯ್ಯಾ, ಆಕೆಯು ಕಣ್ಣೆದಿರಿಗಿಲ್ಲದಿದ್ದರೂ ನೀನು ಬರೆದಿರುವೆಯಲ್ಲ. ಇದೇ ಆಶ್ಚರ್ಯಕರವಾದದ್ದು.

ಜೀಮೂತವಾಹನ—(ಮುಗುಳುನಗೆನಗುತ್ತಾ) ಮಿತ್ರನೇ,

ಕಂದ || ನಿರುಕಿಸಿಬಿಂಬಮನಿದಿರೊಳ್ |
ಬರೆವಂತಿರೆ ಚಿತ್ರಕಾರನೆನ್ನೀಬಗೆಯೊಳ್ ||
ನಿರಿಸಿರ್ಪಳನಡಿಗಡಿಗಂ |
ನೆರೆನ್ನೋಡುತೆ ಬರೆದೆನಿದರೊಳೇನಾಶ್ಚರ್ಯಂ || ೨೭ ||

ಮಲಯವತಿ—(ನಿಟ್ಟುಸಿರುಬಿಟ್ಟು ಕಣ್ಣೀರನ್ನು ಸುರಿಸುತ್ತಾ) ಚತುರಿಕೆ, ಇನ್ನೇನು, ಇವರಾಡುವ ಮಾತುಗಳೆಲ್ಲವೂ ಮುಗಿದುಹೋದುವಲ್ಲ. ನಡೆ, ಹೋಗಿ ಮಿತ್ರಾವಸುವನ್ನೇ ನೋಡೋಣ.

ಚತುರಿಕೆ—(ಮನಸ್ಸಿನಲ್ಲಿ ವಿಷಾದದಿಂದ) ಅಯ್ಯೋ, ಕಷ್ಟ, ಕಷ್ಟ. ಈಕೆಯಾಡುವ ಮಾತುಗಳನ್ನು ಕೇಳಿದರೆ ತನ್ನ ಪ್ರಾಣದಲ್ಲಿಯೂ ತನಗೆ ಆಶೆ ಇಲ್ಲದಂತೆ ತೋರುವುದು. (ಪ್ರಕಾಶಂ) ಎಲೆ ರಾಜಪುತ್ರಿ, ಆಗಲೇ ಮನೋಹರಿಕೆಯು ಮಿತ್ರಾವಸುವಿನ ಸಮೀಪಕ್ಕೆ ಹೋದಳಲ್ಲವೇ ? ಒಂದುವೇಳೆ ಆತನೇ ಇಲ್ಲಿಗೆ ಯಾಕೆ ಬರಬಾರದು.

ಮಿತ್ರಾವಸು (ಬಂದು)—"ಎಲೈ ಮಿತ್ರಾವಸುವೆ, ಯುವರಾಜನಾದ ಜೀಮೂತವಾಹನನು ಬಹುಕಾಲದಿಂದಲೂ ಸಮೀಪದಲ್ಲಿಯೇ ವಾಸಮಾಡುತ್ತಿರುವನಾದುದರಿಂದ ಅವನನ್ನು ಚೆನ್ನಾಗಿ ಪರೀಕ್ಷಿಸಿದ್ದಾಯಿತು. ಈ ವರನು ಅತಿಯೋಗ್ಯನಾಗಿರುವುದರಿಂದ ವತ್ಸೆಯಾದ ಮಲಯವತಿಯನ್ನು ಇವನಿಗೆ ಕೊಟ್ಟು ಮದುವೆಮಾಡು" ಎಂದು ನನ್ನ ತಂದೆಯಾದ ವಿಶ್ವಾವಸುಮಹಾರಾಜನು ನನಗೆ ನೇಮಿಸಿರುವನು. ನನಗಾದರೋ ಆಕೆಯಲ್ಲಿ ಅತಿ ಪ್ರೇಮವಿರುವುದರಿಂದ ಏನೋ ಒಂದು ಕಳವಳವುಂಟಾಗಿರುವುದು. ಯಾತಕ್ಕೆಂದರೆ,

ವೃತ್ತಂ || ಖ್ಯಾತಂವಿದ್ಯಾಧರೋರ್ವೀಪತಿಕುಲತಿಲಕಂ ಸುಂದರಂಶೌರ್ಯಧೈರ್ಯೋ |
ಪೇತಂವಿದ್ಯಾವಿನೀತಂ ಸುಮತಿಘಿಲಸಿತಂ ಸಜ್ಜನಾಪ್ತಂ ವಯಸ್ಸ್ಥಂ ||
ಈತಂಗೀಯಲ್ಕೆ ಮತ್ಸೋದರಿಯನೊಸೆವೆನೆಂತಾದೊಡಂ ಚಾಗದೊಳ್ಸಂ |
ಪ್ರೀತಂಕೇಳ್ವರ್ಗೆ ನೈಜಾಸುಗಳುಮನೊಲವಿಂದೀವನೆಂದಂಜುತಿರ್ಪೆಂ ||

ಈಗ ಆ ಜೀಮೂತವಾಹನನು ಗೌರ್ಯಾಶ್ರಮದಲ್ಲಿರುವ ಚಂದನಲತಾಗೃಹದೊಳಗೆ ವಾಸಮಾಡುತ್ತಿರುವನೆಂಬ ವೃತ್ತಾಂತವು ತಿಳಿಯಿತು, ಆದುದರಿಂದ ಈ ಚಂದನಲತಾಗೃಹಕ್ಕೆ ಹೋಗಿ ನೋಡುವೆನು.

(ಎಂದು ಚಂದನಲತಾಗೃಹವನ್ನು ಪ್ರವೇಶಿಸುವನು.)

ವಿದೂಷಕ—(ಗಾಬರಿಯಿಂದ ನೋಡಿ) ಅಯ್ಯಾ ಮಿತ್ರನೆ, ಇದೋ ನೋಡು. ಸಿದ್ಧಯುವರಾಜನಾದ ಮಿತ್ರಾವಸುವು ಈ ಕಡೆಯೇ ಬರುವಹಾಗಿದೆ. ಆತನೆಲ್ಲಾದರೂ ಇದನ್ನು ನೋಡಿಬಿಟ್ಟಾನು. ಆದುದರಿಂದ ಈ ಭಾವಚಿತ್ರವನ್ನು ಬಾಳೆಲೆಯಿಂದಾದರೂ ಮರೆಮಾಡು.

ಜೀಮೂತವಾಹನ—(ಬಾಳೆಲೆಯಿಂದ ಚಿತ್ರಕ್ಕೆ ಮರೆಮಾಡುವನು.)

ಮಿತ್ರಾವಸು—(ಸಮೀಪಕ್ಕೆ ಬಂದು) ಅಯ್ಯಾ, ಯುವರಾಜನೆ, ಮಿತ್ರಾವಸುವು ನಮಸ್ಕರಿಸುವನು.

ಜೀಮೂತವಾಹನ—(ನೋಡಿ) ಮಿತ್ರಾವಸುವೇ, ನೀನು ಸುಖವಾಗಿ ಬಂದೆಯಾ? ಇಲ್ಲಿ ಕುಳಿತುಕೋ.

ಚತುರಿಕೆ—ಎಲೆ ರಾಜಪುತ್ರಿ, ನಿಮ್ಮಣ್ಣನಾದ ಮಿತ್ರಾವಸು ಬಂದನಲ್ಲವೆ?

ಮಲಯವತಿ—ಎಲೆ, ನನಗೆ ಬಹು ಸಂತೋಷ.

ಜೀಮೂತವಾಹನ—ಅಯ್ಯಾ ಮಿತ್ರಾವಸುವೆ, ಸಿದ್ಧರಾಜನಾದ ವಿಶ್ವಾವಸು ಮಹಾರಾಜನು ಕ್ಷೇಮದಿಂದಿರುವನೇ?

ಮಿತ್ರಾವಸು—ಅಯ್ಯಾ, ಕ್ಷೇಮದಿಂದಿರುವನು. ಈಗ ಆತನಾಜ್ಞೆಯಿಂದಲೇ ನಾನಿಲ್ಲಿಗೆ ಬಂದುದು.

ಜೀಮೂತವಾಹನ—ಆತನಾಜ್ಞೆಯೇನು?

ಮಲಯವತಿ—ನಮ್ಮ ತಂದೆಯು ಏನೋ ಹೇಳಿಕಳುಹಿಸಿರುವನಂತೆ; ಕೇಳುವೆನು.

ಮಿತ್ರಾವಸು—ಅಯ್ಯಾ ಕೇಳು. 'ನನಗೆ ಮಲಯವತಿ ಎಂಬ ಒಬ್ಬ ಮಗಳಿರುವಳು. ಆಕೆಯು ನಮ್ಮ ಸಿದ್ಧವಂಶಕ್ಕೆಲ್ಲಾ ಪ್ರಾಣಪದಕವಾಗಿರುವಳು. ಅವಳನ್ನು ನಿನಗೆ ಕೊಟ್ಟು ವಿವಾಹಮಾಡುವೆನು. ಸ್ವೀಕರಿಸಬೇಕು' ಎಂದು ನಮ್ಮ ತಂದೆಯು ನಿನಗೆ ಹೇಳಿಕಳುಹಿಸಿರುವನು.

ಚತುರಿಕೆ—(ನಕ್ಕು) ಎಲೆ ಮಲಯವತಿ, ಕೇಳಿದೆಯೊ?

ಮಲಯವತಿ—(ನಾಚಿಕೆಯಿಂದ ಮುಗುಳುನಗೆ ನಗುತ್ತಾ ತಲೆಯನ್ನು ಬಗ್ಗಿಸಿಕೊಂಡು) ಎಲೆ ಚತುರಿಕೆ, ಈತನು ಮತ್ತೊಬ್ಬಳಲ್ಲಿ ಅನುರಕ್ತನಾಗಿರುವನೆಂಬುದನ್ನು ನೀನು ಮರೆತುಬಿಟ್ಟೆಯಾ?

[illegible]

[illegible]
[illegible] ..

[illegible]:
[illegible]

[illegible].

[illegible]
[illegible] ... [illegible]
[illegible].

[illegible] - ([illegible]) [illegible].
[illegible] ways [illegible] any way [illegible]
[illegible]

[illegible] - .. [illegible]?

నా- నంద్యోపకరణాని:

౧. శ్లో. ప్రాణాయనవతాం సర్వయజ్ఞం త్రిదివ
పంక్తిం ఆశ్రయతే। తద్విధా యత్రైనాది ప్రతిష్ఠితో
౧ద్విజ యజ్ఞ వధిః॥

౨. . . . . కిం నామ సంగీత సంస్కృతిర్జాతయః ప్రవృత్తిర్జాతయః
ప్రవర్తయేయం। తతో నాన్దీనాం ప్రతిష్ఠాపనం యత్నతః॥

శ్లో. సరాధనః ప్రయత్నే:। కిం అస్య అభ్యర్థనీయః?
సర్వజనసమ్మతః అభ్యర్థనీయః॥

నిర్ణయం. నాయం నరజనస్తత్త్వతః।
- అస్య నరస్య అక్షీణ సామర్థ్యం ప్రతిపన్నం।
తద్ యశోత్కర్షప్రతిష్ఠా సమయ సత్కారం ప్రార్థయామి॥

To us who've thus opened our heart to you
· శ్లో. నిర్దోష అస్య నిర్దిష్ట ప్రత్యుపకారః: To Refuse
తత్ప్రకారేణ అనుత్తరం జానాతి॥

- కిం నను ప్రతిపన్న ప్రాప్తప్రకారం నాయకేన
అస్మాకం ఉ: వ భావనా అస్మాకం ప్రార్థనా:

ಜೀಮೂತವಾಹನ—(ಕೈಮರೆಮಾಡಿಕೊಂಡು) ಮಿತ್ರನೇ, ನಾನು ಬಹು ಕಷ್ಟಕ್ಕೆ ಗುರಿಯಾದೆ.

ವಿದೂಷಕ—(ಕೈಮರೆಮಾಡಿಕೊಂಡು) ಮಿತ್ರನೇ, ನಿನ್ನ ಮನಸ್ಸು ಆಕೆಯಲ್ಲಲ್ಲದೆ ಬೇರೆ ಯಾವಳಲ್ಲಿಯೂ ಅನುರಾಗಿಸುವುದಿಲ್ಲವೆಂಬುದನ್ನು ನಾನು ಚೆನ್ನಾಗಿ ಬಲ್ಲೆ. ಆದರೂ ಏನನ್ನಾದರೂ ಈತನೊಡನೆ ಹೇಳಿಕಳುಹಿಸಿಬಿಡು.

ಮಲಯವತಿ—(ಮನಸ್ಸಿನಲ್ಲಿ ಕೋಪದಿಂದ) ಎಲಾ ನೀಚ, ಇದು ಯಾರಿಗೆ ತಾನೆ ತಿಳಿಯದು?

ಜೀಮೂತವಾಹನ—ಅಯ್ಯಾ, ಶ್ಲಾಘ್ಯವಾದ ನಿಮ್ಮ ಸಂಬಂಧವನ್ನು ಬೆಳೆಸಲು ಯಾರಿಗೆ ತಾನೇ ಇಷ್ಟವಿಲ್ಲ? ಆದರೆ ಮತ್ತೊಬ್ಬಳಲ್ಲಿ ಅನುರಕ್ತವಾಗಿರುವ ನನ್ನ ಮನಸ್ಸನ್ನು ಹಿಂತಿರುಗಿಸುವುದು ಬಹು ಅಶಕ್ಯವಾಗಿದೆ. ಆದುದರಿಂದ ಈಕೆಯನ್ನು ಅನುರಾಗಿಸುವುದೆಂದರೆ ಅಸಾಧ್ಯ.

ಮಲಯವತಿ—(ಮೂರ್ಛೆಹೋದಂತೆ ನಟಿಸುವಳು.)

ಚತುರಿಕೆ—ಎಲೆ ಮಲಯವತಿ, ಸಂತೈಸಿಕೊ, ಸಂತೈಸಿಕೊ.

ವಿದೂಷಕ—ಅಯ್ಯಾ ಮಿತ್ರಾವಸುವೆ, ಈತನು ಪರಾಧೀನನಲ್ಲವೆ? ಇವನೊಡನೆ ಈ ಮಾತುಗಳನ್ನಾಡಿ ಫಲವೇನು? ಇವರ ತಂದೆಯ ಸಮೀಪಕ್ಕೆ ಹೋಗಿ ಮಾತನಾಡು.

ಮಿತ್ರಾವಸು—(ಮನಸ್ಸಿನಲ್ಲಿ) ಇವನು ಹೇಳಿದ ಮಾತು ನಿಜ. ಈತನು ತನ್ನ ತಂದೆಯ ಮಾತಿಗೆ ಎಂದಿಗೂ ಬದಲಾಗಿ ಹೇಳಲಾರನು. ಆತನೂ ಈ ಗೌರ್ಯಾಶ್ರಮದಲ್ಲಿಯೇ ವಾಸಮಾಡುತ್ತಿರುವನಾದುದರಿಂದ ಜಾಗ್ರತೆಯಾಗಿ ಹೋಗಿ ಮಾತನಾಡಿ ಈತನೇ ಆಕೆಯನ್ನು ಪರಿಗ್ರಹಿಸುವಂತೆ ಮಾಡುವೆನು.

ಮಲಯವತಿ—(ಸಂತೈಸಿಕೊಳ್ಳುವಳು.)

ಮಿತ್ರಾವಸು—(ಪ್ರಕಾಶಂ) ಅಯ್ಯಾ ಜೀಮೂತವಾಹನ, ನಾವು ಇಷ್ಟು ವಿಧವಾಗಿ ಹೇಳಿಕೊಂಡಾಗ್ಯೂ ನಮ್ಮ ಮಾತನ್ನು ನೀನು ತಿರಸ್ಕರಿಸಿದ್ದರಿಂದ ನೀನೇ ನಮಗಿಂತಲೂ ಹೆಚ್ಚಾಗಿ ತಿಳಿದವನೆಂದು ಭಾವಿಸುವೆನು.

ಮಲಯವತಿ—(ಕೋಪದಿಂದ ನಕ್ಕು) ಇದೇನು, ಇವನು ತನ್ನ ಮಾತನ್ನು ತಿರಸ್ಕರಿಸಿದಾಗ್ಯೂ ಸ್ವಲ್ಪವೂ ನಾಚಿಕೆ ಇಲ್ಲದೆ ಪುನಃ ಹೀಗೆ ಮಾತನಾಡುವನು.

ಮಿತ್ರಾವಸು—(ಹೊರಟುಹೋಗುವನು.)

ಮಲಯವತಿ—(ಕಣ್ಣೀರನ್ನು ಬಿಡುತ್ತಾ ತನ್ನ ದೇಹವನ್ನು ನೋಡಿ ಮನಸ್ಸಿನಲ್ಲಿ) ದುರದೃಷ್ಟವೆಂಬ ಕಳಂಕದಿಂದ ಮಲಿನವಾಗಿಯೂ ಅನೇಕ ದುಃಖಭಾಜನವಾಗಿಯೂ ಇರುವ ಈ ನನ್ನ ಶರೀರದಿಂದೇನು ಪ್ರಯೋಜನ? ಈ ಅಶೋಕವೃಕ್ಷದ

ಕೆಳಗೆ ಹೋಗಿ ಇರುವಂತಿಗೆಯ ಬಳ್ಳಿಯನ್ನು ಕೊರಲಿಗೆ ಉರುಲುಹಾಕಿಕೊಂಡು ಪ್ರಾಣತ್ಯಾಗ ಮಾಡುವೆನು. ಇದೇ ನಿಶ್ಚಯ, (ಪ್ರಕಾಶಂ, ಆಶ್ಚರ್ಯದಿಂದ ನಗುತ್ತಾ) ಎಲೆ ಚತುರಿಕೆ, ನಮ್ಮ ಅಣ್ಣನಾದ ಮಿತ್ರಾವಸುವು ದೂರವಾಗಿ ಹೋದನೋ, ಇನ್ನೂ ಸಮೀಪದಲ್ಲಿಯೇ ಹೋಗುತ್ತಿರುವನೋ ನೋಡು. ಏತಕ್ಕೆಂದರೆ, ನಾನೂ ಈ ಕಡೆಗೆ ಹೋಗಬೇಕೆಂದು ಯೋಚಿಸಿರುವೆನು.

ಚತುರಿಕೆ—ಅಪ್ಪಣೆ, (ಎಂದು ಎರಡುಮೂರಡಿ ಇಟ್ಟು ಯೋಚಿಸಿ) ಆಹಾ! ಈಕೆಯ ಮನಸ್ಸು ಕೆಟ್ಟಿರುವಂತಿದೆ. ಆದುದರಿಂದ ನಾನು ಹೋಗುವುದು ಸರಿಯಲ್ಲ, ಇಲ್ಲಿಯೇ ಮರೆಯಾಗಿದ್ದು ಇವಳೇನುಮಾಡುವಳೋ ನೋಡುವೆನು.

ಮಲಯವತಿ—(ನಾಲ್ಕು ಕಡೆಯೂ ನೋಡಿ ಬಳ್ಳಿಯನ್ನು ತೆಗೆದುಕೊಂಡು ಕಣ್ಣೀರನ್ನು ಸುರಿಸುತ್ತಾ) ಭಗವತಿ, ಗೌರಿ, ಈ ಜನ್ಮದೊಳಗಂತೂ ನೀನು ನನ್ನಲ್ಲಿ ಅನುಗ್ರಹಿಸಲಿಲ್ಲ. ಮುಂದಿನ ಜನ್ಮಕ್ಕಾದರೂ ನನಗೆ ಈ ವಿಧವಾದ ದುಃಖವುಂಟಾಗದಹಾಗೆ ಮಾಡು (ಎಂದು ಕೊರಲಿಗೆ ಪಾಶವನ್ನು ಹಾಕಿಕೊಳ್ಳುವಳು.)

ಚತುರಿಕೆ—(ನೋಡಿ ಗಾಬರಿಯಿಂದ) (ಅಯ್ಯೋ, ಇನ್ನೇನುಗತಿ.) ಈ ರಾಜಪುತ್ರಿಯು ನೇಣುಹಾಕಿಕೊಂಡು ಪ್ರಾಣಬಿಡುತ್ತಿರುವಳಲ್ಲ! ಯಾರಾದರೂ ಇದನ್ನು ತಪ್ಪಿಸಬಾರದೇ?

ಜೀಮೂತವಾಹನ—(ಜಾಗ್ರತೆಯಾಗಿ ಬಂದು) ಆಕೆಯೆಲ್ಲಿ? ಆಕೆಯೆಲ್ಲಿ?

ಚತುರಿಕೆ—ಇದೋ ಈ ಅಶೋಕವೃಕ್ಷದ ಕೆಳಗಿರುವಳು.

ಜೀಮೂತವಾಹನ—(ವಿಷಾದದಿಂದಲೂ, ಸಂತೋಷದಿಂದಲೂ) ಓಹೋ, ಇದೇನು, ನನ್ನ ಅನುರಾಗಕ್ಕೆ ಪಾತ್ರಳಾದ ಆಕೆಯೇ ಈಕೆ.

(ಎಂದು ಮಲಯವತಿಯ ಕೈಯನ್ನು ಹಿಡಿದುಕೊಂಡು ಅವಳ ಕೈಯ್ಯಲ್ಲಿದ್ದ ಲತಾಪಾಶವನ್ನು ಕಿತ್ತು)

ವೃತ್ತಂ || ಮುಗುದೆ ಬಿಡುಬಿಡೇಕೀಸಾಹಸಂ ಬೇಗದಿಂದಂ | ತೆಗೆತೆಗೆ ಚಿಗುರ್ಗಯ್ಯಿಂ
ಬಳ್ಳಿಯಿಂ ಕೋಮಲಾಂಗೀ || ಮಿಗೆಕರಮಿದು ಪೂವಂಕೊಯ್ಯೊಡಂ
ನೋವುದೆಂದಾಂ| ಬಗೆಯುತಮಿರೆ ನೇಣಂ ತಾಳಲೇಂ ನೋಯದೇ ಪೇಳ್ ||

ಮಲಯವತಿ—(ಭಯದಿಂದ) (ಅಯ್ಯೋ, ಅಯ್ಯೋ,) ಯಾರೀತನು? (ಎಂದು ಕೋಪದಿಂದ ಕೈಯ್ಯನ್ನು ಬಿಡಿಸಿಕೊಳ್ಳುವುದಕ್ಕೆ ಅಪೇಕ್ಷಿಸಿ) ಬಿಡುಬಿಡು, ನನ್ನ ಕೈಯ್ಯನ್ನು, ನನ್ನನ್ನು ನಿರ್ಬಂಧಪಡಿಸುವುದಕ್ಕೆ ನೀನು ಯಾರು? ಏನು, ಪ್ರಾಣತ್ಯಾಗ ಮಾಡುವುದಕ್ಕೂ ನಿನ್ನನ್ನೇ ಬೇಡಿಕೊಳ್ಳಬೇಕೋ?

ಜೀಮೂತವಾಹನ—(ಬಿಡುವುದಿಲ್ಲ.)

Haunting

[illegible]
[illegible]
[illegible]

I see that her heart is soft from her words!

[illegible]
[illegible]

more
([illegible]) [illegible]

[illegible]
[illegible]

Twenty of my work
[illegible]

[illegible]
I who am to remove [illegible]
[illegible]
words pierce a heart [illegible]
[illegible]
[illegible]
[illegible]

Forgetful of the home
[illegible]

[illegible]
[illegible]

[illegible]

Explanation
Revelation of
Error.

[illegible]
[illegible] Sali

Very sweet
Panisht!

[illegible]
[illegible]

ಕಂದ || ಸರಸಿಜಲೋಚನೆ ಮುಕ್ತಾ |
ಸರಯೋಗ್ಯಮಿದೆಂದು ತಿಳಿಯದಿನಿಸುಂ ನಿನ್ನೀ ||
ಕೊರಲೊಳ್ ನೇಣಸಮರ್ಪಿತೆ |
ಪಿರಿದಪರಾಧಮನೆಗೆಯ್ದ ಕರಮಂ ಬಿಡೆ ನಾಂ || || ೩೦ ||

ವಿದೂಷಕ—ಪೂಜ್ಯಳೇ, ನಿನ್ನೀ ಸಖಿಯು ಪ್ರಾಣತ್ಯಾಗ ಮಾಡಬೇಕೆಂದು ಉದ್ಯೋಗಿಸುವುದಕ್ಕೆ ಕಾರಣವೇನು ?

ಚತುರಿಕೆ—ನಿನ್ನೀ ಪ್ರಿಯಮಿತ್ರನೇ ಅಲ್ಲವೇ ?

ಜೀಮೂತವಾಹನ—ಇವಳು ಪ್ರಾಣತ್ಯಾಗ ಮಾಡುವುದಕ್ಕೆ ನಾನು ಕಾರಣವೆಂದರೇನು ? ನನಗೇನೂ ತಿಳಿಯದಲ್ಲ.

ವಿದೂಷಕ—ಪೂಜ್ಯಳೇ, ಅದು ಹೇಗೆ ?

ಚತುರಿಕೆ—(ಸಾಭಿಪ್ರಾಯವಾಗಿ) ಅಯ್ಯಾ ಕೇಳು. ನಿನ್ನ ಪ್ರಿಯಮಿತ್ರನಾದ ಈತನು ಶಿಲಾತಲದಲ್ಲಿ ತನ್ನ ಹೃದಯವಲ್ಲಭೆಯನ್ನು ಬರೆದು ಆಕೆಯಲ್ಲಿ ಮಿತಿಮೀರಿದ ವಿಶ್ವಾಸವನ್ನಿಟ್ಟು ಇವಳ ಅಣ್ಣನಾದ ವಿಶ್ವಾವಸುವು ಇವಳನ್ನು ಪರಿಗ್ರಹಿಸೆಂದು ಹೇಳಿದಾಗ್ಯೂ ಆತನ ಮಾತನ್ನು ತಿರಸ್ಕರಿಸಿ ನಾನು ಈಕೆಯನ್ನು ಪರಿಗ್ರಹಿಸುವುದಿಲ್ಲವೆಂದು ಹೇಳಿದನು. ಅದರಿಂದ ಈಕೆಯು ಭಗ್ನಮನೋರಥಳಾಗಿ ಪ್ರಾಣತ್ಯಾಗ ಮಾಡುವುದಕ್ಕೆ ಉದ್ಯೋಗಿಸಿದಳು.

ಜೀಮೂತವಾಹನ—(ಮನಸ್ಸಿನಲ್ಲಿ ಸಂತೋಷದಿಂದ) ಏನು ? ಈಕೆಯೇ ಆ ವಿಶ್ವಾವಸುವಿನ ಮಗಳಾದ ಮಲಯವತಿಯೇ ? ಚಂದ್ರರೇಖೆಯು ಸಮುದ್ರದಲ್ಲಲ್ಲದೆ ಇನ್ನೆಲ್ಲಿತಾನೆ ಹುಟ್ಟುವುದು. ಅಯ್ಯೋ, ನನ್ನಿಂದ ನಾನೇ ಮೋಸಹೋದೆ.

ವಿದೂಷಕ—ಪೂಜ್ಯಳೆ, ಹಾಗಿದ್ದರೆ ನನ್ನ ಮಿತ್ರನಿಂದ ಅಪರಾಧವೇನೂ ಇಲ್ಲ. ಅಥವಾ ನೀನು ಈತನಿಗೆ ಪರಿಚಿತೆಯಲ್ಲ. ಆದುದರಿಂದ ನೀನೇ ಹೋಗಿ ಶಿಲಾತಲವನ್ನು ನೋಡಿಕೊಂಡು ಬಾ.

ಜೀಮೂತವಾಹನ—ನೋಡು, ನೋಡು.

ಮಲಯವತಿ—(ಸಂತೋಷದಿಂದಲೂ ನಾಚಿಕೆಯಿಂದಲೂ ಜೀಮೂತವಾಹನನನ್ನು ನೋಡುತ್ತಾ ತನ್ನ ಕೈಯನ್ನು ಎಳೆಯುವಳು.)

ಜೀಮೂತವಾಹನ—(ಮುಗುಳುನಗೆ ನಗುತ್ತಾ) ನಾನು ಬರೆದಿರುವ ಹೃದಯವಲ್ಲಭೆಯನ್ನು ನೀನು ನೋಡುವವರೆಗೂ ನಾನು ನಿನ್ನ ಕೈಯನ್ನು ಬಿಡುವುದಿಲ್ಲ.

(ಎಲ್ಲರೂ ಹೊರಡುವರು.)

ವಿದೂಷಕ—(ಮುಚ್ಚಿದ್ದ ಬಾಳೆಲೆಯನ್ನು ತೆಗೆದು) ಪೂಜ್ಯಳೇ, ಈತನ ಹೃದಯವಲ್ಲಭೆಯನ್ನು ನೋಡು.

ಮಲಯವತಿ—(ನೋಡಿ ಕೈಮರೆ ಮಾಡಿಕೊಂಡು ಮುಗುಳುನಗೆ ನಗುತ್ತಾ) ಚತುರಿಕೆ, ಈ ಚಿತ್ರವು ನನ್ನಂತೆಯೇ ಇದೆ.

ಚತುರಿಕೆ—(ಚಿತ್ರಪಟವನ್ನೂ ಮಲಯವತಿಯನ್ನೂ ನೋಡಿ) ಎಲೆ ರಾಜಪುತ್ರಿ, ನಿನ್ನ ಆಕಾರಕ್ಕೂ ಈ ಚಿತ್ರಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ಬರೆದಿದ್ದರೂ ತಿಳಿಯದೆ ಈ ಚಿತ್ರವು ನನ್ನಂತೆಯೇ ಇದೆ ಎಂದು ಹೇಳುತ್ತೀಯಲ್ಲ. ಆದರೆ ಈ ಮಣಿ ಶಿಲಾತಲದಲ್ಲಿ ನೀನೇ ಪ್ರತಿಫಲಿಸಿರುವೆಯೋ ಅಥವಾ ನಿನ್ನನ್ನೇ ಯಾರಾದರೂ ಬರೆದಿರುವರೋ ಬಲ್ಲೆಯಾ ?

ಮಲಯವತಿ—(ನಕ್ಕು ಮನಸ್ಸಿನಲ್ಲಿ) ಈತನು ಚಿತ್ರವನ್ನು ತೋರಿಸಿ ನನ್ನನ್ನೇ ಕೆಟ್ಟವಳನ್ನಾಗಿ ಮಾಡಿದನು.

ವಿದೂಷಕ—ಪೂಜ್ಯಳೆ, ನಿನಗೆ ಗಾಂಧರ್ವವಿವಾಹವಾಯಿತು. (ಎಂದು ಜೀಮೂತವಾಹನನನ್ನು ಕುರಿತು) ಅಯ್ಯಾ ಮಿತ್ರನೆ, ಇನ್ನು ಇವಳ ಕೈಯನ್ನು ಬಿಟ್ಟುಬಿಡು. ಈ ಕಡೆಯೇ ಯಾವಳೋ ಒಬ್ಬಳು ಬಹಳ ಜಾಗ್ರತೆಯಾಗಿ ಬರುತ್ತಿರುವಳು.

(ಜೀಮೂತವಾಹನನು ಕೈಬಿಡುವನು)

ಮನೋಹರಿಕೆ—(ಸಂತೋಷದಿಂದ ಜಾಗ್ರತೆಯಾಗಿ ಸಮೀಪಕ್ಕೆ ಬಂದು) ಎಲೆ ರಾಜಪುತ್ರಿ, ದೈವಯೋಗದಿಂದ ನೀನೇ ಪುಣ್ಯವತಿ. ಯುವರಾಜನಾದ ಜೀಮೂತ ವಾಹನನ ಮಾತಾಪಿತೃಗಳು ನಿನ್ನನ್ನು ಜೀಮೂತವಾಹನನಿಗೆ ವಿವಾಹಮಾಡಿಕೊಳ್ಳುವ ವಿಷಯದಲ್ಲಿ ಒಪ್ಪಿಕೊಂಡರು.

ವಿದೂಷಕ—(ಕುಣಿಯುತ್ತಾ) ನನ್ನ ಪ್ರಿಯಮಿತ್ರನ ಮನೋರಥವು ಕೈಗೂಡಿತು. ಅಥವಾ ಅಲ್ಲ, ಅಲ್ಲ. ಪೂಜ್ಯಳಾದ ಮಲಯವತಿಯ, ಅಥವಾ ಇವರಿಬ್ಬರದೂ ಅಲ್ಲ. (ಭೋಜನವನ್ನು ಅಭಿನಯಿಸುತ್ತಾ) ಬ್ರಾಹ್ಮಣನಾದ ನನ್ನ.

ಮನೋಹರಿಕೆ—(ಮಲಯವತಿಯನ್ನು ಕುರಿತು) ಎಲೆ ಮಲಯವತಿ, ಈಗಲೇ ನಿನಗೆ ಮದುವೆಯಂತೆ. ಆದುದರಿಂದ ಜಾಗ್ರತೆಯಾಗಿ ನಿನ್ನನ್ನು ಕರೆದುಕೊಂಡು ಬಾರೆಂದು ಯುವರಾಜನಾದ ಮಿತ್ರಾವಸುವು ನನಗೆ ಆಜ್ಞಾಪಿಸಿದನು. ಆದುದರಿಂದ ನಡೆ, ಹೋಗೋಣ.

ವಿದೂಷಕ—ಎಲೆ ತೊತ್ತಿನ ಮಗಳೆ, ನೀನು ಇವಳನ್ನು ಕರೆದುಕೊಂಡು ಹೋಗುವುದು. ನನ್ನ ಪ್ರಿಯ ಮಿತ್ರನು ಮಾತ್ರ ಇಲ್ಲಿಯೇ ಇರುವುದೋ ?

ಮನೋಹರಿಕೆ—ಎಲಾ ದುರಾಶನೆ, ತ್ವರೆಪಡಬೇಡ, ತ್ವರೆಪಡಬೇಡ. ನಿಮಗೂ ಮಂಗಳಸ್ನಾನದ ವೇಳೆಯು ಸಮೀಪಿಸಿರುವುದು.

(ಮಲಯವತಿ ವಿಶ್ವಾಸದಿಂದಲೂ ನಾಚಿಕೆಯಿಂದಲೂ ಜೀಮೂತವಾಹನನನ್ನು ನೋಡುತ್ತಾ ಪರಿವಾರದೊಡನೆ ಹೊರಟುಹೋಗುವಳು).

[illegible]

[illegible]
[illegible]
[illegible]
[illegible]

[illegible]

[illegible]
[illegible]
[illegible]

[illegible]

[illegible] Scen[illegible]

[illegible]

[illegible]

[illegible] Like [illegible]

[illegible]

[illegible]

[illegible]

[illegible]

That you may be ready / for the accomplishment of your [illegible]

[illegible]

[illegible]

[illegible]

me a few

1 suffix.

[illegible]

ವೈತಾಳಿಕ—(ತೆರೆಯಲ್ಲಿ)

ವೃತ್ತಂ || ಮಳಯಂ ಮೇರುವಿಸಂತೆ ಗಂದವುಡಿಯಿಂ ಪೊಂಬಣ್ಣಮಂಬೀರುತಂ |
ಗಳೆ ಸಿಂದೂರದೆ ಮುಂಬಗಲ್ವಿಸಿಲವೋಲ್ ಕೆಂಬಣ್ಣಮಂತೋರೆ ಕ ||
ಣ್ಗೊಳೆ ಸಂಗೀತದೊಳೋಪರಂದಿಗೆಸರಂ ಚಕ್ರೇಶ್ವರಾ ಸಿದ್ಧಮಂ | ಡಳಮಾ
ನಿನ್ನ ವಿವಾಹಮಜ್ಜನದ ಪೊಳ್ತೈತಂದುದಂ ಸೂಚಿಕುಂ || ೩೧ ||

ವಿದೂಷಕ—(ಕಿವಿಗೊಟ್ಟು ಕೇಳಿ) ಮಿತ್ರಸೇ, ದೈವಯೋಗದಿಂದ ಈ ಮಂಗಳ ಸ್ನಾನವು ಲಭಿಸಿತು.

ಜೀಮೂತವಾಹನ—(ಸಂತೋಷದಿಂದ) ಮಿತ್ರಸೇ, ಹಾಗಿದ್ದರೆ ನಾವಿನ್ನೇತಕ್ಕೆ ಇಲ್ಲಿರೋಣ? ನಡೆ, ನಮ್ಮ ಮಾತಾಪಿತೃಗಳಿಗೆ ಸಮಸ್ಕರಿಸಿ ಸ್ನಾನಗೃಹಕ್ಕೆ ಹೋಗೋಣ.

ಕಂದ || ಸಾರಾಸುರಾಗವಂಶವ |
ಯೋರೂಪದೊಳೊಂದ್ದೆನಿಪ್ಪ ಕೆಲಬರೆ ಧನ್ಯ ||
ಗ್ಗೊರ್ಗೀರೋರ್ವರಸೋಟದೊಳೊಗೆ |
ದೀರೀತಿಯ ಸಂಗಮಪ್ಪುದೆಂದಾಂ ತಿಳಿವೆಂ || || ೩೨ ||

(ಎಂದೆಲ್ಲರೂ ಹೊರಟುಹೋಗುವರು.)

ದ್ವಿತೀಯಾಂಕಂ ಸಮಾಪ್ತಂ

ತೃತೀಯಾಂಕಂ

(ಅನಂತರ ವಿಟನು ಪಾತ್ರೆಯನ್ನು ಹಿಡಿದಿರುವ ಚೇಟನೊಡನೆ ಪ್ರವೇಶಿಸಿ ಸಂತೋಷದಿಂದ)

ಕಂದ || ಎಡೆವಿಡದೆ ಮದ್ಯರಸಮಂ |
ಕುಡಿವಾಬಲದೇವನುಂ ವಿಯುಕ್ತರಸೆಂದುಂ ||
ಮಡದಿಯರೊಳ್ಕೂಡಿಪ ಪ್ಪೆ |
ಣ್ಬಡೆಯನುಮೆಪನಿಳೆಯೊಳಿರ್ಪರವರ್ಗಳೆ ದೇವರ್ || ೩೩ ||

ಆಹಾ, ಶೇಖರಕನಾದ ನನ್ನ ಬಾಳು ಸಫಲವಾದುದಲ್ಲವೆ?

ಕಂದ || ಕಾದಲೆಯನೆರ್ದೆಯೊಳೊರಗಿಸಿ |
ಸೈದಿಲ್ಪೊಗಂಪಿನೆಸೆವ ಮದ್ಯಮನೀಂಟು ||
ತ್ತಾದರದೆ ಮಲರ್ಗಳಂ ಮುಡಿ ||
ದಾದಂಬಿನದಿಸುವನಾನೆ ಧನ್ಯಂ ನೆಲದೊಳ್ || ೩೪ ||

(ಎಂದು ಅಡಿಯಿಟ್ಟು ಜಾರಿ) ಎಲೋ ಯಾರೋ ನನ್ನನ್ನು ನೂಕುವರು? (ನಕ್ಕು) ನವಮಾಲಿಕೆಯು ನನ್ನನ್ನು ಹಾಸ್ಯಮಾಡುತ್ತಾಳೆ.

ಚೇಟ—ಸ್ವಾಮಿ, ಆಕೆಯಿನ್ನೂ ಬಂದೇಯಿಲ್ಲವಲ್ಲ!

ವಿಟ—(ಕೋಪದಿಂದ) ನೆನ್ನೆ ಪ್ರದೋಷ ಕಾಲದಲ್ಲಿಯೇ, ರಾಜಪುತ್ರಿಯಾದ ಮಲಯವತಿಯ ವಿವಾಹವು ನೆರವೇರಿತು. ಬೆಳಗಾದರೂ ಏಕೆ ಬರಲಿಲ್ಲ. (ಸಂತೋಷದಿಂದ) ಅಥವಾ ಈಗ ಬೆಳೆದ ಮಲಯವತೀ ವಿವಾಹಮಹೋತ್ಸವಕ್ಕಾಗಿ ಬಂದಿರುವ ಸಿದ್ಧವಿದ್ಯಾಧರರೆಲ್ಲರೂ ತಮ್ಮ ತಮ್ಮ ಪ್ರಾಣಕಾಂತೆಯರೊಡನೆ ಈ ಕುಸುಮಾಕರೋದ್ಯಾನಕ್ಕೆ ಬಂದು ಪಾನಸೌಖ್ಯವನ್ನನುಭವಿಸುತ್ತಿರಬಹುದೆಂದೂಹಿಸುವೆನು. ಆದುದರಿಂದ, ಒಂದುವೇಳೆ, ಆ ನವಮಾಲಿಕೆಯು ನನ್ನನ್ನೇ ನಿರೀಕ್ಷಣೆ ಮಾಡುತ್ತಾ ಅಲ್ಲಿಯೇ ಇರಬಹುದು. ಆದಕಾರಣ ಜಾಗ್ರತೆಯಾಗಿ ನಾನೂ ಅಲ್ಲಿಗೆ ಹೋಗುವುದೇ ಒಳ್ಳೇದು. ನವಮಾಲಿಕೆಯಿಲ್ಲದ ಮೇಲೆ ಶೇಖರಕನಿದ್ದು ಫಲವೇನು?

(ಎಂದು ಅಡಿಗಡಿಗೂ ಜಾರುತ್ತಾ ಮುಂದಕ್ಕೆ ಹೊರಡುವನು.)

ಚೇಟ—ಸ್ವಾಮಿ, ಇದೇ ಆ ಕುಸುಮಾಕರೋದ್ಯಾನ. ಒಳಗೆ ಬನ್ನಿ.

ವಿಟ—(ಚೇಟನೊಡನೆ ಉದ್ಯಾನವನವನ್ನು ಪ್ರವೇಶಿಸುವನು.)

ವಿದೂಷಕ—(ಹೆಗಲಿನಮೇಲೆ ವಸ್ತ್ರಯುಗಳವನ್ನು ಹಾಕಿಕೊಂಡು ಪ್ರವೇಶಿಸಿ) ನನ್ನ ಪ್ರಿಯಮಿತ್ರನಾದ ಜೀಮೂತವಾಹನನು ಕುಸುಮಾಕರೋದ್ಯಾನಕ್ಕೆ

సిద్ధం అ: ౧౮౩ శకాం, జగద్గురుయతిరాజు
ఆ అ: షష్ఠీ.
అథ తేఽద్య ద్వారవతి దేవా బలదేవ: నారదోక్తు

కటి: వృత్త్యో కయుతా, నిత్యోక్తశులసానిశా
యుక్తోసదరా
కేశేజా చ శ్రేయసా శ్రీయుక్త ప్రతిపాదయ

standing higher than all

= ౧౩ ఆ
Excel –

ఆ ద్రుమ ప్రకరణ : ౧౫౮ సం. సం ౧౫౯౬

సం. ఉపద్వీపాగా ... శ్రీద్విశ్రీ నక్షత్రాల

౧౫ శ్రేయసా: ?

౧. ౧ సంస్కృత సన్నిధి శ్రీచరణ్యుక్త

అథవా వితీర్ణవ కాలయ కార్య వివాహాల్లబ్ధిర్
రత్నాంబరః అనకలేర శ్రీకేసరం ఉద్దాయ లబ్ధి
నమ పృథు అనసాంగన్ని కవచాయి.

..కర్ణ కంటే శ్రీ శ్రీ ప్రవారకవాయ
వ్నాం।

౧. యారం చే భారం...

అవ్ని వినతేసం కాంతి మధురం నిర్జితాన॥
కులా కతే వలమేవ భూగాత్ర కర్త్ర కంఠసీం

ಬರುವನೆಂಬ ವೃತ್ತಾಂತವು ಈಗತಾನೇ ತಿಳಿಯಬಂತು. ಆದುದರಿಂದ ನಾನೂ ಈ ಕುಸುಮಾಕರೋದ್ಯಾನಕ್ಕೆ ಹೋಗುವೆನು. (ಎಂದು ಮುಂದೆ ಹೋಗಿ) ಓಹೋ! ಇದೇನು! ಆಗಲೇ ಆ ಕುಸುಮಾಕರೋದ್ಯಾನವು ಸಿಕ್ಕಿತು! (ಎಂದು ಪ್ರವೇಶಮಾಡಿ ಭ್ರಮರಬಾಧೆಯನ್ನು ನಟಿಸಿ) ಈ ದುಷ್ಟಮಧುಪಗಳು ನನ್ನ ಇದಿರಾಗಿಯೇ ಓಡಾಡುವುದಕ್ಕೆ ಕಾರಣವೇನು? (ಎಂದು ತನ್ನ ಶರೀರವನ್ನು ಮೂಸಿನೋಡಿಕೊಂಡು) ಸರಿ ಸರಿ, ತಿಳಿಯಿತು. ನಾನು ಅಳಿಯನ ಸಂಗಡ ಬಂದ ಗೆಳೆಯನೆಂದು ಮಲಯಪತಿಯ ಬಂಧುಗಳು ನನಗೆ ಬಣ್ಣವನ್ನು ಬಳಿದು ಸಂತಾನಕ ಪುಷ್ಪಗಳನ್ನು ಮುಡಿಸಿದರು. ಅವರು ಮಾಡಿದ ಆ ಅತ್ಯಾದರವು ಈಗ ನನ್ನನ್ನು ಈ ಕಷ್ಟಕ್ಕೆ ಗುರಿಮಾಡಿತು. ಈಗ ನಾನು ಮಾಡತಕ್ಕದ್ದೇನು? ಅಥವಾ ಮಲಯವತಿಯ ಸಮೀಪದಿಂದ ತಂದಿರುವ ಈ ರಕ್ತಾಂಶುಕ ಯುಗಳದಿಂದಲೇ ಹೆಂಗಸಿನ ಹಾಗೆ ಚೆನ್ನಾಗಿ ಮುಸುಕು ಹಾಕಿಕೊಂಡು ಹೋಗುವೆನು. ಈ ದುಷ್ಟಮಧುಪಗಳು ನನ್ನನ್ನೇನುಮಾಡುವುವೋ ನೋಡುವೆನು.

(ಎಂದು ಮುಸುಕು ಹಾಕಿಕೊಂಡು ಹೊರಡುವನು.)

ವಿಟ—(ನೋಡಿ ಸಂತೋಷದಿಂದ) ಎಲೋ ಚೇಟ, (ಬೆರಲಿಂದ ತೋರಿಸುತ್ತಾ ನಕ್ಕು) ಈ ನವಮಾಲಿಕೆಯು ನನ್ನನ್ನು ನೋಡಿ ಸಾವಕಾಶಮಾಡಿ ಬಂದನೆಂದು ಕೋಪದಿಂದ ಮುಸುಕು ಹಾಕಿಕೊಂಡು ಮತ್ತೊಂದುಕಡೆಗೆ ಹೋಗುತ್ತಿರುವಳು; ಆದುದರಿಂದ ಈಕೆಯನ್ನು ಕಂಠಾಲಿಂಗನಮಾಡಿ ಸಂತೈಸುವೆನು (ಎಂದು ಜಾಗ್ರತೆಯಾಗಿ ವಿದೂಷಕನ ಬಳಿಗೆ ಹೋಗಿ ಕಂಠಾಲಿಂಗನಮಾಡಿಕೊಂಡು ಬಾಯಲ್ಲಿದ್ದ ತಂಬುಲವನ್ನು ಕೊಡುವುದಕ್ಕೆ ಹೋಗುವನು.)

ವಿದೂಷಕ—(ಮದ್ಯದ ವಾಸನೆಯನ್ನು ಸೂಚಿಸುತ್ತಾ ತನ್ನ ಮೂಗನ್ನು ಮುಚ್ಚಿಕೊಂಡು ಮುಖವನ್ನು ತಿರುಗಿಸಿ) ಇದೇನು ಅಲ್ಲಿದ್ದ ಮಧುಪಗಳಿಗೆ ಹೆದರಿ ಎಷ್ಟೋ ಕಷ್ಟದಿಂದ ತಪ್ಪಿಸಿಕೊಂಡು ಇಲ್ಲಿಗೆ ಬಂದರೆ ಇಲ್ಲಿಯೂ ಮತ್ತೊಬ್ಬ ಮಧುಪನಿಗೆ ತುತ್ತಾಗಬೇಕಾಯಿತಲ್ಲಾ!

ವಿಟ—ಓಹೋ ಇದೇನು! ಈಕೆಯು ಕೋಪದಿಂದ ಮುಖವನ್ನು ತಿರುಗಿಸಿಕೊಂಡಳು. (ಎಂದು ನಮಸ್ಕಾರ ಮಾಡುತ್ತಾ ವಿದೂಷಕನ ಕಾಲುಗಳನ್ನು ತನ್ನ ತಲೆಯಮೇಲಿಟ್ಟುಕೊಂಡು) ನವಮಾಲಿಕೇ, ಮನ್ನಿಸು ಮನ್ನಿಸು.

ನವಮಾಲಿಕೆ—(ಬಂದು) "ಎಲೆ ನವಮಾಲಿಕೆ, ಕುಸುಮಾಕರೋದ್ಯಾನಕ್ಕೆ ಹೋಗಿ ವನಪಾಲಿಕೆಯಾದ ಪಲ್ಲವಿಕೆಯನ್ನು ಕಂಡು ಯುವರಾಜನಾದ ಜೀಮೂತವಾಹನನು ಮಲಯವತೀ ಸಮೇತನಾಗಿ ಉದ್ಯಾನಕ್ಕೆ ಬರುವನಾದುದರಿಂದ ಜಾಗ್ರತೆಯಾಗಿ ತಮಾಲವೀಥಿಕೆಯನ್ನು ಅಲಂಕರಿಸುವಂತೆ ಹೇಳಿ ಬಾ" ಎಂದು ಮಲಯ

ವತಿಯು ತಾಯಿಯು ನನಗೆ ನೇಮಿಸಿದ್ದಳು. ನಾನೂ ಅದನ್ನು ಹೇಳಿದುದಾಯಿತು. ಆದುದರಿಂದ ನನ್ನನ್ನು ರಾತ್ರಿಯಿಂದಲೂ ಕಾಣದೆ ಉತ್ಸುಕನಾಗಿರುವ ಶೇಖರಕನು ಎಲ್ಲಿರುವನೋ ಹುಡುಕುವೆನು. (ಎಂದು ನೋಡಿ ಕೋಪದಿಂದ) ಈ ಶೇಖರಕನು ಬೇರೆ ಯಾವಳೋ ಒಬ್ಬ ಸ್ತ್ರೀಯನ್ನು ಸಂತೈಸುತ್ತಿರುವನು.

ವಿಟ—ಕಂದ || ಹರಿಹರಪಿತಾಮಹರ್ಕರ್ಗಳ |
ಚರಣಕ್ಕಂಮಣಿಯದನಿತುಕೊರ್ವ್ವಿರ್ಪ್ಪೀಶೇ ||
ಖರಕಂನಿನ್ನಡಿದಾವರೆ |
ಗೆರಗಿರ್ಪ್ಪೊಡ್ಡರಮುಳಿಸಿದೇಕೆನವಮಾಲಿಕೆಪೇಳ್ || ೩೫ ||

ವಿದೂಷಕ—ಎಲೋ ತೊತ್ತಿನಮಗನೆ, ಮದ್ಯಪಾಯಿ, ಇಲ್ಲಿಗೆ ನವಮಾಲಿಕೆ ಏಕೆ ಬಂದಾಳು ?

ನವಮಾಲಿಕೆ—(ನೋಡಿ ಮುಗುಳುನಗೆಯಿಂದ) ಮದಪರವಶನಾದ ಶೇಖರಕನು ಏನೆಂದು ತಿಳಿದು ಈ ಆರ್ಯಮೈತ್ರೇಯನನ್ನು ಸಮಾಧಾನಪಡಿಸುತ್ತಿರುವನೋ ಕಾಣೆ. ಇರಲಿ, ಕಪಟಕೋಪದಿಂದ ಇವರಿಬ್ಬರನ್ನೂ ಹಾಸ್ಯಮಾಡುವೆನು.

ಚೇಟ—(ಶೇಖರಕನನ್ನು ಕೈಯಿಂದಲ್ಲಾಡಿಸುತ್ತಾ) ಸ್ವಾಮಿ, ಈಕೆಯನ್ನು ಬಿಡಿ. ಈಕೆಯು ನವಮಾಲಿಕೆಯಲ್ಲ. ಕೋಪಗೊಂಡು ಕೆಂಡದಂತೆ ಕೆಂಪಾಗಿರುವ ಕಣ್ಣುಗಳಿಂದ ಕಿಡಿಕಿಡಿಯಾಗಿ ನೋಡುತ್ತಾ ಬಂದಿರುವ ಈಕೆಯಲ್ಲವೆ ನವಮಾಲಿಕೆ!

ನವಮಾಲಿಕೆ—ಶೇಖರಕನೆ! ನೀನು ಯಾರೆಂದು ತಿಳಿದು ಈಕೆಯನ್ನು ಸಂತೈಸುತ್ತಿದ್ದೆ ?

ವಿದೂಷಕ—(ಮುಸುಕನ್ನು ತೆಗೆದು) ನಾನು ನಿರ್ಭಾಗ್ಯಳ ಮಗನೆಂದು.

ವಿಟ—(ನೋಡಿ) ಎಲೋ! ವೃದ್ಧಮರ್ಕಟ! ಏನು ಶೇಖರಕನನ್ನು ಹಾಸ್ಯ ಮಾಡುವೆಯೊ? (ಎಂದು ಚೇಟನನ್ನು ಕುರಿತು) ಎಲೋ ಚೇಟ! ನಾನು ನವಮಾಲಿಕೆಯನ್ನು ಸಮಾಧಾನಪಡಿಸಿ ಬರುವವರೆಗೂ ಇವನನ್ನು ಬಿಡಬೇಡ.

ಚೇಟ—ಅಪ್ಪಣೆ.

ವಿಟ—(ವಿದೂಷಕನನ್ನು ಬಿಟ್ಟು ನವಮಾಲಿಕೆಯ ಕಾಲಿಗೆ ಬಿದ್ದು) ನವಮಾಲಿಕೆ, ಮನ್ನಿಸು ಮನ್ನಿಸು.

ವಿದೂಷಕ—ನಾನು ತಪ್ಪಿಸಿಕೊಂಡು ಹೋಗುವುದಕ್ಕೆ ಇದೇ ಸಮಯ (ಎಂದು ಓಡುವುದಕ್ಕೆ ಯತ್ನಿಸುವನು.)

ಚೇಟ—(ವಿದೂಷಕನ ಯಜ್ಞೋಪವೀತವನ್ನು ಹಿಡಿದುಕೊಳ್ಳಲು ಅದು ಕಿತ್ತು ಹೋಗುವುದು.)

[illegible]
[illegible]

... [illegible]
[illegible] ॥

[illegible] ॥

[illegible] ॥

[illegible] ... [illegible]
[illegible] ॥

[illegible]
[illegible] : ॥
[illegible] ?

[illegible]

[illegible]

[illegible]

[illegible]

ಚೇಟ—ಎಲೋ! ಹೊಂಬಣ್ಣದ ಕೋತಿ, ಎಲ್ಲಿ ಓಡಿಹೋಗುವೆ? (ಎಂದು ಉಟ್ಟಿದ್ದ ಬಟ್ಟೆಯಿಂದ ಕಟ್ಟಿ ಎಳೆಯುವನು.)

ವಿದೂಷಕ—ಪೂಜ್ಯಳೆ, ನವಮಾಲಿಕೆ; ದಯವಿಟ್ಟು ನನ್ನನ್ನು ಬಿಡಿಸು.

ನವಮಾಲಿಕೆ—(ನಕ್ಕು) ನನ್ನ ಕಾಲಿಗೆ ಅಡ್ಡಬಿದ್ದರೆ ಬಿಡಿಸುವೆನು.

ವಿದೂಷಕ—(ಕೋಪದಿಂದ) ಏನು? ನಾನು ರಾಜಮಿತ್ರನಾಗಿ ನಿನ್ನ ಕಾಲಿಗೆ ಬೀಳಬೇಕೋ? ಎಲೆ, ತೊತ್ತಿನಮಗಳೆ:

ನವಮಾಲಿಕೆ—(ಬೆರಲಿಂದ ಹೆದರಿಸುತ್ತಾ ಮುಗುಳುನಗೆಯಿಂದ) ಇರಲಿ. ಈಗ ನೀನೇ ಬಂದು ನನ್ನ ಕಾಲುಗಳನ್ನು ಕಟ್ಟಿಕೊಳ್ಳುವಂತೆ ಮಾಡುವೆನು. (ಎಂದು ಶೇಖರಕನನ್ನು ಕುರಿತು) ಶೇಖರಕನೆ, ಏಳು! ಏಳು. ನಿನ್ನ ತಪ್ಪನ್ನು ಮನ್ನಿಸಿರುವೆನು. (ಎಂದು ಕಂಠಾಲಿಂಗನಮಾಡಿ ಹುಬ್ಬಿನ ಸನ್ನೆಯಿಂದ) ಇವನು ಅಳಿಯನ ಜತೆಯಲ್ಲಿ ಬಂದಿರುವ ಗೆಳೆಯನು. ನೀನು ಈತನನ್ನು ನೋಡಿ ಸನ್ಮಾನಿಸದೆ ಕಳುಹಿಸಿದ ಪಕ್ಷದಲ್ಲಿ, ಆ ವೃತ್ತಾಂತವೇನಾದರೂ ವಿಶ್ವಾವಸು ಮಹಾರಾಜನಿಗೆ ತಿಳಿಯಬಂದರೆ, ಆತನು ಕೋಪಮಾಡುವನು. ಆದುದರಿಂದ ಈತನನ್ನು ವಿಶ್ವಾಸಪೂರ್ವಕವಾಗಿ ಬಹುಮಾನಿಸು.

ವಿಟ—ಅಪ್ಪಣೆ (ಎಂದು ವಿದೂಷಕನನ್ನು ಕಂಠಾಲಿಂಗನ ಮಾಡಿ) ಅಯ್ಯಾ, ನೀನು ಅಳಿಯನ ಸಂಗಡ ಬಂದ ಗೆಳೆಯನೆಂದು ತಿಳಿದು, ನಾನು ಹಾಸ್ಯಮಾಡಿದೆ. (ಎಂದವನನ್ನು ತಿರುಗಿಸುತ್ತಾ) ಅಥವಾ, ನನಗೆ ನಿಜವಾಗಿಯೂ ಸ್ಮೃತಿಯಿರಲಿಲ್ಲವಾದುದರಿಂದ ನಿನ್ನನ್ನು ಹಾಸ್ಯಮಾಡಿದೆ. (ಎಂದುಟ್ಟಿದ್ದ ಬಟ್ಟೆಯನ್ನು ಸಿಂಬಿಮಾಡಿ ಪೀಠವನ್ನು ಕೊಟ್ಟು) ಅಯ್ಯಾ, ಇಲ್ಲಿ ಕುಳಿತುಕೋ (ಎಂದು ಕುಳ್ಳಿರಿಸುವನು.)

ವಿದೂಷಕ—(ಮನಸ್ಸಿನಲ್ಲಿ) ದೈವಯೋಗದಿಂದ ಈತನಿಗೆ ಮದ್ಯದ ವೇಗವು ಸ್ವಲ್ಪ ಇಳಿದಿರುವಂತಿದೆ. (ಎಂದು ಕುಳಿತುಕೊಳ್ಳುವನು.)

ವಿಟ—ನವಮಾಲಿಕೆ, ನಿನಗೂ ಈತನಿಗೂ ಜತೆಯಲ್ಲಿಯೇ ಬಹುಮಾನಿಸಬೇಕೆಂದಿರುವೆನಾದುದರಿಂದ ನೀನೂ ಇವನ ಜತೆಯಲ್ಲಿಯೇ ಕುಳಿತುಕೊ.

ನವಮಾಲಿಕೆ—(ನಕ್ಕು ಕುಳಿತುಕೊಳ್ಳುವಳು.)

ವಿಟ—ಎಲೋ! ಚೇಟ, ಒಳ್ಳೇ ಮದ್ಯವನ್ನು ಈ ಬಟ್ಟಲಿಗೆ ತುಂಬು.

ಚೇಟ—(ಮದ್ಯವನ್ನು ಬಟ್ಟಲಿಗೆ ತುಂಬುವನು.)

ವಿಟ—(ತನ್ನ ತಲೆಯಲ್ಲಿದ್ದ ಹೂವನ್ನು ಆ ಬಟ್ಟಲಿನ ನಡುವೆ ಇಟ್ಟು ಮಣಕಾಲೂರಿ ಕುಳಿತುಕೊಂಡು ಬಟ್ಟಲನ್ನು ನವಮಾಲಿಕೆಗೆ ಕೊಡುತ್ತಾ) ನವಮಾಲಿಕೆ, ಇದನ್ನು ಕುಡಿದುಕೊಡು.

ನವಮಾಲಿಕೆ—ಅಪ್ಪಣೆ (ಎಂದು ಕುಡಿದು ಕೊಡುವಳು.)

ವಿಟ—(ವಿದೂಷಕನ ಸಮೀಪಕ್ಕೆ ಬಟ್ಟಲನ್ನು ತೆಗೆದುಕೊಂಡುಹೋಗಿ) ನವಮಾಲಿಕಾ ಮುಖಸಂಸರ್ಗದಿಂದ ಅತಿ ರುಚಿಕರವಾದ ಈ ಮದ್ಯವನ್ನು ಶೇಖರಕನಾದ ನಾನೊಬ್ಬನು ಕುಡಿದಿರುವೆನೇ ಹೊರತು ಮತ್ತೊಬ್ಬರಿಗೂ ಇದರ ರುಚಿಯೇ ತಿಳಿಯದು. ಆದುದರಿಂದ ಇದನ್ನು ಕುಡಿ; ಇದಕ್ಕಿಂತಲೂ ನಾನು ನಿನಗಿನ್ನೇನು ಬಹುಮಾನಿಸಲಿ?

ವಿದೂಷಕ—(ಆಶ್ಚರ್ಯದಿಂದ ಮುಗುಳುನಗೆ ನಕ್ಕು) ಅಯ್ಯಾ, ನಾನು ಬ್ರಾಹ್ಮಣನಲ್ಲವೆ?

ವಿಟ—ಓಹೋ! ನೀನು ಬ್ರಾಹ್ಮಣನೋ? ಆದರೆ ನಿನ್ನ ಜನಿವಾರವೆಲ್ಲಿ?

ವಿದೂಷಕ—ಈ ಚೇಟನು ನನ್ನನ್ನು ಹಿಡಿದೆಳೆಯುವಾಗ ಅದು ಕಿತ್ತುಹೋಯಿತು.

ನವಮಾಲಿಕೆ—(ನಕ್ಕು) ಆದರೆ ವೇದಾಕ್ಷರಗಳನ್ನಾದರೂ ಹೇಳು.

ವಿದೂಷಕ—ಪೂಜ್ಯಳೆ, ನಿನ್ನ ಮದ್ಯಗಂಧದಿಂದ ನನಗೆ ವೇದಾಕ್ಷರಗಳೂ ಮರೆತುಹೋದುವು. ಅಥವಾ ನಿನ್ನ ಸಂಗಡ ಜಗಳವಾಡಿ ಫಲವೇನು? ನಾನು ಬ್ರಾಹ್ಮಣನಾದರೂ ಚಿಂತೆಯಿಲ್ಲ; ನಿನ್ನ ಕಾಲಿಗೆ ಬೀಳುವೆನು.

(ಎಂದು ನವಮಾಲಿಕೆಯ ಕಾಲಿಗೆ ಬೀಳುವುದಕ್ಕೆ ಹೋಗುವನು.)

ನವಮಾಲಿಕೆ—(ಕೈಗಳಿಂದ ತಡೆದು) ಆರ್ಯನೆ, ಬೇಡ ಬೇಡ. (ಶೇಖರಕನನ್ನು ಕುರಿತು) ಶೇಖರಕನೆ, ಇವನು ನಿಜವಾಗಿಯೂ ಬ್ರಾಹ್ಮಣನಲ್ಲವೆ? (ಎಂದು ವಿದೂಷಕನಿಗೆ ನಮಸ್ಕರಿಸಿ) ಅಯ್ಯಾ, ನಿನಗೆ ನಮಸ್ಕರಿಸುವೆನು; ಕೋಪಮಾಡಬೇಡ. ನೀನು ಅಳಿಯನಿಗೆ ಪ್ರಾಣಮಿತ್ರನೆಂದು ಯೋಚಿಸಿ ಹಾಸ್ಯಮಾಡಿದೆವು.

ವಿಟ—(ಮನಸ್ಸಿನಲ್ಲಿ) ನಾನೂ ಇವನನ್ನು ಸಮಾಧಾನಪಡಿಸುವೆನು. (ಎಂದು ಅವನ ಕಾಲಿಗೆ ಬಿದ್ದು) ಅಯ್ಯಾ, ಮದಪರವಶನಾದ ನಾನು ಮಾಡಿದ ತಪ್ಪನ್ನು ಮನ್ನಿಸಬೇಕು. ನಾನು ನವಮಾಲಿಕೆಯೊಡನೆ ಪಾನಭೂಮಿಗೆ ಹೋಗಿಬರುವೆನು.

ವಿದೂಷಕ—ಅಯ್ಯಾ, ಮನ್ನಿಸಿಯೇ ಇರುವೆನು. ನಾನೂ ನನ್ನ ಪ್ರಿಯಮಿತ್ರನನ್ನು ನೋಡುವುದಕ್ಕೆ ಹೋಗುವೆನು.

ನವಮಾಲಿಕೆ—(ವಿಟ ಚೇಟರೊಡನೆ ಹೊರಟುಹೋದಳು.)

ವಿದೂಷಕ—ಸದ್ಯಃ ಬ್ರಾಹ್ಮಣನಿಗೆ ಬಂದಿದ್ದ ಅಕಾಲಮೃತ್ಯುವು ತೊಲಗಿತು. ಈಗ ಮದ್ಯಪಾಯಿಗಳ ಸಂಸರ್ಗದಿಂದ ದೂಷಿತನಾದ ನಾನು ಈ ಸರೋವರಕ್ಕಾದರೂ ಹೋಗಿ ಸ್ನಾನಮಾಡುವೆನು. (ಎಂದು ಹೋಗಿ ಸ್ನಾನಮಾಡಿ ತೆರೆಗಿದಿರಾಗಿ ನೋಡಿ) ಓಹೋ! ನನ್ನ ಪ್ರಿಯಮಿತ್ರನು ರತಿಗೆ ಸಮಾನಳಾದ ಮಲಯವತಿಯನ್ನು ಕರೆದುಕೊಂಡು ಈಕಡೆಗೆ ಬರುತ್ತಿರುವನು. ಆದುದರಿಂದ ನಾನೂ ಸಮೀಪಕ್ಕೆ ಹೋಗುವೆನು.

[illegible]

[illegible]
[illegible]
[illegible]

Drunken Watch

[illegible]

[illegible]
[illegible]

[illegible]

[illegible]

[illegible]

Turn to me, dear,
speak

[illegible] ←

[illegible]

(ಅಲಂಕೃತನಾದ ಜೀಮೂತವಾಹನನು ಮಲಯವತಿ ಮತ್ತು ಪರಿವಾರದೊಡನೆ ಪ್ರವೇಶಿಸುವನು.)

ಜೀಮೂತವಾಹನ—

ವೃತ್ತ || ನೋಡೆನೆನ್ನೋಡೆಯಿರ್ಕೆ ತಲೆವಾಗಿಸುತಿರ್ದ್ದಪಳ್ನಿವಟ್ಟುಮಾ | ತಾಡಿಸೆ
ನೀಡಳುತ್ತರಮನೊಂದುಮನೆಪ್ಪಲೊಡಂನಡುಂಗುಪಳ್ || ನಾಡೆಪೊಗಂದಿ
ರುಂಗಿಸುತೆ ಪಾಸಿನೊಳೊಪ್ಪುನಳಾಳಿಪೋಗೆ ತಾಂ | ಕೂಡೆನಡಿಲ್ದುಪೋಪಳೆ
ನಗೀತೆರದಿಂದಮುಮೊಲ್ಮೆಯೊಂದಿಪಳ್ ||

(ಎಂದು ಮಲಯವತಿಯನ್ನು ನೋಡುತ್ತಾ)

ವೃತ್ತ || ಸುಡಿಗೊಂದುಂಪಡಿವಾತುಮಂಕುಡದೆಹುಂಕಾರಂಗಳಿಂಮೌನಮುಂ | ಬಿಡದಿ
ರ್ದೆಂದಪವಹ್ನಿಯಂತುರಿವಬೆಳ್ದಿಂಗಳ್ಗಳೊಳ್ದೀಹಮಂ || ಸುಡುತಿರ್ದ್ದೆಂಪಲ
ವಾನಿರುಳ್ವಗಲ್ಪನಾಸ್ಯಕಾಗ್ರ್ಯದಿಂ ಜಾಸಮಂ | ಪಡೆದಿರ್ದೆಂಪ್ರಿಯೆತ್ತತ್ತಪಃ
ಫಲದೆ ನ್ನಿನ್ನಾ ಸ್ಯಾಬ್ಜಮುಂಕಂಡಪೆಂ || || ೩೬ ||

ಮಲಯವತಿ—(ಕೈಮರೆಮಾಡಿ) ಎಲೆ! ಈತನು ನೋಡುವುದಕ್ಕೆ ಮಾತ್ರವೇ ಮನೋಹರನಾಗಿಲ್ಲ; ಮಾತನಾಡುವುದರಲ್ಲಿಯೂ ಬಹು ನಿಪುಣನು.

ಚತುರಿಕೆ—ಎಲೆ! ಮಲಯವತಿ, ನೀನು ಹೇಳಿದುದು ನಿಜವೇ ಸರಿ. ಮಾತನಾಡುವುದರಲ್ಲಿಯೂ ಬಹು ನಿಪುಣನೆಂದು ಹೇಳಿದೆಯಲ್ಲ! ಇದಕ್ಕೆ ಕಾರಣವೇನು?

ಜೀಮೂತವಾಹನ—ಎಲೆ! ಚತುರಿಕೆ, ಕುಸುಮಾಕರೋದ್ಯಾನದ ಮಾರ್ಗವನ್ನು ತೋರಿಸು.

ಚತುರಿಕೆ—ಆರ್ಯನೇ, ದಯೆಮಾಡಬೇಕು, ದಯಮಾಡಬೇಕು.

ಜೀಮೂತವಾಹನ—(ಹೊರಟು ಮಲಯವತಿಯನ್ನು ಕುರಿತು) ಪ್ರಿಯಳೇ, ಮೆಲ್ಲಮೆಲ್ಲಗೆ ಬಾ.

ವೃತ್ತಂ || ಬಡನಡು ಬಟ್ಟಬಲ್ಮೊಲೆಯ ಭಾರದೆನೊಂದಿರೆ ಜೇರೆಹಾರಮೇಂ | ಜಡಿವನಿ
ತಂಬದಿಂ ತೊಡೆಗಳಾಯಸವೊಂದಿರೆ ಕಾಂಚಿಯೇಕೆಕೇ || ನಡಿ ತೊಡೆ
ಜಿಣ್ಸಿನಿಂ ಸೆಡೆಯೆ ನೇವುರಮೇಕೆ ನಿಜಾಂಗದಿಂ ತೊಡಂ | ಬಡೆದುಮದೇಕೆ
ಸಿಂಗರಿಸಿ ನೀಂ ಶ್ರಮಮೊಂದುವೆ ಸುಂದರಾಂಗಿಯೇ || ೩೮ ||

ಚತುರಿಕೆ—ಆರ್ಯನೆ, ಇದೇ ಕುಸುಮಾಕರೋದ್ಯಾನ; ಪ್ರವೇಶಿಸಬಹುದು, ಇಲ್ಲಾದರೋ;

ವೃತ್ತಂ || ಪ್ರಸರಚ್ಛಾಂದಸತೋಯಸೇಕದೆ ಲತಾಗೇಹಂಕುಳಿರ್ಕೊಳ್ಗೆಡೆ, ಭಾ| ವಿಸಿ
ನೀರ್ದೇಗ್ಗರ್ಗಳನಾದವೆಂದು ಜಳಯಂತ್ರಾರಾವಮಂಸೋಗೆಗಳ್ || ಒಸೆ
ಯುತ್ತಾಡೆ,ಪಿಪಾಸೆಯಿಂ ಖಗಕುಲಂ ಮೇಲ್ವಾಯ್ವುದುಂ ಯಂತ್ರದಿಂ|
ದೊಸರ್ದೀರ್ವಾರಿಪರಾಗಪಿಂಗತೆಯನಾಂತಾವಾಲಮಂತೀವುಗುಂ ||೩೯||

ವೃತ್ತಂ || ಕಲರವದಿಂದೆಬಳ್ಳಿವನೆಮಾರ್ದನಿಯಿಂಕುಡೆ , ಮೆಯ್ಯೊಳಿರ್ಪ್ಪಕ| ಮ್ಮ
ರ್ವುಡಿ ಯಣ್ಪುಗಂದವುಡಿಯಂತಿರೆಸೌಸವಮಾಯೆ, ಚಿತ್ತದೊಳ್ || ಸಲೆ
ಯುತೆತನ್ನ ಕಾದಲೆಯಬಂಜೆರೆದೀಂಟಿಮರಂದಧಾರೆಯಂ| ಮಲರುಣಿಬಂಬ
ಲೊಪ್ಪುವುದು ಪಾನಸುಖಂಬಡುವಂತಿರೆತ್ತಲುಂ || ೪೦ ||

ವಿದೂಷಕ—(ಸಮೀಪಕ್ಕೆ ಬಂದು) ಅಯ್ಯಾ, ನಿನಗೆ ಜಯವಾಗಲಿ. ಮಲಯವತಿಯನ್ನು ಸೋಡಿ) ಪೂಜ್ಯಳೇ, ನಿನಗೆ ಕ್ಷೇಮವುಂಟಾಗಲಿ.

ಜೀಮೂತವಾಹನ—ಮಿತ್ರನೇ, ಏಕಿಷ್ಟು ತಡೆಮಾಡಿದೆ?

ವಿದೂಷಕ—ಅಯ್ಯಾ ಮಿತ್ರನೆ, ನಾನು ಜಾಗ್ರತೆಯಲ್ಲಿಯೇ ನಿನ್ನ ಸಮೀಪಕ್ಕೆ ಬರಬೇಕೆಂದು ಹೊರಟೆನು. ಆದರೆ ನಿನ್ನ ವಿವಾಹೋತ್ಸವಕ್ಕೆ ಬಂದಿದ್ದ ಸಿದ್ಧವಿದ್ಯಾಧರರ ಪಾನಭೂಮಿಯನ್ನು ನೋಡಬೇಕೆಂಬ ಕುತೂಹಲದಿಂದ ಅಲ್ಲಿ ಇಲ್ಲಿ ಅಲೆದುಕೊಂಡು ಬಂದಕಾರಣ ಇಷ್ಟು ತಡವಾಯಿತು. ಈಗ ನೀನೂ ಇದನ್ನು ನೋಡು.

ಜೀಮೂತವಾಹನ—(ನೋಡುತ್ತಾ) ಅಯ್ಯಾ, ನೀನು ಹೇಳಿದುದು ನಿಶ್ಚಯ.

ವೃತ್ತಂ || ಒಡಲೊಳ್ಛಂದನದಣ್ಪನಾಂತ್ಪಲರ್ದಸಂತಾನಪ್ರಸೂನಂಗಳಂ| ಮುಡಿದುಂ,
ಬೆಳ್ಳುಡೆಯಲ್ಲಿ ಚಿತ್ರಿಸುವವೊಲ್ಕಣ್ಗೊಳ್ವಮಾಣಿಕ್ಯದೊ || ಳ್ದೊಡವಂತಾ
ಳ್ದುತೆ, ಕೂಡಿಸಿದ್ಧಜನದಿಂ ವಿದ್ಯಾಧರರ್ಮದ್ಯಮಂ| ಕುಡಿವರ್ಕಾಂತೆಯ
ರೊಲ್ದುಪೀರ್ದುಳಿದುದಂ ಶ್ರೀಚಂದನಚ್ಛಾಯೆಯೊಳ್ || ೪೧ ||

ಆದುದರಿಂದ ನಡೆ. ನಾವೂ ತಮಾಲವೀಧಿಕೆಗೆ ಹೋಗೋಣ.

(ಎಂದು ಹೊರಡುವನು.)

ವಿದೂಷಕ—ಅಯ್ಯಾ, ಇದೇ ತಮಾಲವೀಧಿಕೆಯಲ್ಲವೆ? ಪೂಜ್ಯಳಾದ ಈಕೆಯ ಮುಖವು ಈ ಶರತ್ಕಾಲದ ಬಿಸಿಲಿನಿಂದ ಬಾಡಿರುವಂತಿದೆ; ಆದುದರಿಂದ ಈ ಶಿಲಾತಲದಲ್ಲಿ ಸ್ವಲ್ಪ ಕುಳಿತುಕೊ.

ಜೀಮೂತವಾಹನ—ಮಿತ್ರನೇ! ಚೆನ್ನಾಗಿ ಹೇಳಿದೆ.

[illegible] | ౨౮౬

[illegible]

[illegible]

[illegible]

[illegible]

అథ [illegible]

పరాశ్య: [illegible]

[illegible]

[illegible]

[illegible]

[illegible]

రఘునాథ [illegible]

ఏతన్నామం శ్రీ హరేః హరేః శ్రవణం జిహ్వా కీర్తయతాః సాత్త్వ
తాజ్ఞాయిత్వ నాస్తినా, కలహం ద్విష క్రాంతే జయం॥

గురుం (ప్రణమ్య సద్భావం అభీష్ట ఫలదాయకం॥

౧- వ్రత ప్రారంభే, తద్దినం భవతి ప్రీణాతి
కల్ప సిద్ధ నాం స్వరలి గ్రహం తు శ్రీ
శ్రద్ధః భక్తః సాధన్య శ్రీ
[illegible]

ಕಂದ ॥ ಅಸಿಯಳವೊಗಮಿದು ಕದಪಿನೊ ।
ಳಿಸೆವಾಬೆಳ್ವೆಳಗಿನಿಂದೆಸಸಿಯುಂ ಬಾಯ್ಕೇ ॥
ಳಿಸಿ ಬಿಸುಪಿಂಕೆಂಪೇರುತೆ ।
ಬಿಸಜಮುಮಂಜಯಿಸಲೀಗಳೆಳವುದು ನಿಸದಂ ॥ ೪೨ ॥

(ಎಂದು ಮಲಯವತಿಯ ಕೈಯನ್ನು ಹಿಡಿದುಕೊಂಡು) ಪ್ರಿಯೇ, ಮಲಯವತಿ, ಇಲ್ಲಿ ಕುಳಿತುಕೊಳ್ಳೋಣ.

(ಎಲ್ಲರೂ ಕುಳಿತುಕೊಳ್ಳುವರು.)

ಜೀಮೂತವಾಹನ—(ಮಲಯವತಿಯ ಮುಖವನ್ನೆತ್ತಿ ನೋಡುತ್ತಾ) ಪ್ರಿಯಳೇ, ನಾನು ಕುಸುಮಾಕರೋದ್ಯಾನವನ್ನು ನೋಡಬೇಕೆಂಬ ಕುತೂಹಲದಿಂದ ಸುಮ್ಮನೆ ನಿನ್ನನ್ನು ಆಯಾಸಪಡಿಸಿದೆನು; ಏಕೆಂದರೆ

ಕಂದ ॥ ಇಳಿಕೆಯೆಲತೆಯಂಕುಡುವು ।
ವ್ವೆಳೆದಳಿರಂಪಳಿಯೆತೊಂಡೆವಣ್ಣುಟಿ ನಿನ್ನೀ ॥
ತೊಳತೊಳಪ ಮೊಗಮಿನಂದನ ।
ಮಳಿಕುಂತಳೆ ಪೆರತುವನಮದೇಂ ನಂದನಮೇ । ॥ ೪೩ ॥

ಚತುರಿಕೆ—(ಮುಗುಳುನಗೆಯಿಂದ ವಿದೂಷಕನನ್ನು ಕುರಿತು) ಅಯ್ಯಾ, ಮೈತ್ರೇಯನೆ, ಈತನು ಈಕೆಯನ್ನು ಬಣ್ಣಿಸಿದನಲ್ಲ ಅದನ್ನು ಕೇಳಿದೆಯೋ ?

ವಿದೂಷಕ—(ಮುಗುಳುನಗೆಯಿಂದ) ಚತುರಿಕೆ, ಏತಕ್ಕೆ ಹೀಗೆ ಗರ್ವಪಡುವೆ ? ನಮ್ಮಲ್ಲಿತಾನೇ ಸುಂದರರಿಲ್ಲವೇ ? ಎಷ್ಟೋ ಜನರಿದಾರೆ; ಆದರೆ ಒಬ್ಬರೂ ಬಣ್ಣಿಸುವುದಿಲ್ಲ; ಅದಕ್ಕೆ ಮಾತ್ಸರ್ಯವೇ ಕಾರಣವು.

ಚತುರಿಕೆ—(ಮುಗುಳುನಗೆಯಿಂದ) ಆದರೆ ನಾನು ನಿನ್ನನ್ನು ಬಣ್ಣಿಸುವೆನು.

ವಿದೂಷಕ—(ಸಂತೋಷದಿಂದ) ಅಷ್ಟಾದರೆ ನಾನು ಬದುಕಿದೆ. ಇವನು ಪುನಃ ನನ್ನನ್ನು ಇಂಥವನು ಅಂಥವನು ಕಪಿಯಂಥವನೆಂದು ಹೇಳಬಾರದು. ಹಾಗೆ ನೀನು ದಯವಿಟ್ಟು ಬಣ್ಣಿಸಬೇಕು.

ಚತುರಿಕೆ—ಆರ್ಯನೇ, ನೀನು ವಿವಾಹೋತ್ಸವದಲ್ಲಿ ಉಪವನದೊಳಗೆ ನಿದ್ದೆ ಮಾಡುತ್ತಾ ಕಣ್ಣುಗಳನ್ನು ಮುಚ್ಚಿಕೊಂಡಿರುವಾಗ ಬಹಳ ಮನೋಹರನಾಗಿ ಕಾಣಿಸಿದೆ, ಆದುದರಿಂದ ಈಗಲೂ ನೀನು ಹಾಗಿದ್ದರೆ ಬಣ್ಣಿಸುವೆನು.

ವಿದೂಷಕ—ಹಾಗೆಯೇ ಆಗಲಿ.

(ಎಂದು ನಿದ್ದೆಮಾಡುವವನ ಹಾಗೆ ಕಣ್ಣುಗಳನ್ನು ಮುಚ್ಚಿಕೊಂಡಿರುವನು.)

ಚತುರಿಕೆ—(ಮನಸ್ಸಿನಲ್ಲಿ) ಓಹೋ! ಈತನಿಗೆ ನನ್ನ ಮಾತಿನಲ್ಲಿ ಚೆನ್ನಾಗಿ ನಂಬಿಕೆಯುಂಟಾದ ಹಾಗಿದೆ; ಇರಲಿ. ನೀಲೀರಸಕ್ಕೆ ಸಮಾನವಾದ ತಮಾಲಪಲ್ಲವ ರಸದಿಂದ ಇವನ ಮುಖವೆಲ್ಲಾ ಕಪ್ಪಾಗುವಂತೆ ಮಾಡುವೆನು. (ಎಂದು ಹೊಂಗೇ ಚಿಗುರನ್ನು ತಂದು ಹಿಂಡುತ್ತಿರುವಳು.)

(ಜೀಮೂತವಾಹನನೂ ಮಲಯವತಿಯೂ ವಿದೂಷಕನನ್ನು ನೋಡುತ್ತಿರುವರು.)

ಜೀಮೂತವಾಹನ—ಮಿತ್ರನೇ, ಈ ಚತುರಿಕೆಯು ನಮ್ಮೆಲ್ಲರನ್ನೂ ಬಿಟ್ಟು ನಿನ್ನನ್ನೇ ಬಣ್ಣಿಸುವಳಲ್ಲ. ನೀನೆಷ್ಟು ಧನ್ಯನೋ ಕಾಣೆ!

ಚತುರಿಕೆ—(ಹೊಂಗೇಚಿಗುರಿನ ರಸವನ್ನು ವಿದೂಷಕನ ಮುಖಕ್ಕೆ ಬಳಿದು ಕಪ್ಪಾಗುವಂತೆ ಮಾಡುವಳು.)

ಮಲಯವತಿ—(ಮುಗುಳುನಗೆಯಿಂದ ವಿದೂಷಕನ ಮುಖವನ್ನು ನೋಡಿ ಜೀಮೂತವಾಹನನ ಮುಖವನ್ನು ನೋಡುವಳು.)

ಜೀಮೂತವಾಹನ—(ಸಂತೋಷದಿಂದ)

ಕಂದ || ನಳಿನಾಕ್ಷಿ ನಿನ್ನ ಚೆಂದುಟಿ |
ದಳಿರೊಳ್ ಕಣ್ಗೊಳಿಸಲಿಂದು ನಸುನಗೆನನೆಗಳ್ ||
ನಲವಿಂನೋಳ್ಪೆನ್ನಯ ಕ |
ಣ್ಗಗಳಿವಾಂತುವು ಫಳಮನೆಂಬುದಿದುವೇಚಿತ್ರಂ || || ೪೪ ||

ವಿದೂ—ಎಲೆ, ನೀನೇನು ಮಾಡಿದೆ?

ಚತುರಿಕೆ—(ನಾನು ಮಾಡಿದ್ದೇನು?) ಬಣ್ಣಿಸಿದೆ.

ವಿದೂಷಕ—(ಕೈಯಿಂದ ಮುಖವನ್ನು ಸವರಿ ಕೈಯನ್ನು ನೋಡಿ ಕೋಪ ದಿಂದ ದಂಡಕಾಷ್ಠವನ್ನೆತ್ತಿ ಹೊಡೆಯುತ್ತಾ) ಎಲೆ ತೊತ್ತಿನಮಗಳೆ, ಇದು ರಾಜ ಸನ್ನಿಧಿ; ನಾನು ನಿನಗೇನುಮಾಡಲಿ? (ಎಂದು ಮಲಯವತಿಯನ್ನು ಕುರಿತು) ಪೂಜ್ಯಳೇ, ಈ ತೊತ್ತಿನ ಮಗಳು ನನ್ನ ಮುಖಕ್ಕೆಲ್ಲಾ ಕಪ್ಪುಬಳಿದು ನನ್ನ ಮಾನ ವನ್ನು ಕಳೆದಳು; ಆದುದರಿಂದ ನಾನು ಇಲ್ಲಿದ್ದು ಫಲವೇನು? ಇನ್ನೆಲ್ಲಾದರೂ ಹೊರಟುಹೋಗುವೆನು. (ಎಂದು ಹೊರಟುಹೋಗುವನು.)

ಚತುರಿಕೆ—ಆಹಾ! ಆರ್ಯಮೈತ್ರೇಯನು ನನ್ನ ಮೇಲೆ ಕೋಪಮಾಡಿಕೊಂಡು ಹೊರಟುಹೋದನು; ಆದುದರಿಂದ ಬೇಗಹೋಗಿ ಆತನನ್ನು ಸಮಾಧಾನಪಡಿ ಸುವೆನು.

ಮಲಯವತಿ—ಎಲೇ ಚತುರಿಕೆ, ನನ್ನೊಬ್ಬಳನ್ನೇ ಬಿಟ್ಟು ನೀನೆಲ್ಲಿಹೋಗುವೆ?

[illegible]
[illegible]

[illegible]
[illegible]

Flower of a smile on your lips
In my eyes the fruit.

[illegible]

[illegible]

[illegible]

[illegible]
[illegible]
[illegible]
[illegible]

[illegible]

[illegible]
[illegible]

[illegible]

[illegible]

ಚತುರಿಕೆ—(ಕಿರುನಗೆಯಿಂದ ಮಲಯವತಿಯನ್ನು ಕುರಿತು) ಎಲೇ ಮಲಯವತಿ, ಬಹುಕಾಲದವರೆಗೂ ನೀನು ಒಬ್ಬಂಟಿಗಳಾಗಿ ಹೀಗೆಯೇ ಇರು. (ಎಂದು ಹೊರಟು ಹೋಗುವಳು.)

ಜೀಮೂತವಾಹನ—

ವೃತ್ತ || ಬೆಳರ್ಗೆಂಪಂಬೀರುತಂ ಬೆಂಗದಿರನ ಬಿಸುಪಿಂ ಮೇಲೆಪಾಯ್ತುರ್ಪ್ವದಂತಂ |
ಗಳಭಾಸ್ವದ್ದೀಪ್ತಿಯಿಂದಂ ವಿಶದರುಚಿರಕಿಂಜಲ್ಕಮಂ ತೋರಿಸುತ್ತಂ ||
ಪೊಳೆವೀನಿನ್ನಾನನಂ ತಾವರೆಗೆಣೆದಿಟ್ಟಮೇನೆಂಬೊಡೀತಾಣದೊಳ್ಮ | ಲ್ಲಳಿ
ವಿಂದೈತಂದುಬಂಡಂಕುಡಿದೊಸೆಯದುದೊಂದೂಣೆಯಂ ಪ್ರಾಣಕಾಂತೇ ||

ಮಲಯವತಿ—(ನಕ್ಕು ಮುಖವನ್ನು ಬಗ್ಗಿಸಿಕೊಳ್ಳುವಳು.)

ಜೀಮೂತವಾಹನ—(ಅವಳ ಮುಖವನ್ನೆತ್ತಿ ಪುನಃ ಅದನ್ನೇ ಹೇಳುವನು.)

ಚೇಟಿ—(ಜಾಗ್ರತೆಯಾಗಿ ಸಮೀಪಕ್ಕೆ ಬಂದು) ಯುವರಾಜನಾದ ಮಿತ್ರಾವಸುವು ಯಾವುದೋ ಒಂದು ಕಾರ್ಯವಿರುವುದರಿಂದ ನಿಮ್ಮನ್ನು ನೋಡಬೇಕೆಂದು ಬಂದಿರುವನು.

ಜೀಮೂತ—ಪ್ರಿಯೇ, ನೀನು ಮನೆಗೆ ನಡೆ, ಮಿತ್ರಾವಸುವಿನೊಡನೆ ಮಾತನಾಡಿಕೊಂಡು ನಾನೂ ಬಂದೆ.

ಮಲಯವತಿ—(ಚೇಟಿಯೊಡನೆ ಹೊರಟುಹೋಗುವಳು.)

ಮಿತ್ರಾವಸು—(ಬಂದು)

ಕಂದ || ವಿಪುಲಬಲನೆನಿಸಿನಾನಾ |
ರಿಪುವೆನಿಸಿದನಂಪೊಣರ್ಕೆಯೊಳ್ಸದೆಯದೆ ಕೇಳ್ ||
ನೃಪನಿನ್ನ ರಾಜ್ಯಮವನಿಂ |
ದಪಹೃತಮಾಯ್ತೆಂದದೆಂತುನಾಣುಳಿದೆಂಬೆಂ || || ೪೬ ||

ಆದರೂ ತಿಳಿಸದೆ ಹೋಗುವುದು ಸರಿಯಲ್ಲವೆಂದು ಯೋಚಿಸಿ, ತಿಳಿಸುವುದಕ್ಕೆ ಬಂದೆನು (ಎಂದು ಸಮೀಪಕ್ಕೆ ಬರುವನು.)

ಜೀಮೂತವಾಹನ—ಅಯ್ಯಾ, ಮಿತ್ರಾವಸು, ಇಲ್ಲಿ ಕುಳಿತುಕೋ.

ಮಿತ್ರಾವಸು—(ಕುಳಿತುಕೊಳ್ಳುವನು.)

ಜೀಮೂತ—(ನೋಡಿ) ಓಹೋ! ಇದೇನು ನೀನು ಬಹಳ ಗಾಬರಿಯಾದವನಂತೆ ಕಾಣುವೆ?

ಮಿತ್ರಾವಸು—ಮತಂಗಹತಕನಿರುವಾಗ ಗಾಬರಿ ಎಂದರೇನು?

ಜೀಮೂತ—ಆದರೆ ಆ ಮತಂಗನೇನುಮಾಡಿದನು ?

ಮಿತ್ರಾವಸು—ಅವನು ಮಾಡುವುದೇನು ? ಅವನಿಗೆ ವಿನಾಶಕಾಲವು ಸಮೀಪಿಸಿದ ಕಾರಣ ನಿನ್ನ ರಾಜ್ಯಕ್ಕೆ ಮುತ್ತಿಗೆ ಹಾಕಿದನು.

ಜೀಮೂತ—(ಸಂತೋಷದಿಂದ, ಮನಸ್ಸಿನಲ್ಲಿ) ಈತನ ಮಾತು ನಿಶ್ಚಯವಾಗಿದ್ದೀತೇ ?

ಮಿತ್ರಾವಸು—ಅಯ್ಯಾ, ಅವನನ್ನು ನಿರ್ಮೂಲಮಾಡುವುದಕ್ಕೆ ನನಗಪ್ಪಣೆಯನ್ನು ಕೊಡಬೇಕು. ಬಹಳವಾಗಿ ಮಾತನಾಡಿ ಫಲವೇನು ?

ವೃತ್ತಂ || ಬಿಸಿಲೊಂದಿರ್ಪಪಗಲ್ಗೆ ಮೂರ್ಚಿತಮುಮಂ ಕಾರ್ಗ್ಗಾಲಮೈತಂದುದೆಂ| ದುಸಿ
ರ್ವಂತೊಪ್ಪುವಪಾರುಮಾಡಗಳಿನೀಸಿಧ್ಧಾಳಿನಿನ್ನಾಜ್ಞೆಯಂ || ಕುಸುಮಂ
ಬೋಲ್ತಲೆಯಲ್ಲಿ ತಾಳ್ದು ರಣಕೈದಿರ್ಕುಂ ಭವದ್ವೈರಿನಾ| ಶನಮಾಶಂ
ಕಿನಮನ್ನೃಪಾಲಪಟಲಂಕೈಸಾರ್ದುದೈರಾಜ್ಯಮುಂ || || ೪೮ ||

ಅಥವಾ ನನಗೆ ಸೈನ್ಯವೇತಕ್ಕೆ ?

ವೃತ್ತಂ || ಒರೆಯಿಂದುರ್ಚಿದಬಾಳಡಾಳಮತಿರೋಷೋದ್ಧೂತಮಾಗಿರ್ಪಕೇ| ಸರ
ಮಂ ಪೋಲ್ತಿರೆಮೇಲೆ ಪಾಯ್ದುಧುರದೊಳ್ನಾನೊರ್ವನಾಗಿರ್ದೊಡಂ ||
ಇರಿದಾ ವೈರಿಮತಂಗನಂಕಳಿಪಿದೆಂವೈವಸ್ವತಾವಾಸಕೆಂ| ದರಿಯೈ ಮತ್ತ
ಗಜೇಂದ್ರನಂ ಹರಿಯವೋಲ್ವಿದ್ಯಾಧರಾಧೀಶ್ವರಾ || ೪೮ ||

ಜೀಮೂತ—(ಕಿವಿಗಳನ್ನು ಮುಚ್ಚಿಕೊಂಡು ಮನಸ್ಸಿನಲ್ಲಿ) ಅಹಹಾ| ಎಷ್ಟು ಕಠಿನವಾಗಿ ಮಾತನಾಡಿದನು ? ಅಥವಾ ಇದು ಹೀಗೆಯೇ (ಮುಗುಳುನಗೆಯಿಂದ ಪ್ರಕಾಶಂ) ಮಿತ್ರಾವಸುವೇ, ಇದು ಎಷ್ಟರಲ್ಲಿದೆ ? ಆ ಮತಂಗನಿಗಿಂತಲೂ ನೀನೆಷ್ಟೋ ಬಲಶಾಲಿ. ಹೀಗಿರುವಾಗ ಅವನನ್ನು ಸಂಹರಿಸುವುದು ನಿನಗೊಂದು ದೊಡ್ಡದೇ ? ಆದರೆ—

ಕಂದ || ಪ್ರಿದಿತ್ತಪೆನೆನ್ನೊಡಲುಮ|
ನೆರೆಯದೊಡಂ ಪರರ್ಗೆಕರುಣದಿಂ ಪುಲ್ಗೆಣೆಯೆಂ ||
ದರಿತಾರಾಜ್ಯಮನೆಳಸುತೆ|
ಶರೀರಿವಧಪಾಪಕೆಂತುನಾನನುಮತಿಪೆಂ || || ೪೯ ||

ಮತ್ತು ಕ್ಲೇಶಾದಿ ಶತ್ರುಗಳನ್ನು ಬಿಟ್ಟಿರುವ ನನಗೆ ಆತನ ವಿಷಯದಲ್ಲಿ ಶತ್ರುಬುದ್ಧಿಯೇ ಇಲ್ಲ. ಆದುದರಿಂದ ನನಗೆ ನೀನೇನಾದರೂ ಪ್ರಿಯವನ್ನು ಮಾಡಬೇಕೆಂದಿದ್ದರೆ ರಾಜ್ಯಪ್ರಾಪ್ತಿಗಾಗಿ ಕ್ಲೇಶಪಡುತ್ತಿರುವ ಅವನನ್ನು ದಯವಿಟ್ಟು ಬಿಟ್ಟುಬಿಡು.

[illegible] ?
[illegible]
[illegible]
[illegible]
[illegible]
meaning of [illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible] a long sound
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
to become a slave & i.e. [illegible]

[illegible])

[illegible]

[illegible] ॥

– ([illegible]) [illegible]

[illegible]

[illegible]

[illegible] The [illegible] ended

[illegible]

[illegible]

[illegible]

[illegible]

ಮಿತ್ರಾವಸು—(ಸಂತೋಷದಿಂದಲೂ ಕೋಪದಿಂದಲೂ ನಗುತ್ತಾ) ನಮಗೆ ಅಷ್ಟು ಅಪಕಾರಮಾಡಿರುವ ಆ ನೀಚನನ್ನು ದಯವಿಟ್ಟು ಬಿಡುವುದೆಂದರೇನು ?

ಜೀಮೂತ—(ಮನಸ್ಸಿನಲ್ಲಿ) ಈಗತಾನೆ ಈತನಿಗೆ ಕೋಪ ಬಂದಿರುವುದರಿಂದ ಸಮಾಧಾನಪಡಿಸುವುದು ಅಸಾಧ್ಯವಾಗಿದೆ. ಆದುದರಿಂದ ಹೀಗೆ ಹೇಳುವೆನು (ಪ್ರಕಾಶಂ) ಮಿತ್ರಾವಸುವೇ! ನಡೆ. ಒಳಮನೆಗೆ ಹೋಗಿ ಅಲ್ಲಿಯೇ ಮಾತ ನಾಡೋಣ. ಈಗಲಾದರೋ ಸಂಜೆಯಾಗುತ್ತಾ ಬಂತು. ಇದೋ ನೋಡು.

ವೃತ್ತಂ || ತಾವರೆಮೊಗ್ಗೆಯೆಂಬಸೆರೆಯಂ ಬವರಕ್ಕೆ ಕಳಲ್ಚುತಂಸೆಯಂ | ತೀವಿಕರಾಗ್ರ
ದಿಂದೆ ಮುದಮಿತ್ತಖಿಳರ್ಗೆ ಪೊಗಳ್ವಸಿದ್ಧರಿಂ || ಸೇವಿತನಪ್ಪನೇಸರಿವನ
ಸ್ತಮನೊಂದುವೊಡಂ ಸ್ತವಾಸ್ಪದಂ | ಭಾವಿಸಲೋಕಕೊಳ್ವನೆಸಗಲ್
ಗಡಿವಂಗೊದವಿರ್ಪುದಾಯಸಂ || ೫೦ ||

(ಎಂದೆಲ್ಲರೂ ಹೊರಟುಹೋಗುವರು.)

ತೃತೀಯಾಂಕಂ ಸಮಾಪ್ತಂ

ಚತುರ್ಥಾಂಕಂ

(ರಕ್ತವಸ್ತ್ರಯುಗಳವನ್ನು ಹಿಡಿದಿರುವ ದ್ವಾರಪಾಲಕನೂ ಕಂಚುಕಿಯೂ ಪ್ರವೇಶಿಸುವರು)

ಕಂಚುಕಿ—

ಕಂದ || ಅಡಿಗಡಿಗಂಸ್ಖಲಿತಂಗಳ |
ನೆಡೆಸೇರ್ಪಡಿಸುತ್ತೆರಾಣಿವಾಸಕೆ ಜೆಸನಂ ||
ಒಡರಿಸುತ್ತೆದಂತನೀತಿಯ |
ನಡರ್ದಿರ್ನೀಗಳ್ಪಳವೆಯಿಂದೆನೃಪನಂ ಪೋಲ್ವೆಂ || || ೫೧ ||

ದ್ವಾರಪಾಲಕ—ಅಯ್ಯಾ, ವಸುಭದ್ರನೆ, ಎಲ್ಲಿ ಹೊರಟೆ?

ಕಂಚುಕಿ—ಅಯ್ಯಾ, ಕೇಳು,—ಹತ್ತು ದಿನಗಳವರೆಗೆ ಮಲಯವತಿಗೂ ಜೀಮೂತವಾಹನನಿಗೂ ರಕ್ತ ವಸ್ತ್ರಗಳನ್ನು ತೆಗೆದುಕೊಂಡು ಹೋಗಿ ಕೊಡಬೇಕೆಂದು ಯುವರಾಜ ಮಿತ್ರಾವಸುವಿನ ತಾಯಿಯು ನನಗಾಜ್ಞಾಪಿಸಿರುವಳು. ಈಗ ರಾಜಪುತ್ರಿಯಾದ ಮಲಯವತಿಯು ತನ್ನತ್ತೆಯಮನೆಗೆ ಹೋಗಿರುವಳು. ಜೀಮೂತವಾಹನನಾದರೋ ಯುವರಾಜನಾದ ಮಿತ್ರಾವಸುವಿನೊಡನೆ ಸಮುದ್ರವೇಲೆಯನ್ನು ನೋಡಬೇಕೆಂದು ಹೋಗಿರುವನೆಂಬ ವೃತ್ತಾಂತವು ತಿಳಿಯಬಂತು. ಈಗ ರಾಜಪುತ್ರಿಯ ಸಮೀಪಕ್ಕೆ ಹೋಗುವುದು ಒಳ್ಳೆಯದೋ! ಅಥವಾ ಆ ಜೀಮೂತವಾಹನನ ಸಮೀಪಕ್ಕೆ ಹೋಗುವುದು ಒಳ್ಳೆಯದೋ ಯಾವುದೂ ತಿಳಿಯದು.

ದ್ವಾರಪಾಲಕ—ಅಯ್ಯಾ ವಸುಭದ್ರನೆ, ಆ ರಾಜಪುತ್ರಿಯ ಸಮೀಪಕ್ಕೆ ಹೋಗುವುದೇ ಒಳ್ಳೆಯದು, ಏಕೆಂದರೆ ಆತನು ಒಂದುವೇಳೆ ಇಷ್ಟುಹೊತ್ತಿಗೆ ಹಿಂತಿರುಗಿ ಅಲ್ಲಿಗೆ ಬಂದಿರಬಹುದು.

ಕಂಚುಕಿ—ಸುನಂದನೆ, ಚೆನ್ನಾಗಿ ಹೇಳಿದೆ. ಈಗ ನೀನೆಲ್ಲಿಗೆ ಹೋಗುವೆ?

ದ್ವಾರಪಾಲಕ—ಅಯ್ಯಾ, ಕೇಳು—ಈಗ ನಡೆಯುವ ದೀಪಾವಳ್ಯುತ್ಸವದಲ್ಲಿ ವತ್ಸೆಯಾದ ಮಲಯವತಿಗೂ ಅಳಿಯನಾದ ಜೀಮೂತವಾಹನನಿಗೂ ಉತ್ಸವಾನುರೂಪವಾಗಿ ಯಾವುದಾದರೂ ಒಂದು ಮರ್ಯಾದೆಯನ್ನು ಮಾಡಬೇಕೆಂದು ಮಿತ್ರಾವಸುವಿನೊಡನೆ ಹೇಳಿಬರುವಹಾಗೆ ವಿಶ್ವಾವಸುಮಹಾರಾಜನು ನನಗೆ ನೇಮಿಸಿರುವನು. ಆದ್ದರಿಂದ ನಾನು ಮಿತ್ರಾವಸುವನ್ನು ಕರೆದುಕೊಂಡು ಬರುವುದಕ್ಕೆ ಹೋಗುವೆನು. ನೀನೂ ಆ ರಾಜಪುತ್ರಿಯಾದ ಮಲಯವತಿಯ ಸಮೀಪಕ್ಕೆ ಹೋಗು.

(ಎಂದಿಬ್ಬರೂ ಹೊರಟುಹೋಗುವರು.)

[illegible]

[illegible] fault

[illegible]

[illegible]

[illegible]

[illegible]

[illegible]

[illegible] ([illegible] equivalent)

new yr day acc to [illegible] which comes in the month of [illegible]

[illegible]

[illegible]

[illegible]

[illegible]

[illegible] Opportunity's [illegible] we live here to no purpose

[illegible] Emerging from

[illegible]

[illegible]

[illegible]

[illegible]

[illegible] Boiling [illegible] ([illegible] S.D)

The tide is coming white with innumerable shells rolling with the waves

[illegible]

[illegible]

water scented with the eructations of the sea monsters who have swallowed the leaves of clove trees

[illegible]

[illegible]

[illegible]

[illegible]

[illegible]

(ಇದು ಶುದ್ಧವಿಷ್ಕಂಭವು)

(ಜೀಮೂತವಾಹನನು ಮಿತ್ರಾವಸುವಿನೊಡನೆ ಪ್ರವೇಶಿಸುವನು)

ಜೀಮೂತ—ವೃತ್ತ || ಪಾಸರೆಯಾಸನಂ ಪಸಲೆ ವಾಸು ಮರಂಗಳ ತಳ್ತತಣ್ಣೆಳಲ್ |
ವಾಸನಿವೇಶಮೊಜ್ಜರದ ನೀರ್ಕುಡಿನೀರೆಳಬಿಕ್ಕೆಯೂಟಮು || ದ್ಭಾಸಿಮೃಗ
ವ್ರಜಂ ಕೆಳೆಯಿವೆಲ್ಲವುಬೇಡದೆ ಸಿಲ್ಕುಗುಂ ಗಡೀ| ಲೇಸೆನಿಸಿರ್ಪ ಕಾಡೊಳೆರೆ
ವರ್ದೊರೆಕೊಳ್ಳರಿದೊಂದೆ ಊಣೆಯಂ || || ೫೨ ||

ಮಿತ್ರಾವಸು—(ಮೇಲೆ ನೋಡಿ) ಅಯ್ಯಾ, ಬೇಗಬೇಗ ನಡೆ, ಸಮುದ್ರದಿಂದ ಹೊರಡುವುದಕ್ಕೆ ಇದೇ ಸಮಯ.

ಜೀಮೂತವಾಹನ—(ಕಿವಿಗೊಟ್ಟು ಕೇಳಿ) ಅಯ್ಯಾ, ನೀನು ಹೇಳಿದ್ದು ನಿಶ್ಚಯ.

ಕಂದ || ನೀರಾಸೆಯಪ್ಪಳಿಸಿಫೇಂ|
ಕಾರಂಗೆಯೆಭೋಂಕಲಖಿಲಪರ್ವತಗುಹೆಗಳ್ ||
ಮಾರುಲಿಯೆ ಕಿವಿಯೊಡೆಯೆಮಿತಿ|
ಮೀರಿದ ಶಂಖಂಗಳಲೆಯೆ ಪೊಸಲಿದ್ದಪರಿಗುಂ || || ೫೩ ||

ಮಿತ್ರಾವಸು—ಅಯ್ಯಾ, ಇದೋ ನೋಡು ! ಬಂದೇಬಂತು.

ಕಂದ || ಅಗಿದಳ್ಕರಿಂಲವಂಗದ|
ಚಿಗುರಂ ಮದದಾನೆನೆಗಳ್ಗುಗಿದಿರಲೆತ್ತಂ ||
ಮಗಮಗಿಪ ನೀರ್ಗಳಿಂದೇಂ|
ಸೊಗಯಿಪುದೋ ರತ್ನರಂಜಿತಂ ಕಡಲದಡಂ || || ೫೪ ||

ಜೀಮೂತವಾಹನ—ಅಯ್ಯಾ, ಮಿತ್ರಾವಸುವೆ, ನೋಡು ನೋಡು ! ಶುಭ್ರವಾಗಿರುವ ಶರತ್ಕಾಲದ ಮೇಘಗಳಿಂದ ಪರಿವೃತಗಳಾಗಿರುವ ಈ ಮಲಯಪರ್ವತದ ಸಾನುಪ್ರದೇಶಗಳು ಹಿಮವತ್ಪರ್ವತದ ಶಿಖರಗಳಂತೆ ಹೊಳೆಯುತ್ತಿವೆ.

ಮಿತ್ರಾವಸು— ಅಯ್ಯಾ, ಇವು ಮಲಯಪರ್ವತದ ಸಾನುಪ್ರದೇಶಗಳಲ್ಲ. ಸರ್ಪಗಳ ಎಲುವುಗಳ ರಾಶಿಗಳಲ್ಲವೆ !

ಜೀಮೂತವಾಹನ—(ಭಯದಿಂದ) ಅಯ್ಯೋ ! (ಇನ್ನೇನುಗತಿ !) ಇಷ್ಟು ಸರ್ಪಗಳು ಒಂದೇವೇಳೆಯಲ್ಲಿ ಸಾಯುವುದಕ್ಕೆ ಕಾರಣವೇನು ?

ಮಿತ್ರಾವಸು—ಅಯ್ಯಾ, ಇವು ಒಂದೇವೇಳೆಯಲ್ಲಿ ಸಾಯಲಿಲ್ಲ. ಹೇಳುವೆನು ಕೇಳು—ಪೂರ್ವದಲ್ಲಿ ಗರುಡನು ತನ್ನ ರೆಕ್ಕೆಗಳ ಗಾಳಿಯಿಂದ ಏಳು ಸಮುದ್ರಗಳ

ನೀರನ್ನೂ ಅಲೆದಾಡಿಸಿ ಪಾತಾಳಕ್ಕೆ ಹೋಗಿ ಪ್ರತಿದಿನದಲ್ಲಿಯೂ ಸರ್ಪಗಳನ್ನು ತಿನ್ನುತ್ತಾ ಇದ್ದನು.

ಜೀಮೂತವಾಹನ—(ಭಯದಿಂದ) (ಅಯ್ಯೋ !) ಕಷ್ಟ ಕಷ್ಟ ! ಬಹು ಅಕಾರ್ಯವನ್ನು ಮಾಡುತ್ತಿದ್ದನು. ಆಮೇಲೆ ಆಮೇಲೆ,

ಮಿತ್ರಾವಸು—ಆಮೇಲೆ ನಾಗರಾಜನಾದ ವಾಸುಕಿಯು ನಾಗಲೋಕದ ಸರ್ಪಗಳೆಲ್ಲಾ ಸತ್ತುಹೋದರೆ, ತನ್ನ ಪಟ್ಟಣವು ಪಾಳಾಗುವುದೆಂದು ಯೋಚಿಸಿ ಗರುಡನಿಗೆ ಹೇಳಿದನು.

ಜೀಮೂತವಾಹನ—(ವಿಶ್ವಾಸದಿಂದ) ಏನು? ಮೊದಲು ನನ್ನನ್ನು ತಿನ್ನು ಎಂದೊ?

ಮಿತ್ರಾವಸು—ಅಲ್ಲ ಅಲ್ಲ.

ಜೀಮೂತವಾಹನ—ಆದರೆ ಇನ್ನೇನು?

ಮಿತ್ರಾವಸು—"ನೀನು ಬರುವ ಸಂಭ್ರಮವನ್ನು ನೋಡಿದೊಡನೆಯೇ ನಾಗಕನ್ಯಕೆಯರಿಗೆ ಗರ್ಭಸ್ರಾವವುಂಟಾಗಿ ಸಾವಿರಾರು ಮರಿಗಳು ಸತ್ತುಹೋಗುತ್ತವೆ. ಇದರಿಂದ ನನಗೂ ನಿನಗೂ ಇಬ್ಬರಿಗೂ ನಷ್ಟವಾಗುತ್ತದೆ. ಆದ್ದರಿಂದ ನೀನು ಪ್ರತಿದಿನವೂ ಇಲ್ಲಿಗೆ ಬಂದು ತೆಗೆದುಕೊಂಡು ಹೋಗುವ ಆಹಾರವನ್ನು ಸಮುದ್ರತಟದಲ್ಲಿಯೇ ನೀನಿದ್ದರೆ ಪ್ರತಿದಿವಸವೂ ಒಂದೊಂದು ಹಾವಿನ ಮೇರೆ ನಿನ್ನ ಸಮೀಪಕ್ಕೆ ನಾನೇ ಕಳುಹಿಸುವೆನು" ಎಂದು.

ಜೀಮೂತವಾಹನ—ಅಯ್ಯೋ! ನಾಗರಾಜನು ಸರ್ಪಗಳನ್ನು ಕಾಪಾಡುವುದಕ್ಕೆ ಇಷ್ಟು ಕಷ್ಟಪಟ್ಟನೆ?

ಕಂದ || ಉರಗಾಧೀಶಂಗಿಚ್ಚಾರ್ಥ |
ಸಿರನಾಲಗೆಯಿರೆಯುಮೇಂಫಲಂ ನಿಜತನುವಂ ||
ಗರುಡಂಗಿತ್ತೊರ್ವನನಾಂ |
ಪೊರವೆನೆನಲ್ ಜಿಹ್ವೆಯೊಂದುಮಿಲ್ಲೆನಿಸಿದುದೇ || || ೫೫ ||

ಮಿತ್ರಾವಸು—ಪಕ್ಷಿರಾಜನಾದ ಗರುಡನು ಆ ವಾಸುಕಿಯ ಮಾತಿಗೆ ಒಪ್ಪಿಕೊಂಡನು.

ಕಂದ || ಈರೀತಿಯೊಳೊಪ್ಪಿದ ಫಣಿ |
ವೈರಿಯ ಸೋವತದ ಪಾವಿನೆಲ್ವುಗಳಿವುನೀ ||
ಹಾರಮಹೀಧ್ರದತೆರದಿಂ |
ತೋರುತೆ ಬೆಳೆದಪುವು ಬಳೆದುವೊಯ್ಯನೆ ಬಳೆಗುಂ || || ೫೬ ||

సానన్ద నాగరత్నప్రోతం రమాలాలిత ... ।

ప్రతిదిన ... నానా ఆభరణయుత ... :

సీసనాగ ... ...   గ్రంథకః

౫౧- ఓం, సాం కృష్ణం ప్రయచ్ఛతి ?   Key to char... not to acti... [illegible]

౨. ... రత్నాకర సంక్రాన్తి ... ప్రసూతి
భుజంగ ... నామ ... : ।

సంతతి ... । ... [illegible]

౫౨- ... నాగరాజ ... :।
... [illegible]
... [illegible]

... [illegible]

౨ - ప్రతి ... [illegible]

... [illegible]
... [illegible]
... [illegible]
... [illegible]

[illegible]

? [illegible]

Small writing

[illegible]

[illegible]

[illegible]

beset with many dangers

[illegible]

[illegible]

satisfy curiosity

Opportunity

[illegible]

ಜೀಮೂತವಾಹನ—ಆಶ್ಚರ್ಯ ! ಆಶ್ಚರ್ಯ !

ಕಂದ || ಒಡಲಿದು ಸರ್ವಾಶುಚಿಗ |
ಳ್ಗಿಡೆ ತಾನೊಂದಿದುಪಕಾರಮಂ ನೆನೆಯದು ಮೇಣ್ ||
ಮಡಿವುದಿದೆಂಬುದ ನರಿಯದೆ |
ಜಡಮತಿಗಳಿದರ್ಕ್ಕೆಮೆಸಗುವರ್ ಪೊಲ್ಲದುದಂ || || ೫೭ ||

ಅಯ್ಯೋ ! ಕಷ್ಟ ಕಷ್ಟ ! ಈ ಸರ್ಪಗಳಿಗೆ ಬಂದಿರುವ ಆಪತ್ತಿಗೆ ಕೊನೆಯೇ ಕಾಣುವುದಿಲ್ಲವಲ್ಲಾ ! (ಮನಸ್ಸಿನಲ್ಲಿ) ನನ್ನ ದೇಹವನ್ನು ಆ ಗರುಡನಿಗೆ ಕೊಟ್ಟು ಯಾವುದಾದರೂ ಒಂದು ಸರ್ಪವನ್ನು ಬದುಕಿಸುವುದಕ್ಕೆ ನನ್ನಿಂದಾದೀತೇ !

ದ್ವಾರಪಾಲಕ—(ಬಂದು) ಪರ್ವತಶಿಖರವನ್ನು ಹತ್ತಿದೆನು. (ನೋಡಿ) ಆರ್ಯ ಮಿತ್ರಾವಸುವು ಅಳಿಯನಾದ ಜೀಮೂತವಾಹನನ ಸಮೀಪದಲ್ಲಿಯೇ ಇರುವನು. ಇರಲಿ ! ಸಮೀಪಕ್ಕೆ ಹೋಗುವೆನು. (ಎಂದು ಸಮೀಪಕ್ಕೆ ಹೋಗಿ ನಮಸ್ಕರಿಸಿ) ರಾಜಪುತ್ರನಿಗೆ ವಿಜಯವಾಗಲಿ !

ಮಿತ್ರಾವಸು—ಸುನಂದನೇ ! ಯಾತಕ್ಕೆ ಇಲ್ಲಿಗೆ ಬಂದೆ ?

ಸುನಂದ—(ಕಿವಿಯಲ್ಲಿ ಹೇಳುವನು.)

ಮಿತ್ರಾವಸು—ಅಯ್ಯಾ, (ನನ್ನ) ತಂದೆಯವರು ನನ್ನನ್ನು ಬರಹೇಳಿದರಂತೆ.

ಜೀಮೂತ—(ಆದರೆ ನಡೆ) ನಡೆ.

ಮಿತ್ರಾವಸು—ಅಯ್ಯಾ, ಅನೇಕ ದೋಷಗಳಿಂದ ಕೂಡಿದ ಈ ಪ್ರದೇಶದಲ್ಲಿ ಕುತೂಹಲದಿಂದ ಬಹುಕಾಲದವರೆಗೆ ನೀನು ನಿಲ್ಲಕೂಡದು.

(ಮಿತ್ರಾವಸುವೂ ದ್ವಾರಪಾಲಕನೂ ಹೊರಟುಹೋದರು.)

ಜೀಮೂತವಾಹನ—ನಾನು ಈ ಪರ್ವತದ ಶಿಖರದಿಂದಿಳಿದು ಸಮುದ್ರತಟವನ್ನು ನೋಡುವೆನು. (ಎಂದಿಳಿಯುವನು.) (ತೆರೆಯಲ್ಲಿ) ಹಾ ! ಮಗುವೇ ! ಶಂಖಚೂಡನೇ ! ಆ ಗರುಡನು ನಿನ್ನನ್ನು ತಿನ್ನುತ್ತಿದ್ದರೆ, ನಾನು ಹೇಗೆ ನೋಡಲಿ !

ಜೀಮೂತವಾಹನ—ಈ ಗೋಳಾಟವು ಹೆಂಗಸಿನ ಗೋಳಾಟದಂತಿರುವುದು. ಆದುದರಿಂದ ನಾನು ಜಾಗ್ರತೆಯಾಗಿ ಹೋಗಿ ವಿಚಾರಿಸಿ ಈಕೆ ಯಾರು ಮತ್ತು ಈಕೆಗೆ ಯಾರಿಂದ ಭಯವುಂಟಾಗಿರುವುದು. ಇದೆಲ್ಲವನ್ನೂ ಚೆನ್ನಾಗಿ ತಿಳಿದುಕೊಳ್ಳುವೆನು.

(ಅನಂತರ ಅಳುತ್ತಿರುವ ವೃದ್ಧೆಯೂ ಅವಳ ಮಗನಾದ ಶಂಖಚೂಡನೂ ವಸ್ತ್ರಯುಗಳವನ್ನು ಹಿಡಿದಿರುವ ಕಿಂಕರನೂ ಪ್ರವೇಶಿಸುವರು.)

ವೃದ್ಧೆ—(ಕಣ್ಣೀರುಬಿಡುತ್ತಾ) ಹಾ ! ಮಗುವೇ ! ಶಂಖಚೂಡನೇ ! ನಿನ್ನ

ವಿನಾಶವನ್ನು ಹೇಗೆ ನೋಡಲಿ! (ಎಂದು ಗಲ್ಲವನ್ನು ಹಿಡಿದು) ಮಗುವೆ! ನಿನ್ನ ಈ ಮುಖಚಂದ್ರನಿಲ್ಲದಮೇಲೆ ಪಾತಾಳಲೋಕವೆಲ್ಲಾ ಕತ್ತಲೆಯೇ ಆಗುವುದು.

ಶಂಖಚೂಡ—ಅಮ್ಮಾ, ಏಕೆ ನೀನು ಹೀಗೆ ವ್ಯಸನಪಡುತ್ತಾ ನಮ್ಮನ್ನೂ ಅತಿ ದುಃಖಕ್ಕೆ ಗುರಿಮಾಡುವೆ?

ವೃದ್ಧೆ—(ನೋಡಿ ಶಂಖಚೂಡನ ಮೈ ಸವರಿ,) ಹಾ! ಪುತ್ರ! ಒಂದು ದಿನವೂ ಸೂರ್ಯನ ಬೆಳಕಿಗೆ ಸಿಕ್ಕದ ಕೋಮಲವಾದ ನಿನ್ನ ಶರೀರವನ್ನು ನಿಷ್ಕರುಣನಾದ ಆ ಗರುಡನು ಹೇಗೆ ತಿನ್ನುವನೋ ಕಾಣೆ: (ಎಂದು ಕಂಠದಲ್ಲಿ ಕೈಯಿಟ್ಟು ಅಳುವಳು.)

ಶಂಖಚೂಡ—ಅಮ್ಮಾ, ಸಾಕು(ಸಾಕು.) ನಿನ್ನ ಅಳುವನ್ನು ನಿಲ್ಲಿಸು.

ಕಂದ || ಜನಿಯಿಸಿದೊಡನೆಯೆ ದೇಹಿಯ |
ಸನಿತ್ಯತಾಜನನಿ ತಳ್ಕೆಗೆಯ್ವಳ್ ಧಾತ್ರೀ ||
ಜನದಂತೆ ಬಳಿಕೆ ತಾಯುಂ |
ಮನವೊಸೆದಪ್ಪುವಳಿದರ್ಕೆ ಬಾಗುಳವೋಕೌ || || ೫೮ ||

ವೃದ್ಧೆ—ಮಗು! ಸ್ವಲ್ಪ ನಿಲ್ಲು. ಒಂದು ಮುಹೂರ್ತದವರೆಗೆ ನಿನ್ನ ಮುಖವನ್ನು ನೋಡುವೆನು.

ಕಿಂಕರ—ಅಯ್ಯಾ, ಶಂಖಚೂಡ! ಈಕೆಯ ಮಾತೇನು? ಬಾ, ಪುತ್ರವಾತ್ಸಲ್ಯ ದಿಂದ ಮೋಹಿತಳಾಗಿರುವ ಈಕೆಗೆ ರಾಜಕಾರ್ಯದ ಗೌರವವೇ ತಿಳಿಯದು.

ಶಂಖಚೂಡ—ಇದೋ ಬಂದೆ!

ಕಿಂಕರ—(ಮನಸ್ಸಿನಲ್ಲಿ) ನಾನು ಈ ಶಂಖಚೂಡನನ್ನು ವಧ್ಯಶಿಲೆಯ ಸಮೀಪಕ್ಕೆ ಕರೆದುಕೊಂಡು ಬಂದದ್ದಾಯಿತು. ಇನ್ನು ಈ ವಧ್ಯಚಿಹ್ನವನ್ನು ಇವನಿಗೆ ತೊಡಿಸಿ ವಧ್ಯಶಿಲೆಯನ್ನು ತೋರಿಸುವೆನು.

ಜೀಮೂತವಾಹನ—ಓಹೋ! ಈಕೆಯೇ ಆ ಹೆಂಗಸು. (ಶಂಖಚೂಡನನ್ನು ನೋಡಿ) ನಿಜವಾಗಿ ಈತನೇ ಈಕೆಯ ಮಗನಾಗಿರಬಹುದು. ಈಕೆ ಅಳುವುದಕ್ಕೆ ಕಾರಣವೇನು? (ಸುತ್ತಲೂ ನೋಡಿ) ಈಕೆಯ ಭೀತಿಗೆ ಕಾರಣವೇನೂ ಕಾಣದಲ್ಲ. ನೀನು ಏತಕ್ಕೆ ಹೀಗೆ ಭಯಪಡುತ್ತೀ—ಎಂದು ನಾನು ಹೋಗಿ ವಿಚಾರಿಸಲೆ? ಅಥವಾ ಇವರೂ ಇದೇ ವಿಷಯದಲ್ಲಿ ಮಾತನಾಡುತ್ತಿರುವರಷ್ಟೆ; ಇದರಿಂದಲೇ ಸ್ಪಷ್ಟವಾಗುವುದು. ಆದುದರಿಂದ ಈ ಮರದ ಮರೆಯಲ್ಲಿ ನಿಂತು ಕೇಳುತ್ತಿರುವೆನು.

ಕಿಂಕರ—(ಕಣ್ಣೀರುಬಿಡುತ್ತಾ ಕೈಮುಗಿದು) ಕುಮಾರ ಶಂಖಚೂಡನೇ; ಇದು ರಾಜಾಜ್ಞೆಯಾದುದರಿಂದ ಕರ್ಣಕಠೋರವಾಗಿದ್ದರೂ ನಾನು ನಿನಗೆ ಹೇಳ ಬೇಕಾಗಿದೆ.

[illegible]

[illegible]

Embrace. clasp to chin. — notes [illegible] repetition

[illegible]

[illegible]

[illegible]

typical.

no dramatic
purpose is served
by bringing him so late
& make such repetition
of the same now
He knows the reason
for he has heard the
word?
who?

[illegible] ?

(శ్రుతి) [illegible]
[illegible] :

[illegible]
[illegible] ॥

24 [illegible] : !
[illegible]
[illegible]
[illegible]
[illegible]
[illegible]
[illegible]
[illegible]

ಶಂಖಚೂಡ—ಅಯ್ಯಾ, ಅದೇನು ಹೇಳು.

ಕಿಂಕರ—ನಾಗರಾಜನಾದ ವಾಸುಕಿಯು ಆಜ್ಞಾಪಿಸಿರುವನು.

ಶಂಖಚೂಡ—(ಕೈಮುಗಿದು ವಿಶ್ವಾಸದಿಂದ) ಆತನಾಜ್ಞೆ ಏನು?

ಕಿಂಕರ—ನೀನು—"ಇವೆರಡು ರಕ್ತವಸ್ತ್ರಗಳನ್ನು ಧರಿಸಿ ವಧ್ಯಶಿಲೆಯನ್ನು ಹತ್ತಿ ಕುಳಿತುಕೊಂಡಿರಬೇಕು. ಗರುಡನು ತನ್ನ ಆಹಾರದ ನಿಮಿತ್ತವಾಗಿ ನಿನ್ನನ್ನು ತೆಗೆದುಕೊಂಡು ಹೋಗುವನು" ಎಂದು.

ಜೀಮೂತವಾಹನ—(ಕಣ್ಣೀರುಬಿಡುತ್ತಾ) ಅಯ್ಯೋ! ಪಾಪ! ವಾಸುಕಿಯು ಅತಿ ದೀನನಾದ ಈತನನ್ನು ಕಾಪಾಡಲಿಲ್ಲವಲ್ಲ!

ಕಿಂಕರ—ಶಂಖಚೂಡಾ! ಇವೆರಡು ವಸ್ತ್ರಗಳನ್ನು ತೆಗೆದುಕೋ. (ಎಂದು ಕೊಡುವನು.)

ಶಂಖಚೂಡ—(ಆದರದಿಂದ) ಕೊಡು. (ಎಂದು ತೆಗೆದುಕೊಂಡು,) ಸ್ವಾಮಿಯ ಅಪ್ಪಣೆ.

(ಎಂದು ತಲೆಯಮೇಲೆ ಇಟ್ಟುಕೊಳ್ಳುವನು.)

ವೃದ್ಧೆ—(ತನ್ನ ಮಗನ ಕೈಯಲ್ಲಿದ್ದ ವಸ್ತ್ರಗಳನ್ನು ನೋಡಿ ಎದೆಯನ್ನು ಬಡಿದುಕೊಳ್ಳುತ್ತಾ) ಹಾ! ಪುತ್ರನೇ! ಈ ನಿನ್ನ ವಧ್ಯಚಿಹ್ನವನ್ನು ನಾನು ನೋಡುವ ಹಾಗಾಯಿತೆ!

(ಎಂದು ಮೂರ್ಛಿತಳಾಗುವಳು.)

ಕಿಂಕರ—ಗರುಡನ ಆಗಮನಕಾಲವು ಸಮೀಪಿಸಿತಲ್ಲವೆ? ಆದುದರಿಂದ ಜಾಗ್ರತೆಯಾಗಿ ಹೊರಟುಹೋಗುವೆನು. (ಎಂದು ಹೊರಟುಹೋಗುವನು.)

ಶಂಖಚೂಡ—ಅಮ್ಮಾ, ಸೈರಿಸು, ಸೈರಿಸು!

ವೃದ್ಧೆ—(ಸೈರಿಸಿಕೊಂಡು ಕಣ್ಣೀರು ಬಿಡುತ್ತಾ) ಹಾ! ಜಾತ! ಹಾ! ಮನೋಹರನಾದ ಈ ನಿನ್ನ ಮುಖಚಂದ್ರನನ್ನು ಪುನಃ ನಾನೆಲ್ಲಿ ನೋಡಲಿ! (ಎಂದು ಕಂಠದ ಮೇಲೆ ಕೈಯನ್ನಿಡುವಳು.)

ಜೀಮೂತ—(ಕಂಬನಿದುಂಬಿ) ಅಯ್ಯೋ! ಗರುಡನು ಅತಿ ನಿಷ್ಕರುಣನು!

ವೃತ್ತಂ ॥ ತನಗೆಂಟುಂದೆಸೆ ಶೂನ್ಯಮಾಗೆ ಭರದಿಂದೈತರ್ಪ ಬಾಷ್ಪಾಂಬುಕಾ । ಳ್ಪೊ
ನಲಂತಾಗೆ ಪಲುಂಬಿಪಂಬಲಿಸಿ ಕಂದಾ ನಿನ್ನ ನಾಕ್ಕಾರ್ನವರೆಂ ॥ ದೆಸುತೆಣ್ದೆ
ಕ್ಕನಭೀಕ್ಷ್ಣಿಪೀಕೆ ತೊಡೆಯೊಳ್ ತಾಳ್ದಿರ್ಪ್ಪುದಂಕೂಸನಾ । ವಿನತಾನಂದ
ನನುಣ್ಬುದಂಥನದಯುಂ ವಜ್ರಾತಿಗಾಢಾತ್ಮಕಂ ॥ ॥ ೪೮ ॥

ಶಂಖಚೂಡ—(ತನ್ನ ಕಣ್ಣೀರನ್ನೊರಸುತ್ತಾ) ಅಮ್ಮಾ! ಏಕೆ ವ್ಯಸನಪಡುವೆ? ಸುಮ್ಮನಿರು, ಸುಮ್ಮನಿರು.

ವೃದ್ಧೆ—(ಕಂಬನಿದುಂಬಿ) ಮಗುವೇ! ಹೇಗೆ ಸಹಿಸಿಕೊಂಡು ಸುಮ್ಮನಿರಲಿ? ಏನು ನೀನು ನಿನ್ನ ತಾಯಿಗೆ ಒಬ್ಬನೇ ಮಗನೆಂದು ನಿನ್ನಲ್ಲಿ ಆ ನಾಗರಾಜನಿಗೆ ಕೃಪೆಯುಂಟಾಯಿತೊ? ಅಯ್ಯೋ! ಕೃತಾಂತಹತಕನೇ! ನಿರ್ದಯನಾದ ನೀನು ಇಷ್ಟು ವಿಸ್ತಾರವಾಗಿರುವ ಜೀವಲೋಕದಲ್ಲಿ ನನ್ನ ಮಗನನ್ನೇ ನೆನೆದುಕೊಂಡೆಯಾ? ಅಯ್ಯೋ! ನಿರ್ಭಾಗ್ಯಳಾದ ನಾನು ಹೇಗೂ ಕೆಟ್ಟೆ! (ಎಂದು ಮೂರ್ಛಿತಳಾಗುವಳು.)

ಜೀಮೂತವಾಹನ—

ಕಂದ || ಸಂಧಿಸಿದುವಸುಗಳೀತನ |
ಕಂಧರದಲ್ಲಳಲಳುದ್ಧದೊತ್ತರಿಸಿರ್ಪರ್ ||
ಬಂಧುಗಳೀವಸಂ ನಿಜತನು |
ವಿಂ ಧರ್ಮಕೆ ಸಲಪದಿರ್ಪೊಡೆನ್ನೊಡಲಿಂದೇಂ || || ೬೦ ||

ಆದುದರಿಂದ ಸಮೀಪಕ್ಕೆ ಹೋಗುವೆನು.

ಶಂಖಚೂಡ—ಅಮ್ಮಾ, ನಿನ್ನ ಮನಸ್ಸನ್ನು ಸಮಾಧಾನಪಡಿಸಿಕೊ.

ವೃದ್ಧೆ—ಹಾ! ಪುತ್ರನೇ! ಶಂಖಚೂಡನೇ! ಬಹುಕಷ್ಟಪಟ್ಟು ನಾನು ನಿನ್ನನ್ನು ಪಡೆದೆನಲ್ಲಾ! ಹೇಗೆ ಸಹಿಸಲಿ? ನಾಗಲೋಕವನ್ನೆಲ್ಲಾ ಪಾಲಿಸುವ ಆ ವಾಸುಕಿಯೇ ನಿನ್ನ ಕೈ ಬಿಟ್ಟಮೇಲೆ ನಿನ್ನನ್ನು ಯಾರುತಾನೆ ಕಾಪಾಡುವರು?

ಜೀಮೂತ—(ಅವರ ಸಮೀಪಕ್ಕೆ ಬಂದು) ಇದೋ! ನಾನು ನಾನು.

ವೃದ್ಧೆ—(ತನ್ನ ವಸ್ತ್ರವನ್ನು ಶಂಖಚೂಡನಿಗೆ ಹೊದಿಸಿ ಜೀಮೂತವಾಹನನನ್ನು ಕುರಿತು) ಗರುಡಾ! ವಿನತಾನಂದನಾ! ನನ್ನನ್ನು ಕೊಲ್ಲು, ನಾನು ನಿನ್ನ ಆಹಾರದ ನಿಮಿತ್ತವಾಗಿ ಬಂದಿರುವೆನು.

ಜೀಮೂತವಾಹನ—(ಕಣ್ಣೀರು ಸುರಿಸುತ್ತಾ) ಆಹಾ! ಪುತ್ರವಾತ್ಸಲ್ಯವೇ!

ಕಂದ || ಪಸುಳೆಯೊಳೆರಕದಿನೀಸತಿ |
ದೆಸೆಗೆಟ್ಟಳುತಿರ್ಪುದಂ ವಿಲೋಕಿಸೆಕುಂಭೀ ||
ನಸರಿಪುನಿರ್ದಯನಾದೊಡ |
ಮೊಸಗೆರ್ಗುಂ ಕರುಣರಸ ಮುವನಕಲ್ಲೆರ್ದೆಯೊಳಗಂ || || ೬೧ ||

ಶಂಖಚೂಡ—ಅಮ್ಮಾ, ಏಕೆ ಸಂತಾಪಪಡುವೆ? ಈತನು ಗರುಡನಲ್ಲ; ನೋಡು.

౦॰ ౧ - అస్య: ~~[illegible]~~ [illegible] (కర్తా)

[illegible]

అస్య: [illegible]

అత్ర [illegible] (have seen)

[illegible] before whom.

This will be [illegible] challenge.

No. Therefore not [illegible]

||~~అ~~ధికరణం, సంగతి ప్రాణం, సంబద్ధేం వ్యాఖ్యా:

క్రియాకర్తృత్వం అధికరణ: [illegible]

అథ [illegible]

[illegible]

||ఇతి ఉపసంహారం

[illegible] — [illegible]

[illegible]

[illegible] - [illegible]

[illegible]

[illegible]

[illegible] [illegible] — Shreeke

[illegible]

are you no matter?

[illegible]

ಕಂದ || ಪದೆದುಕರ್ದುಂಕಿದಪಾವಿನ |
ಮಿದುಳ್ಗಳ ನೆತ್ತರೊಳೆನಾಂದಕೊಕ್ಕಿಂಪೆಳರಂ ||
ಒದವಿಸುವ ಗರುಡನೆತ್ತಂ |
ಬಿದುವ್ರೋಲೆನೆವೀಪ್ಸೈದುಸ್ವರೂಪನದೆತ್ತಂ || ||೬೨||

ವೃದ್ಧೆ—ಮಗುವೇ, ನಿನ್ನ ಮರಣದಿಂದ ಭೀತಳಾಗಿರುವ ನನ್ನ ಕಣ್ಣಿಗೆ ಎಲ್ಲೆಲ್ಲಿಯೂ ಗರುಡನೇ ಕಾಣಿಸುತ್ತಿರುವನು.

ಜೀಮೂತವಾಹನ—ಅಮ್ಮಾ, ಭಯಪಡಬೇಡ. ನಾನು ವಿದ್ಯಾಧರನು. ನಿನ್ನ ಮಗನನ್ನು ಕಾಪಾಡುವುದಕ್ಕಾಗಿಯೇ ಇಲ್ಲಿಗೆ ಬಂದಿರುವೆನು.

ವೃದ್ಧೆ—(ಸಂತೋಷದಿಂದ) ಅಪ್ಪಾ, ಪುನಃ ಪುನಃ ಅದನ್ನೇ ಹೇಳು.

ಜೀಮೂತವಾಹನ—ಅಮ್ಮಾ, ಪುನಃ ಹೇಳಿ ಪ್ರಯೋಜನವೇನು? ಕಾರ್ಯದಿಂದಲೇ ತೋರಿಸುವೆನು.

ವೃದ್ಧೆ—(ಕೈಮುಗಿದು) ಅಪ್ಪಾ, ನಾನು ಬದುಕಿದೆ. ನೀನು ಚಿರಂಜೀವಿಯಾಗು.

ಜೀಮೂತ—

ಕಂದ || ಈವಧ್ಯಚಿಹ್ನಮಂನನ |
ಗೀವುದು ತಾಯೆ! ಇದನುಟ್ಟು ನಿನ್ನ ಮಗನನಾ ||
ನೋವಲ್ ಗರುಡಂಗೀಗಳ್ |
ನೋವತಮಂ ಮಾಡಲೆಯ್ದಿದಪೆನೆನ್ನೊಡಲಂ || ||೬೩||

ವೃದ್ಧೆ—(ಕಿವಿಗಳನ್ನು ಮುಚ್ಚಿಕೊಂಡು) ಶಿವಶಿವಾ, ಶಂಖಚೂಡನಿಗೂ ನಿನಗೂ ಸ್ವಲ್ಪವೂ ವ್ಯತ್ಯಾಸವಿಲ್ಲ, ಅಥವಾ ನೆಂಟರೆಲ್ಲರೂ ಕೈಬಿಟ್ಟಿದ್ದರೂ ನನ್ನ ಮಗನಿಗೆ ನಿನ್ನ ದೇಹವನ್ನು ದಾನಮಾಡಿ ಕಾಪಾಡಬೇಕೆಂದಪೇಕ್ಷಿಸಿರುವ ನೀನೇ ನಮ್ಮ ಶಂಖಚೂಡನಿಗಿಂತಲೂ ಹೆಚ್ಚು.

ಶಂಖಚೂಡ—(ಆಶ್ಚರ್ಯದಿಂದ) ಆಹಾ, ಈ ಮಹಾತ್ಮನ ಚರಿತ್ರವು ಜಗದ್ವಿಪರೀತವಾಗಿರುವುದು.

ವೃತ್ತ || ತನುಮಂಕಾಪಿಡಲೆಂದು ಮುಂ ಕುಶಿಕಜಂನಾಯ್ಮಾಡನುಂಡಂನಿಷಾ | ದನನ್ರೋ
ಲ್ ದೇಹನಿಮಿತ್ತದಿಂದೆಹಿತನಾಳೀಜಂಘನಂ ಕೊಂದುತಿಂ || ದನಲಾಗೌತಮುನ
ಸ್ಪೃಹಂಸ್ವತನುವಿಂಗೀತಾರ್ಕ್ಷ್ಯನುಂ ಪಾವನು | ಜ್ಞಾನಿದೇನಚ್ಚರಿಯನ್ಯಕಾರ್ಯ
ಕೊಡಲಂ ಪುಲ್ಗೋಲಿವಂತೆತ್ತಪಂ || ||೬೪||

(ಜೀಮೂತವಾಹನನನ್ನು ಕುರಿತು) ಅಯ್ಯಾ ಮಹಾತ್ಮನೆ, ನಿರ್ನಿಮಿತ್ತವಾಗಿ ನನಗೆ ಸಹಾಯ ಮಾಡಬೇಕೆಂದು ಪ್ರಯತ್ನಿಸುತ್ತಿರುವ ನಿನ್ನ ಕೃಪೆಯು ನನ್ನಲ್ಲಿ ಸಂಪೂರ್ಣವಾಗಿದೆ. ನಿನ್ನೀ ನಿರ್ಬಂಧವು ನನಗೆ ಇಷ್ಟವಾದುದಲ್ಲ; ಏಕೆಂದರೆ—

ಕಂದ || ಜನಿಯಿಪರಿನ್ನುಂಮಡಿದಪ |
ರೆನಿಬರೊನಮ್ಮೊಂದಿಗರ್ಕಳಿಳೆಯೊಳ್ ಪರಪಾ ||
ಲನಮೆಸಗಲೊಡಲನಾಂತವ |
ರೆನಿಸಿರ್ಪರ್ ಪುಟ್ಟಲಕ್ಕುಮೇ ನಿಮ್ಮನ್ನರ್ || || ೭೫ ||

ಆದುದರಿಂದ ನಿನ್ನ ಯತ್ನವನ್ನು ಬಿಡು ಬಿಡು.

ಜೀಮೂತವಾಹನ—(ಶಂಖಚೂಡನ ಕೈ ಹಿಡಿದುಕೊಂಡು) ಅಯ್ಯಾ, ಶಂಖಚೂಡನೇ, ನಾನು ಬಹುಕಾಲದಿಂದಲೂ ಅಪೇಕ್ಷಿಸುತ್ತಿದ್ದ ಪರಾರ್ಥಸಂಪಾದನರೂಪವಾದ ಮನೋರಥವು ಈಗತಾನೇ ಕೈಗೂಡುವಂತಿದೆ. ಆದುದರಿಂದ ನೀನಿದಕ್ಕೆ ಅಡ್ಡಿಮಾಡಬೇಡ. (ಎಂದು ಆತನ ಕಾಲಿಗೆ ಬಿದ್ದು) ಏತಕ್ಕೆ ಅನ್ಯಥಾ ಯೋಚಿಸುತ್ತೀಯೆ? ವಧ್ಯಚಿಹ್ನವನ್ನು ಕೊಡು.

ಶಂಖಚೂಡ—(ಜೀಮೂತವಾಹನನ ಕಾಲಿಗೆ ಬಿದ್ದು) ಅಯ್ಯಾ, ಮಹಾತ್ಮನೆ, ಏತಕ್ಕೆ ಸುಮ್ಮನೆ ಪ್ರಯಾಸಪಡುವೆ? ನೀನು ಅಷ್ಟು ಪ್ರಯಾಸಪಟ್ಟರೆ ಶಂಖದಂತೆ ಶುಭ್ರವಾದ, ಶಂಖಪಾಲಕುಲಕ್ಕೆ ಶಂಖಚೂಡನಾದ ನಾನೇ ಮಲಿನತೆಯನ್ನುಂಟುಮಾಡಿದಹಾಗಾಗುವುದಲ್ಲವೆ? ಹಾಗೆ ನೀನು ನಮ್ಮಲ್ಲಿ ನಿನ್ನ ದಯೆಯನ್ನು ತೋರಿಸಬೇಕೆಂದು ಚಿಂತಿಸಿರುವನಾದರೆ ನನ್ನ ವಿಪತ್ತಿಗಾಗಿ ವ್ಯಸನಪಡುತ್ತಿರುವ ಈಕೆಯು ಪ್ರಾಣತ್ಯಾಗ ಮಾಡದಹಾಗೆ ಯಾವುದಾದರೂ ಒಂದುಪಾಯವನ್ನು ಯೋಚಿಸು.

ಜೀಮೂತವಾಹನ—ಯೋಚಿಸುವುದೇನು! ಯೋಚಿಸಿಯೇ ಇರುವೆನು. ಆದರೆ ಅದು ನಿನ್ನಧೀನವು.

ಶಂಖಚೂಡ—ಅದು ಯಾವುದು?

ಜೀಮೂತವಾಹನ—

ಕಂದ || ಮಡಿವಳ್ ನೀಂ ಮಡಿವೊಡೆನಿ |
ನ್ನೊಡನೆಯೆ ನಿನ್ನಬ್ಬೆಜೀವಿಸಿರೆ ನೀನಸುವಂ ||
ಪಿಡಿದಿದ್ದರ್ಪಳದರಿಂದೆ |
ನ್ನೊಡಲಿಂಪೊರೆಯಯ್ಯ ನಿನ್ನುಮಂ ಮಾತೆಯುಮಂ || ೭೬ ||

[illegible]
[illegible]
[illegible] : lwsilwi'
[illegible]
[illegible]

[illegible]
[illegible]

[illegible]
[illegible]

Competitive in virtue.

[illegible]
[illegible]
[illegible]

[illegible]
[illegible]

[illegible]

Pieces of rare plate.

[illegible]

[illegible]

[illegible]

[illegible]

[illegible]

[illegible] An - void -

[illegible]

[illegible]

[illegible]

Proposals making alarm

[illegible]

[illegible]

[illegible]

ಇದೇ ಉಪಾಯ. ಆದುದರಿಂದ ಜಾಗ್ರತೆಯಾಗಿ ನನಗೆ ವಧ್ಯಚಿಹ್ನವನ್ನು ಕೊಡು. ನಾನದನ್ನು ಧರಿಸಿ ವಧ್ಯಶಿಲೆಯನ್ನು ಹತ್ತುವೆನು. ನೀನು ನಿಮ್ಮ ತಾಯಿಯನ್ನು ಕರೆದುಕೊಂಡು ಹಿಂತಿರುಗಿ ಹೋಗು. ಏಕೆಂದರೆ ಈಕೆಯು ಆ ವಧ್ಯಸ್ಥಾನವನ್ನು ನೋಡಿದರೆ ಸ್ತ್ರೀಸ್ವಭಾವಕ್ಕೆ ಸಹಜವಾದ ಭಯದಿಂದ ಪ್ರಾಣವನ್ನು ಬಿಟ್ಟಾಳು! ಸತ್ತ ಹಾವುಗಳ ಎಲುವುಗಳಿಂದ ನಿಬಿಡವಾದ ಈ ಮಹಾ ಶ್ಮಶಾನವನ್ನು ನೀನು ನೋಡಲಿಲ್ಲವೋ? ಇದೋ ಇಲ್ಲಿ—

ವೃತ್ತಂ || ಅರೆಮುರಿವೋಗಿ ಜಾರೆ ನಿಜಚಂಚುಪುಟಸ್ಸಿ ತಮಾಂಸಮೆಯ್ದೆ ಕ| ವ್ವರೆಯೊಳೆ
ಪರ್ದ್ದದಂತುಡುಕಲಕ್ಕರನಾಸುತೆ ಮರ್ವಳುರ್ವಿಸಂ || ಗರಿಗೆದರುತ್ತೆ ಪಾರೆ
ನರಿಗಳ್ ನಿಸೆಯೆಂದುಗುಳಿಂ ಚಿತಾಗ್ನಿಯಂ| ಪರಿಹರಿಸುತ್ತಮೂಳಿಡು
ಗುಗುಂ ಬಸೆಯಿಂ ಸೊವಡ್ತಾದನೆತ್ತರೊಳ್ ||೭೭||

ಶಂಖಚೂಡ—ನೋಡಿದೆನು.

ಕಂದ || ಅನುದಿನಮಹಿಯಾಹಾರದಿ |
ನನುಗಾಮಿವಿನಾಯಕಾನುರಾಗಾಗಾರಂ ||
ಕನದಿಂದುಕಳಾಸ್ಥಿಕಪಾ |
ಲನಿಚಿತಮಿಾಮಸ್ಮಣಮುಮಮ್ಮರುದ್ರನ ತನುವೋಲ್ || ೭೮ ||

ಆದುದರಿಂದ ನೀನು ನಡೆ. ಭಯೋತ್ಪಾದಕಗಳಾದ ಈ ಮಾತುಗಳಿಂದೇನು ಫಲ! ಗರುಡನ ಆಗಮನಕಾಲವು ಸಮಿಾಪಿಸಿತು. (ಎಂದು ತನ್ನ ತಾಯಿಯ ಮುಂದೆ ಮೊಣಕಾಲೂರಿ ನಿಂತು ಮುಗಿದ ಕೈಯನ್ನು ತಲೆಯಮೇಲಿಟ್ಟುಕೊಂಡು) ಅಮ್ಮಾ, ಇನ್ನು ನೀನೂ ಹಿಂತಿರುಗಿ ಹೋಗು.

ಕಂದ || ನಿನಗೆನ್ನೊಳಗಿರುವೆರಕಮ |
ದನಿತಿನಿತೆಂದೊರೆಯಲಾಪ್ಪರಾರದರಿಂದಂ ||
ಜನನಾಂತರಕಂ ನೀನೇ |
ಜನಿಯಿಸಿ ತಾಯಾಗಿ ಕಾವುದೆನ್ನಂ ಜನನೀ || ೭೯ ||

(ಎಂದು ಕಾಲಿಗೆ ಬೀಳುವನು.)

ವೃದ್ಧೆ—(ಕಣ್ಣೀರು ಬಿಡುತ್ತಾ) ಅಯ್ಯೋ! ಮಗುವೆ, ನೀನಾಡಿದ ಕೊನೆಯ ಮಾತನ್ನು ಕೇಳಿದುದರಿಂದ ನಿನ್ನನ್ನು ಬಿಟ್ಟುಹೋಗುವುದಕ್ಕೆ ನನ್ನ ಕಾಲುಗಳೇ ಬರುವುದಿಲ್ಲ. ಆದುದರಿಂದ ನಾನೂ ನಿನ್ನ ಸಂಗಡಲೇ ಬರುವೆನು.

ಶಂಖಚೂಡ—(ಎದ್ದು) ನಾನೂ ಈ ಪ್ರದೇಶಕ್ಕೆ ಸಮೀಪವಾದ ಉತ್ತರದಿಕ್ಕಿನಲ್ಲಿರುವ ಗೋಕರ್ಣಕ್ಷೇತ್ರಕ್ಕೆ ಹೋಗಿ ಭಗವಂತನಾದ ಆ ದಕ್ಷಿಣಗೋಕರ್ಣೇಶ್ವರನಿಗೆ ನಮಸ್ಕರಿಸಿ ರಾಜಾಜ್ಞೆಯನ್ನು ನೆರವೇರಿಸುವೆನು.

(ಎಂದು ತಾಯಿಯೊಡನೆ ಹೊರಟುಹೋದನು.)

ಜೀಮೂತವಾಹನ—ಅಯ್ಯೋ! ನನ್ನ ಮನೋರಥವು ಕೈಗೂಡಲಿಲ್ಲವಲ್ಲ. ಇದಕ್ಕೇನುಪಾಯವನ್ನು ಮಾಡಲಿ?

ಕಂಚುಕಿ—(ಜಾಗ್ರತೆಯಾಗಿ ಬಂದು) ಯುವರಾಜನಿಗೆ ವಿಜಯವಾಗಲಿ. ಇದೋ, ವಸ್ತ್ರಯುಗ್ಮವು.

ಜೀಮೂತವಾಹನ—(ನೋಡಿ ಸಂತೋಷದಿಂದ ಮನಸ್ಸಿನಲ್ಲಿ) ಹಠಾತ್ತಾಗಿ ದೈವಯೋಗದಿಂದ ಸಿಕ್ಕಿದ ಈ ರಕ್ತಾಂಶುಕಯುಗಳವು ನನ್ನ ಮನೋರಥವನ್ನು ಕೈಗೂಡಿಸಿತು.

ಕಂಚುಕಿ—ಇದನ್ನು ಮಿತ್ರಾವಸುವಿನ ತಾಯಿಯಾದ ದೇವಿಯು ನಿನಗೆ ಕೊಟ್ಟುಬಾ ಎಂದು ನನ್ನನ್ನು ಕಳುಹಿಸಿದಳು. ಆದುದರಿಂದ ನೀನಿದನ್ನು ಉಟ್ಟುಕೊಳ್ಳಬೇಕು.

ಜೀಮೂತವಾಹನ—ಕೊಡು, (ಎಂದು ತೆಗೆದುಕೊಂಡು ಮನಸ್ಸಿನಲ್ಲಿ) ನಾನು ಆ ಮಲಯವತಿಯನ್ನು ಮದುವೆಯಾದುದಕ್ಕೆ ಈಗ ಫಲವಾಯಿತು. (ಎಂದು ಧರಿಸಿ ಪ್ರಕಾಶಂ) ಅಯ್ಯಾ, ಹೋಗಿಬಾ; ಆಕೆಗೆ ನನ್ನ ನಮಸ್ಕಾರವನ್ನು ಹೇಳು.

ಕಂಚುಕಿ—ಅಪ್ಪಣೆ (ಎಂದು ಹೊರಟುಹೋಗುವನು.)

ಜೀಮೂತವಾಹನ—

ಕಂದ || ಪೆರಗಾರ್ಗೊಡಲಂ ಬಿಡುವವ|
ಸರಕ್ಕೆ ಸರಿಯಾಗಿ ನನ್ನ ಬಳಿಯಂ ಸಾರ್ದ್ದೀ ||
ಅರುಣಾಂಬರಯುಗಳಂ ಬಿ|
ತ್ತರಿಸುವುದಧಿಕಪ್ರಮೋದಮಂ ಮಾನಸದೊಳ್ || ೭೦ ||

(ಸುತ್ತಲೂ ನೋಡಿ) ಈಗ ಬೀಸುತ್ತಿರುವ ಬಿರುಗಾಳಿಯಿಂದ ಈ ಮಲಯಪರ್ವತದ ಕಲ್ಲುಗಳೆಲ್ಲಾ ಅಲ್ಲಾಡುತ್ತಿರುವ ಕಾರಣ ಪಕ್ಷಿರಾಜನಾದ ಗರುಡನು ಸಮೀಪದಲ್ಲಿಯೇ ಬರುತ್ತಿರುವನೆಂದೂಹಿಸುವೆನು. ಏಕೆಂದರೆ ಈತನ—

ವೃತ್ತಂ || ವಿಲಯಾಬ್ದಂಗಳವೋಲ್ ಕೆದರ್ದ್ದಗರಿಗಳ್ ಬಾಂಬಟ್ಟೆಯಂ ಮುಚ್ಚಿ
ಭೋಂ|ಕಲೆವೇಗಾನಿಲದಿಂದಮೊತ್ತಿ ಕಡಲೊತ್ತಂತೆಂಕಿತೇಲ್ವಂತೆವೋಲ್||

107 432 [illegible]

[illegible]

Note they do not agree
he hurries to sacrifice
& the fair clothing sent by [illegible] himself. || [illegible]
because his sign. [illegible] significance

[illegible]

[illegible]

[illegible]

[illegible]

[illegible]

[illegible]

[illegible]

[illegible]

The sun wings
still more cool and only warm
the clouds that cling to their
(wet)

[illegible]

ನೆಲಸಂ ಮಾಡುತೆ ಕಲ್ಪಮೆಂಬಪೆಳರಂದಿಗ್ದಂತಿಗಳ್ಗೀಯೆ ಪಿಂ| ಗಳ
ವರ್ಣಾಂಗದ ಕಾಂತಿಚಿತ್ರಿಸುವುದಾಬಾಲಾರ್ಕರಂತಾಸೆಯಂ || ೭೧ ||

ಆದುದರಿಂದ ಆ ಶಂಖಚೂಡನು ಇಲ್ಲಿಗೆ ಬರುವುದರೊಳಗಾಗಿ ನಾನೇ ಈ ವಧ್ಯಶಿಲೆಯನ್ನು ಹತ್ತುವೆನು. (ಎಂದು ಹತ್ತಿ ಸುಖಸ್ಪರ್ಶನವನ್ನು ನಟಿಸುತ್ತಾ) ಆಹಾ! ಈ ಶಿಲಾಸ್ಪರ್ಶವು ಎಷ್ಟು ಸುಖಕರವಾಗಿರುವುದು.

ಕಂದ || ಎಳಪಂಕಯ್ಯೊಡಿಷವಧ|
ಶಿಳೆಯನಿದಂತಳ್ಕೆ ಗೆಯ್ಯೆನಾನೆನಿತುಸೊಗಂ ||
ದಳಿವೆಸ್ನೊಮಳಯಜರಸಯುತ|
ಮಳಯವತಿಯನಪ್ಪಲನಿತುಸೊಗವೊಂದಿದೆನೇ || ೭೨ ||

(ಅಥವಾ ಮಲಯವತಿ ಎಂದು ಏಕೆ ಹೇಳಲಿ.)

ಕಂದ || ಎಳವೆಯೊಳಾಂತಾಯ್ಡೊಡೆದೊ|
ಟ್ಟಿಲೊಳೊಲ್ದು ಮಲಂಗಿಪಡೆದ ಸೊಗಮಂವಧ್ಯೋ ||
ಪಳದುತ್ಸಂಗದ ಸುಖಮಿದು|
ಪಳಿದೆನ್ನಯಮನಕೆ ಮುದಮನೊದವಿಪುದೀಗಳ್ || ೭೩ ||

ಇದೋ ಗರುಡನು ಬಂದನು. ವಸ್ತ್ರಯುಗಳವನ್ನು ಧರಿಸಿ ಕುಳಿತುಕೊಂಡಿರುವೆನು. (ಎಂದು ಹಾಗೆ ಮಾಡುವನು.)

ಗರುಡ—ಪ್ರವೇಶಿಸಿ.

ವೃತ್ತಂ|| ಬೆಗಡಿಂದಂ ಸುತ್ತುಗೊಂಡಿರ್ದಹಿಪನ ತನುವೋಲ್ ಕಾಣ್ಬಶೀತಾಂಶುವಂಷ್ಪಾ
ವಗೆಸ್ಯೆತೊತ್ತುತ್ತೆ ಸೂರ್ಯಾಶ್ವಕೆಭಯಭರಮಂ ಸಾರ್ಚ್ಚಿ ತೇರಿಂದಿನೇಶಂ|| ಜಗು
ಳ್ಪಂದಂ ಮಾಡುತಣ್ಣಂಗೊದವಿಸಿಮುದಮಂ ಪ್ರಾಂತದೊಳ್ ತಳ್ತುನಿಂದಾ
ಮುಗಿಲಿಂ ಸೀಳ್ದಂತೆ ಪಕ್ಷಂಸಿಮಿರೆಮಳಯಕಾಂಪಾವುಣಲ್ ಬಂದೆನೀಗಳ್ ||

ಜೀಮೂತವಾಹನ—

ಕಂದ || ಇಂದೆನ್ನ ತನುವನಿತ್ತಾ|
ನೊಂದಹಿಯಂ ಪೊರೆದಕತದೆ ಸೈಪೊದವಿರ್ಕುಂ ||
ಮುಂದೆ ಮರುಮೆಯ್ಗಳೊಳವಿಾ|
ಯಂದಮೆ ಸಮನಿಸುಗೆ ಜನ್ಮಮುಕ್ತೆಪರಾರ್ಥಂ || ೭೪ ||

ಗರುಡ—(ಜೀಮೂತವಾಹನನನ್ನು ನೋಡಿ)

ವೃತ್ತಂ || ಜನಿಸಿದಭೀತಿಯಿಂದಮೆರ್ದೆಬಿಕ್ಕನೆ ಬಿಚ್ಚಿರೆ ಸೋರ್ವರಕ್ತದಿಂ | ನೆನೆದವೊ
ಲೊಪ್ಪಿರಕ್ತವಸನಂ ಭುಜಗಾವಳಿಪಾಲನೇಚ್ಛೆಯಿಂ|| ದನುಗತನಾಗಿವಧ್ಯಶಿಲೆ
ಯೊಳ್ಮಲಗಿರ್ಪನನೀಫಣೀಶನಂ | ನಿಸಿಶಿತವಜ್ರದಂಡದವೊಲೊಪ್ಪುವ
ಚಂಚುವಿನೀಳ್ದು ತಿಂದಪೆಂ || ೭೭ ||

(ಎಂದು ಇದಿರಾಗಿ ಹಾರಿಬಂದು ಜೀಮೂತವಾಹನನನ್ನು ಹಿಡಿದುಕೊಳ್ಳುವನು.)
(ತೆರೆಯಿಂದ ಪುಷ್ಪವೃಷ್ಟಿಯಾಗುವುದು. ದುಂದುಭಿಧ್ವನಿಯೂ ಕೇಳಿಸುವುದು.)

ಗರುಡ—(ಮೇಲೆ ನೋಡಿ, ಮತ್ತೂ ಕಿವಿಗೊಟ್ಟು ಕೇಳಿ,)

ವೃತ್ತಂ|| ಅಳಿಯಂಸೌರಭದಿಂ ಮುದಂಗೊಳಿಸಿಬಾನಿಂಬೀಳ್ವವೇತಕ್ಕೆಪೂ | ಮಳೆ
ಗಳ್ ಸಗ್ಗದ ದುಂದುಭಿಸ್ವನಮಿದೇಂದಿಕ್ಚಕ್ರಮಂತೀವುಗುಂ || ತಿಳಿದತ್ತಾಹ
ಮದೀಯವೇಗದೆಲರಿಂ ಮಂದಾರಮಲ್ಲಾಡಿದ| ತ್ತುಲಯಾಂಭೋಧರಸಂ
ಕುಲಂವೊಳಗಿತಾತ್ಮಾಪಾಯಶಂಕಾಕುಲಂ ||

(ಎಂದು ನಗುವನು)

ಜೀಮೂತವಾಹನ—(ಮನಸ್ಸಿನಲ್ಲಿ) ದೈವಯೋಗದಿಂದ ನಾನು ಧನ್ಯನಾದೆ.

ಗರುಡ—(ನೋಡುತ್ತಾ)

ಕಂದ || ಗುರುವಾದೀತಂ ಫಣಿಕುಲ |
ಪರಿಪಾಲಕನಾಗಿ ಕಾಣ್ಬನದರಿಂದೀಗಳ್ ||
ಉರಗಾಶನಾಭಿಲಾಷೆಯ |
ನಿರದೆನಗಡಗಿಪ್ಪನೆಂಬುದಿದು ಪರಮಾರ್ಥಂ || || ೭೮ ||

ಆದುದರಿಂದ ಈ ಮಲಯಪರ್ವತದ ಶಿಖರವನ್ನೇರಿ ಯಥೇಷ್ಟವಾಗಿ ತಿನ್ನು ವೆನು. (ಎಂದವನನ್ನು ಎತ್ತಿಕೊಂಡು ಹೊರಟುಹೋದನು.)

(ಚತುರ್ಥಾಂಕಂ ಸಂಪೂರ್ಣಂ)

[illegible]

[illegible]

[illegible]

[illegible]

a silk garment

Possessing two

[illegible]

[illegible]

standing by his side

[illegible]

ಪಂಚಮಾಂಕಂ

ಸುನಂದ—(ಬಂದು)

ಕಂದ || ಮನಮೆಣಿಪುದೆಡರನೆರಕದೆ |
ತನತ್ತುಗ್ರಹೋದ್ಯಾನಕ್ಕೈದೆಯುಂಸ್ನಿಗ್ಧಜನಂ ||
ಜನರಹಿತಬಹ್ವಪಾಯಮ |
ದೆನಿಸಿದನಟ್ಟಡವಿಗೈದಲಿನ್ನೇನೆಂಬೆಂ || ೭೯ ||

ಆ ಜೀಮೂತವಾಹನನು ಸಮುದ್ರತಟವನ್ನು ನೋಡಬೇಕೆಂಬ ಕುತೂಹಲದಿಂದ ಹೋಗಿ ಬಹಳ ಹೊತ್ತಾಯಿತು, ಆದರೂ ಇನ್ನೂ ಬರಲಿಲ್ಲವೆಂದು ವಿಶ್ವಾವಸು ಮಹಾರಾಜನು ಬಹು ವ್ಯಸನಾಕ್ರಾಂತನಾಗಿ "ಅಯ್ಯಾ ಸುನಂದನೇ, ನಮ್ಮ ಅಳಿಯನಾದ ಜೀಮೂತವಾಹನನು ಆ ಗರುಡನ ಆಹಾರಸ್ಥಾನಕ್ಕೆ ಹೋಗಿರುವನೆಂಬ ವೃತ್ತಾಂತವನ್ನು ಕೇಳಿದಾರಭ್ಯ ಮನಸ್ಸಿಗೆ ತುಂಬಾ ಭಯವುಂಟಾಗಿರುವುದು. ಆದುದರಿಂದ ನೀನು ಜಾಗ್ರತೆಯಾಗಿ ಹೋಗಿ ಆತನಿನ್ನೂ ತನ್ನ ಮನೆಗೆ ಬಂದನೋ ಇಲ್ಲವೋ ವಿಚಾರಿಸಿಕೊಂಡು ಬಾ" ಎಂದು ನನಗಾಜ್ಞಾಪಿಸಿದನು. ಆದುದರಿಂದ ಆ ಜೀಮೂತವಾಹನನ ಮನೆಗೆ ಹೋಗಿ ಬರುವೆನು. (ಎಂದು ಮುಂದೆಹೋಗಿ ನೋಡಿ) ಆಹಾ! ಈ ಪರ್ಣಶಾಲೆಯಲ್ಲಿ ಧರ್ಮಪತ್ನಿಯೊಡನೆಯೂ ಸೊಸೆಯೊಡನೆಯೂ ಸೂರ್ಯೋಪಾಸನೆಯನ್ನು ಮಾಡುತ್ತಾ ಇರುವ ರಾಜರ್ಷಿಯಾದ ಜೀಮೂತಕೇತುವೆಂಬ ಹೆಸರುಳ್ಳ ಈತನೇ ಆ ಜೀಮೂತವಾಹನನ ತಂದೆಯು, ಇದೋ ಈಗ—

ವೃತ್ತಂ || ತೆರೆಯೊಡಗೂಡಿಬರ್ಪನೊರೆನೀರ್ಗೆಣೆಯಾಗಿರೆ ಸುರ್ಕ್ಕಗೊಂಡನು| ಣ್ಬರಿಜಿ
ನಪಟ್ಟವಸ್ತ್ರಯುಗಳಂ ಸವಯಸ್ಕೆವಿಶಾಲಪುಣ್ಯದಿಂ || ಮೆರೆದಪ ದೇವಿ ಬಾಂ
ಜೊಳಗೆ ಪಾಸಟಿಯಾಗಿರೆ ಮೇರೆಯಂತೆವೋ| ಲಿರೆಕೆಲದಲ್ಲಿ ಕಾಣ್ಬ ಸೊಸೆ
ಸಾಗರದಂತೆ ವೊಲೀತನೊಪ್ಪುಗುಂ || ೮೦ ||

ಆದುದರಿಂದ ಸಮೀಪಕ್ಕೆ ಹೋಗುವೆನು.

(ಅನಂತರ ಪತ್ನಿಯೊಡನೆಯೂ ಸೊಸೆಯೊಡನೆಯೂ ಸೂರ್ಯೋಪಾಸನೆ ಮಾಡುತ್ತಿರುವ ಜೀಮೂತಕೇತುವು ಪ್ರವೇಶಿಸುವನು.)

ಜೀಮೂತಕೇತು—ವೃತ್ತಂ || ಪೊಸಪೊಸತಾದ ಯೌವನದ ಸೌಖ್ಯವನುಂಡೆನುದಾರ
ಕೀರ್ತಿಯಂ | ದೆಸೆದೆಸೆಯಲ್ಲಿ ಬಿತ್ತರಿಸಿದೆಂ ನೆಲನಂ ಪೊರೆದೆಂ ಸ್ಥಿರತ್ವದಿಂ ||
ದಿಸಗಿದೆನುಗ್ರಮಾದತಪಮಂ, ಮಹನೀಯಗುಣಂ ಕುಮಾರನೀ | ಸೊಸೆ
ಸುಚರಿತ್ರೆ ಮಿಳ್ತುವನೆ ಚಿಂತಿಪೆಹಾಂ ಕೃತಕೃತ್ಯಭಾವದಿಂ || ೮೧ ||

ಸುನಂದ—(ಜಾಗ್ರತೆಯಾಗಿ ಸಮೀಪಕ್ಕೆ ಬಂದು) ಏನು! ಜೀಮೂತವಾಹನನಿಗೋ ?

ಜೀಮೂತಕೇತು—(ಕಿವಿಗಳನ್ನು ಮುಚ್ಚಿಕೊಂಡು) ಶಾಂತಂಪಾಪಂ, ಶಾಂತಂ ಪಾಪಂ.

ದೇವಿ—ಈ ಅಮಂಗಳವು ಅಡಗಲಿ, ಅಡಗಲಿ.

ಮಲಯವತಿ—(ಮನಸ್ಸಿನಲ್ಲಿ) ಈ ದುಃಶ್ಯಕುನದಿಂದ ನನ್ನ ಎದೆಯು ಗಡಗಡನೆ ನಡುಗುತ್ತಿದೆ.

ಜೀಮೂತಕೇತು—ಏನು, ನಮ್ಮ ಮಗುವು ಅಲ್ಲಿಗೂ ಹೋಗಲಿಲ್ಲವೊ ?

ದೇವಿ—(ವಿಷಾದದಿಂದ) ಮಹಾರಾಜನೆ, ಅವನು ಅಲ್ಲಿಗೂ ಹೋಗದಿದ್ದರೆ ಇನ್ನೆಲ್ಲಿಗೆ ಹೋಗಿದ್ದಾನು ? ಇಷ್ಟು ತಡಮಾಡುವುದಕ್ಕೆ ಕಾರಣವೇನು ?

ಜೀಮೂತಕೇತು—ನಿಶ್ಚಯವಾಗಿ ಆತನು ನಮ್ಮ ಆಹಾರಾರ್ಥವಾಗಿ ಕಂದ ಮೂಲ ಫಲಾದಿಗಳನ್ನು ತರಬೇಕೆಂದು ದೂರದೇಶಕ್ಕೆ ಹೋಗಿರಬಹುದು.

ಮಲಯವತಿ—(ವಿಷಾದದಿಂದ ಮನಸ್ಸಿನಲ್ಲಿ) ನನಗಾದರೊ ಆರ್ಯಪುತ್ರನನ್ನು ಒಂದು ಮುಹೂರ್ತ ಕಾಣದಿದ್ದರೂ ಬೇರೆ ಏನೋ ಒಂದು ಭಯವುಂಟಾಗುವುದು.

ಸುನಂದ—ನಾನು ಮಹಾರಾಜನಿಗೆ ಏನೆಂದು ವಿಜ್ಞಾಪಿಸಲಿ? ಅಪ್ಪಣೆಯಾಗಬೇಕು.

ಜೀಮೂತಕೇತು—(ಎಡಗಣ್ಣು ಹಾರಿದಂತೆ ನಟಿಸಿ) ಜೀಮೂತವಾಹನನು ಏಕಿಷ್ಟು ತಡಮಾಡಿದನೋ ಎಂದು ನಾನು ವ್ಯಸನಪಡುತ್ತಾ ಚಿಂತಿಸುತ್ತಿರುವಾಗ—

ಕಂದ || ಚಲಿಸುವೆ ನೀನೇಕೀಗಳ್ |
ಪಲಮ್ಮೆ ನನಗಳಲನೊಂದನಾರಯ್ವುತ್ತಂ ||
ಎಲೆಹತವಾಮಾಂಬಕ ನಿ |
ನ್ನಲಪಕೆ ವಿಫಲತೆಯನೆಸಪನೀಜಿಸುಗದಿರಂ || ೮೨ ||

ನನ್ನ ಮಗನು ಕ್ಷೇಮವಾಗಿದ್ದಾನೆಯೇ ? (ಮೇಲೆ ನೋಡಿ) ಸಮಸ್ತಲೋಕಗಳಿಗೂ ಏಕನೇತ್ರನಾದ ಈ ಸೂರ್ಯನು ನಿಜವಾಗಿ ನಮ್ಮ ಜೀಮೂತವಾಹನನಿಗೆ ಶ್ರೇಯಸ್ಸನ್ನುಂಟುಮಾಡುವನು. (ಆಶ್ಚರ್ಯದಿಂದ)

Full
Content

Like ripe fruit
fall to the earth

note of 9th apr. [illegible]

[illegible]

[illegible]

[illegible] Poor folk

It has to do with [illegible]
(or comes immediately after [illegible])

Whereto: has he resigned the town King? Then
where has he gone to)
is that [illegible]

[illegible] ?

[illegible]

67

The [illegible] of his [illegible]
now

wh. when [illegible]
his gover[illegible]
pain to the [illegible]
& emits [illegible]
as blood strea[illegible]

[illegible]
streaks of blood
[illegible]
[illegible]
[illegible]

c)

[illegible]
[illegible]

d)

[illegible]
[illegible]
[illegible]
[illegible] . . .

ಕಂದ || ಸರಿವಂದುತ್ಪಾತಮರು |
ತ್ತರಳಿತತಾರಕೆಗೆ ರಕ್ತಮೆನಿಸಿರೆ ಡಾಳಂ ||
ನಿರುಕಿಪ ಕಣ್ಣೊಡೆವಿನಮಂ |
ಬರದಿಂ ಬಿಳ್ದುದಿದೇನೊ ಜವದಿಂದಿದಿರೊಳ್ || ೮೩ ||

ಇದೇನು ನನ್ನ ಕಾಲುಗಳ ಮೇಲೆಯೇ ಬಿತ್ತು? (ಎಲ್ಲರೂ ನೋಡುವರು.)

ಜೀಮೂತಕೇತು—ಓಹೊ! ಹಸಿಮಾಂಸವಂಟಿಕೊಂಡಿರುವ ಈ ಚೂಡಾಮಣಿಯು ಯಾರದಾಗಿದ್ದೀತು?

ದೇವಿ—(ವಿಷಾದದಿಂದ) ಇದು ನಮ್ಮ ಮಗುವಿನ ಚೂಡಾಮಣಿಯಂತಿದೆ.

ಮಲಯವತಿ—(ಮನಸ್ಸಿನಲ್ಲಿ) ಹಾಗೆನ್ನಬೇಡ.

ಸುನಂದ—ಮಹಾರಾಜನೆ, ಯಾವುದೂ ತಿಳಿಯದೆ ಸುಮ್ಮನೆ ಹೀಗೆ ವ್ಯಾಕುಲಪಡಬಾರದು. ಈ ಪ್ರದೇಶದಲ್ಲಿ ಗರುಡನು ಪ್ರತಿದಿವಸವೂ ಸರ್ಪಚೂಡಾಮಣಿಗಳನ್ನೆಲ್ಲಾ ತನ್ನ ಉಗುರುಗಳಿಂದ ಬಗಿದು ಕೆಳಗೆ ಬಿಸಾಡಿ ಸರ್ಪಗಳನ್ನು ತಿನ್ನುತ್ತಾನೆ.

ಜೀಮೂತಕೇತು—ದೇವಿಯೆ, ಈತನು ಹೇಳಿದ ಮಾತು ಒಪ್ಪತಕ್ಕದ್ದಾಗಿದೆ. ಒಂದುವೇಳೆ ಹೀಗಾಗುವುದೂ ಉಂಟು.

ದೇವಿ—ಅಯ್ಯಾ ಸುನಂದ! ಆತನು ತನ್ನ ಮಾವನ ಮನೆಗೆ ಏನಾದರೂ ಹೋಗಿರಬಹುದೋ ಏನೋ! ಆದುದರಿಂದ ಜಾಗ್ರತೆಯಾಗಿ ಹೋಗಿ ತಿಳಿದುಕೊಂಡುಬಾ.

ಸುನಂದ—ಅಪ್ಪಣೆ (ಎಂದು ಹೊರಟುಹೋದನು.)

ಜೀಮೂತಕೇತು—ಇದು ನಾಗಚೂಡಾಮಣಿಯಾಗಿದ್ದೀತೆ?

ಶಂಖಚೂಡ—(ರಕ್ತವಸ್ತ್ರಾಲಂಕೃತನಾಗಿ ಬಂದು ಕಣ್ಣೀರನ್ನು ಸುರಿಸುತ್ತಾ) ಅಯ್ಯೋ! ಕಷ್ಟ! ಕಷ್ಟ!

ಕಂದ || ಕುಂಬಿಟ್ಟಾಂಗೋಕರ್ಣ |
ಗಂಬುಧಿಯಿಂ ಭುಜಗವಧ್ಯಶಿಲೆಗಯ್ದುವನುರ್ ||
ಅಂಬರಕುಯ್ದುಂ ಕೂರುಗು |
ರಿಂ ಬಿಜ್ಜೋದರನನುರದೆ ಬಗಿದಾಗರುಡಂ || ೮೪ ||

ಹಾ! ನಿಷ್ಕಾರಣೈಕಬಾಂಧವ! ಪರಮಕಾರುಣಿಕ! ಹಾ! ಪರದುಃಖದುಃಖಿತ! ನೀನೆಲ್ಲಿಹೋದೆ? ನನಗೆ ಪ್ರತ್ಯುತ್ತರವನ್ನು ಕೊಡಬಾರದೆ? ಅಯ್ಯೋ! ಪಾಪಿಯಾದ ಶಂಖಚೂಡನೆ! ನೀನು ಬದುಕಿದ್ದು ಫಲವೇನು?

ವೃತ್ತಂ || ಪಡೆಯದೆಪೋದೆನಾಸುರಗಜೀವನಪಾಲನಜಾತಕೀರ್ತಿಯಂ | ನಡೆಯಿಸ
ದಾದೆ ನಾನೊಡೆಯನಾಣತಿಯಂ ನಿಖಿಲಾಭಿಸಂಧ್ಯಮಂ || ಕುಡಿಸಿ ಖಗೇಶ್ವ
ರಂಗೆ ಪೆರನಿಂದೊಡಲಂ ಕಡುಪಾಪಿಯಾದೆನಿ | ನ್ನುಡಿವುದದೇಕೆ ಕೆಟ್ಟೆನೆಲೆ
ಕೆಟ್ಟೆನಿದೇತರಬಾಳ್ಕೆಯಕ್ಕಟಾ ! || ೮೫ ||

ಈ ರೀತಿಯಾಗಿರುವ ನಾನು ಒಂದು ಕ್ಷಣ ಬದುಕಿದ್ದರೂ ಪರಿಹಾಸಪಾತ್ರ ನಾಗುವೆನಲ್ಲವೆ! ಆದುದರಿಂದ ನಾನೂ ಈತನನ್ನೇ ಅನುಸರಿಸಿ ಹೋಗುವೆನು. (ಎಂದು ಮುಂದೆ ಹೋಗುತ್ತಾ ನೆಲವನ್ನು ನೋಡಿ)

ವೃತ್ತಂ || ನೆಲನೊಳ್ಪೆರ್ಬನಿಯಾಗಿಜಿಳ್ಳ ಬಳಿಕಂಸ್ಥೂಲಾತಿರೌದ್ರಾಚಲೋ | ಪಲ
ದೊಳ್ಸೀರ್ಪನಿಯಾಗುತಂ ಸ್ಥಲದೆ ಕೀಟಾಕೀರ್ಣಮಾಗುತ್ತಿಥಾ ||
ತುಲಸದ್ಭಿತ್ತಿಗಳಲ್ಲದೃಶ್ಯತೆಯನಾಂತುರ್ವೀಜಶಾಖಾಗ್ರದೊಳ್ | ಬಿಲದೊಳ್
ಪುಂಜಿಸಿದಸ್ರಧಾರೆಯೊಳೆನಾಂ ಪೋಗೀಕ್ಷಿಪೆಂತಾರ್ಕ್ಷ್ಯನಂ || ೮೬ ||

ದೇವಿ—(ಭಯದಿಂದ) ಮಹಾರಾಜನೆ, ಸರಸರನೆ ಈ ಕಡೆಗೇ ಬರುತ್ತಿರುವ ಈತನ ಮುಖವು ತುಂಬಾ ಬಾಡಿಹೋಗಿರುವುದರಿಂದ ನನ್ನ ಮನಸ್ಸಿಗೆ ವ್ಯಾಕುಲ ವುಂಟಾಗುತ್ತಿರುವುದು. ಈತನು ಯಾರಾಗಿರಬಹುದು ನೋಡು.

ಜೀಮೂತಕೇತು—(ನೋಡಿ) ಹೌದು ! ಹೌದು ! ನೀನು ಹೇಳಿದ್ದು ನಿಜ.

ಶಂಖಚೂಡ—ಹಾ! ತ್ರಿಭುವನೈಕಚೂಡಾಮಣಿಯೆ! ಪುನಃ ನಾನು ನಿನ್ನನ್ನು ಎಲ್ಲಿ ನೋಡಲಿ! ಅಯ್ಯೋ ! ನಾನು ಮೋಸಹೋದೆ !

ಜೀಮೂತಕೇತು—(ಕೇಳಿ ಸಂತೋಷದಿಂದ) ದೇವಿಯೆ ! ವಿಷಾದಪಡಬೇಡ. ಈ ಚೂಡಾಮಣಿಯು ಇವನದು. ಮಾಂಸಾಪೇಕ್ಷೆಯಿಂದ ಯಾವುದೋ ಒಂದು ಹಕ್ಕಿಯು ಇವನ ಶಿರಸ್ಸಿನಿಂದ ತೆಗೆದುಕೊಂಡು ಹೋಗುವಾಗ ಇಲ್ಲಿ ಬಿತ್ತು.

ದೇವಿ—(ಸಂತೋಷದಿಂದ ಮಲಯವತಿಯನ್ನು ಆಲಿಂಗಿಸಿಕೊಂಡು) ಅವಿಧವೇ, ಧೀರಳಾಗಿರು. ಇಂಥಾ ಆಕಾರಕ್ಕೆ ಎಂದಿಗೂ ವೈಧವ್ಯದುಃಖವುಂಟಾಗಲಾರದು.

ಮಲಯವತಿ—(ಸಂತೋಷದಿಂದ) ಅಮ್ಮಾ, ನಿಮ್ಮ ಆಶೀರ್ವಾದವೇ ಸರಿ. (ಎಂದಾಕೆಯ ಪಾದಗಳಲ್ಲಿ ಬೀಳುವಳು.)

ಜೀಮೂತಕೇತು—(ಶಂಖಚೂಡನ ಸಮೀಪಕ್ಕೆ ಬಂದು) ಮಗುವೆ, ನಿನ್ನ ಚೂಡಾಮಣಿಯು ಹೋಯಿತೆ ?

ಶಂಖಚೂಡ—ಆರ್ಯನೆ, ನನ್ನೊಬ್ಬನ ಚೂಡಾಮಣಿ ಮಾತ್ರ ಹೋಗಲಿಲ್ಲ. ತ್ರಿಭುವನದ ಚೂಡಾಮಣಿಯೂ ಹೋಯಿತು.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

Proof 91-182

shown seen in large drops, at intervals; next it falls on stones & this being broken, is scattered in minute particles, & after that, on the level ground it is covered with insects; then it becomes obscure or annihilated, & on the tops of trees ...

ಜೀಮೂತಕೇತು—ಮಗುವೆ, ಅದು ಹೇಗೆ?

ಶಂಖಚೂಡ—ದುಃಖವು ಅಧಿಕವಾಗಿ ನನ್ನ ಕಂಠದಲ್ಲೆಲ್ಲಾ ನೀರು ತುಂಬಿರುವುದರಿಂದ ದುಃಖಕರವಾದ ಈ ವೃತ್ತಾಂತವನ್ನು ಹೇಳಲಶಕ್ತನಾಗಿರುವೆನು.

ಜೀಮೂತಕೇತು—ಅಯ್ಯೋ! ನಾನು ಕೆಟ್ಟೆ!

ಕಂದ || ಅತಿದುಸ್ಸಹಮಾದಳಲಂ |
ಹಿತರೊಳ್ ನುಡಿಯೆನಸುಸಹಿಸಲಕ್ಕುಮದದರಿಂ ||
ಮಿತಿಮೀರಿದ ನಿನ್ನಳಲಂ |
ಸುತ! ನೀಂ ತುರಿಪದೊಳೆ ಮಾಂಜದೆನ್ನೊಡನುಸಿರೈ || ೮೭ ||

ಶಂಖಚೂಡ—ಅಯ್ಯಾ ಕೇಳು! ನಾನು ಶಂಖಚೂಡನೆಂಬ ನಾಗನಲ್ಲವೆ? ಸರ್ಪರಾಜನಾದ ವಾಸುಕಿಯು ಗರುಡನ ಆಹಾರಕ್ಕಾಗಿ ಸರದಿಯ ಪ್ರಕಾರ ನನ್ನನ್ನು ಕಳುಹಿಸಿದನು. ಬಹಳವಾಗಿ ಹೇಳಿ ಫಲವೇನು? ಈ ರಕ್ತಧಾರೆಯಿಂದ ವ್ಯಾಪ್ತವಾದ ಮಾರ್ಗಕ್ಕೆ ಧೂಳಿಯು ಮುಚ್ಚಿಕೊಂಡರೆ ದಾರಿಯು ಕಾಣದೆ ಹೋದೀತು. ಆದುದರಿಂದ ಸಂಕ್ಷೇಪವಾಗಿ ಹೇಳುವೆನು;

ಕಂದ || ಪರಮಕೃಪಾಭರಿತಾಂತಃ |
ಕರಣಂ ವಿದ್ಯಾಧರೇಶನೊರ್ವಂ ನಿನ್ನೀ ||
ಹರಣಮನುಳಿಪಲ್ ಪಕ್ಕಿಗ |
ಳರಸಂಗಾತ್ಮೀಯದೇಹಮುಂ ಪದೆದಿತ್ತಂ || ೮೮ ||

ಜೀಮೂತಕೇತು—(ವಿಷಾದದಿಂದ) ಪರರ ಕಷ್ಟಕ್ಕೆ ಬೇರೆ ಯಾವನು ವ್ಯಸನಪಡುವನು? ನಿನ್ನ ಮಗನಾದ ಜೀಮೂತವಾಹನನೆಂದು ಸ್ಪಷ್ಟವಾಗಿ ಹೇಳಬಾರದೆ? ಅಯ್ಯೋ! ನಿರ್ಭಾಗ್ಯನಾದ ನಾನು ಕೆಟ್ಟೆ.

ದೇವಿ—ಹಾ! ಪುತ್ರನೆ, ನೀನು ಎಂಥಾ ಕೆಲಸವನ್ನು ಮಾಡಿದೆ?

ಮಲಯವತಿ—ಪೂರ್ವಜನ್ಮದಲ್ಲಿ ನಾನು ಮಾಡಿದ ಪಾಪವೇ ಹೀಗೆ ಪರಿಣಮಿಸಿತು.

ಶಂಖಚೂಡ—ನಿಜವಾಗಿ ಇವರು ಆ ಮಹಾತ್ಮನ ತಾಯಿತಂದೆಗಳೇ ಸರಿ. ಇವರಿಗೆ ನಾನು ದುರ್ವಾರ್ತೆಯನ್ನು ಹೇಳಿ ಇವರನ್ನು ಈ ದುರವಸ್ಥೆಗೆ ಗುರಿಮಾಡಿದೆನು. ಅಥವಾ ವಿಷಧರನ ಮುಖದಿಂದ ವಿಷವೇ ಹೊರಡುವುದಲ್ಲದೆ ಇನ್ನೇನುತಾನೆ ಹೊರಟೀತು. ಆಹಾ! ಪ್ರಾಣದಾನವನ್ನು ಮಾಡಿದ ಆ ಜೀಮೂತವಾಹನನಿಗೆ ಶಂಖಚೂಡಹತಕನಾದ ನಾನು ಒಳ್ಳೇಪ್ರತ್ಯುಪಕಾರವನ್ನು ಮಾಡಿದೆನು. ಅದು

ಹಾಗಿರಲಿ. ಈಗಲೇ ನನ್ನ ದೇಹವನ್ನು ಕಳೆದುಕೊಳ್ಳಲೆ? ಅಥವಾ ಬೇಡ ಬೇಡ. ಇವರಿಬ್ಬರನ್ನೂ ಸ್ವಲ್ಪ ಸಂತೈಸುವೆನು. ಆರ್ಯನೇ, ಸಂತೈಸಿಕೊ ಸಂತೈಸಿಕೊ! ಅಮ್ಮಾ, ಸಂತೈಸಿಕೊ ಸಂತೈಸಿಕೊ.

(ಇಬ್ಬರೂ ಸಂತೈಸಿಕೊಳ್ಳುವರು.)

ದೇವಿ—(ಮಲಯವತಿಯನ್ನು ಕುರಿತು) ಮಗುವೆ, ಅಳಬೇಡ ಅಳಬೇಡ. ಏಳು, ಜೀಮೂತವಾಹನನಿಲ್ಲದಮೇಲೆ ನಾವುತಾನೆ ಬದುಕಿರುವೆವೆಂದು ತಿಳಿದಿರುವೆಯೋ? ಸಂತೈಸಿಕೊ ಸಂತೈಸಿಕೊ!

ಮಲಯವತಿ—(ಸಂತೈಸಿಕೊಂಡು) ಹಾ! ಆರ್ಯಪುತ್ರನೆ, ಪುನಃ ನಾನು ನಿನ್ನನ್ನು ಎಲ್ಲಿನೋಡಲಿ?

ಜೀಮೂತಕೇತು—ಹಾ! ವತ್ಸನೆ! ಗುರುಚರಣ ಶುಶ್ರೂಷಾವಿಧಿಜ್ಞನೆ!

ಕಂದ || ತರಳನೆ ಹಾ! ಹಾ! ಲೋಕಾಂ |
ತರಕೆಯ್ದಿಯುಮಕಟ! ಭಕ್ತಿಭರದಿಂದಂ ಮ ||
ಚ್ಚರಣದೆಚೂಡಾಮಣಿಯಂ |
ಮರೆಯದೆ ಪಡಲಿಡಿಸಿ ಬಿನಯ್ಯಮುಂ ನೀಂ ಬಿಡೆಯಾ || ೮೯ ||

(ಎಂದು ಚೂಡಾಮಣಿಯನ್ನು ತೆಗೆದುಕೊಂಡು) ಹಾ! ವತ್ಸನೆ! ಈಗ ಇದನ್ನು ನೋಡಿದಮಾತ್ರದಿಂದಲೇ ನಿನ್ನನ್ನು ನೋಡಿದಂತೆ ತಿಳಿದುಕೊಳ್ಳಬೇಕಾಯಿತೆ! (ಎಂದು ಎದೆಯ ಮೇಲೆ ಇಟ್ಟುಕೊಂಡು) ಅಹಹ!

ವೃತ್ತಂ || ಬಗೆಯೊಳ್‌ಭಕ್ತಿಯನಾಂತು ದೂರದೊಳೆಮತ್ಪಾದಕ್ಕೆ ನೀಂ ಪಜ್ಜೆಪ | ಜ್ಜೆಗ
ಮಾನಮ್ರಶಿರಸ್ಕನಾದಕತದಿಂದಂ ಮಣ್ಪನಾಳ್ವಿದ್ದೋರ್ಡುಂ || ಮಗುವೇ!
ನಿನ್ನ ಕಿರೀಟರತ್ನಮಿದು ಖಡ್ಗಾಗ್ರಂಬೊಲೀಪೊಳ್ತಿನೊಳ್ | ಬಗಿಯುತ್ತಿರ್ದ್ದ
ಪುದೆನ್ನುರಸ್ಸ್ಥಳಮನೀಪಾಂಗೆಂತಿದಕ್ಕಾರ್ದುದೋ || ೯೦ ||

ದೇವಿ—ಅಯ್ಯೋ! ಪುತ್ರನೇ! ಜೀಮೂತವಾಹನನೇ, ಪಿತೃಪಾದಸೇವಾ ಸುಖವೊಂದುಹೊರತು ನಿನಗೆ ಯಾವಸುಖವೂ ಬೇಕಾಗಿರಲಿಲ್ಲವಲ್ಲ. ಈಗ ನೀನು ನಿಮ್ಮ ತಂದೆಯನ್ನು ಬಿಟ್ಟು ಸ್ವರ್ಗಸೌಖ್ಯವನ್ನನುಭವಿಸುವುದಕ್ಕೆ ಹೇಗೆ ಹೋದೆ?

ಜೀಮೂತಕೇತು—(ಕಣ್ಣೀರು ಸುರಿಸುತ್ತಾ) ದೇವಿಯೆ! ಜೀಮೂತವಾಹನನನ್ನು ಕಳೆದುಕೊಂಡ ಬಳಿಕ ನಾವುತಾನೆ ಬದುಕಿರುವೆವೆಂದು ತಿಳಿದಿರುವೆಯೊ? ಏಕೆ ಸುಮ್ಮನೆ ನಿರರ್ಥಕಗಳಾದ ಮಾತುಗಳನ್ನಾಡುವೆ?

ಮಲಯವತಿ—(ಕಾಲಿಗೆ ಬಿದ್ದು ಕೈಮುಗಿದು) ಆರ್ಯನೆ! ಆರ್ಯಪುತ್ರನ

Darkest
pitch

Ray of
shimmering
hope
indicates

ಚೂಡಾಮಣಿಯನ್ನು ಕೊಡು; ಅದನ್ನು ನನ್ನ ಹೃದಯದಲ್ಲಿಟ್ಟುಕೊಂಡು ಅಗ್ನಿ ಪ್ರವೇಶವನ್ನು ಮಾಡಿ ನನ್ನ ಸಂತಾಪವನ್ನು ಹೋಗಲಾಡಿಸಿಕೊಳ್ಳುವೆನು.

ಜೀಮೂತಕೇತು—ಅಮ್ಮಾ, ಪತಿವ್ರತಾಶಿರೋಮಣಿಯೆ! ಏಕೆ ಹೀಗೆ ತ್ವರೆ ಪಡುವೆ? ನಾವೆಲ್ಲರೂ ನಿಶ್ಚಯಿಸಿರುವುದೂ ಹೀಗೆಯೇ.

ದೇವಿ—ಮಹಾರಾಜನೆ! ಆದರೆ ಏಕೆ ಸಾವಕಾಶಮಾಡುವೆ?

ಜೀಮೂತಕೇತು—ಏಕೂ ಇಲ್ಲ; ಆದರೆ ಆಹಿತಾಗ್ನಿಗೆ ಆಹಿತಾಗ್ನಿಯಿಂದಲೇ ಅಂತ್ಯಸಂಸ್ಕಾರವೇ ಹೊರತು ಇತರಾಗ್ನಿಯಿಂದ ಆಗಕೂಡದೆಂದು ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿದೆ. ಆದುದರಿಂದ ಅಗ್ನಿಗೃಹಕ್ಕೆ ಹೋಗಿ ಅಗ್ನಿಯನ್ನು ತೆಗೆದುಕೊಂಡು ಅಗ್ನಿಪ್ರವೇಶವನ್ನು ಮಾಡೋಣ.

ಶಂಖಚೂಡ—(ಮನಸ್ಸಿನಲ್ಲಿ) ಶಿವಶಿವಾ! ಪಾಪಿಯಾದ ನನ್ನೊಬ್ಬನಿಗಾಗಿಯೇ ಸಮಸ್ತವಾದ ಈ ವಿದ್ಯಾಧರಕುಲವೂ ನಷ್ಟವಾಯಿತು. (ಪ್ರಕಾಶಂ) ಆರ್ಯನೆ, ಯಥಾರ್ಥವನ್ನು ತಿಳಿಯದೆಯೆ ಇಂಥಾ ಸಾಹಸಕಾರ್ಯವನ್ನು ಮಾಡುವುದು ಯುಕ್ತವಲ್ಲ. ವಿಧಿಯ ವಿಲಾಸಗಳು ವಿಚಿತ್ರಗಳಲ್ಲವೆ? ಒಂದುವೇಳೆ ಆ ಗರುಡನು ಇವನು ನಾಗನಲ್ಲವೆಂದು ತಿಳಿದು ಜೀಮೂತವಾಹನನನ್ನು ಪ್ರಾಣಸಹಿತವಾಗಿಯೇ ಏಕೆ ಬಿಡಬಾರದು? ಆದುದರಿಂದ ಈ ರಕ್ತಧಾರೆಯನ್ನೇ ನೋಡಿಕೊಂಡು ಗರುಡನನ್ನು ಅನುಸರಿಸಿ ಹೋಗೋಣ.

ದೇವಿ—ದೇವತಾನುಗ್ರಹವಿದ್ದರೆ ಹೇಗಾದರೂ ಜೀವಂತನಾಗಿರುವ ಮಗನನ್ನೇ ನೋಡುವೆನು.

ಮಲಯವತಿ—(ಮನಸ್ಸಿನಲ್ಲಿ) ನಿರ್ಭಾಗ್ಯಳಾದ ನನಗಿದು ದುರ್ಲಭವಲ್ಲವೆ?

ಜೀಮೂತಕೇತು—ವತ್ಸನೆ! ಈ ಮಾತು ಸುಳ್ಳಾಗಲಿ; ಆದರೂ ನಾವು ನಮ್ಮ ಸಂಗಡ ಅಗ್ನಿಯನ್ನು ತೆಗೆದುಕೊಂಡು ಹೋಗುವುದೇ ಒಳ್ಳೆಯದು. ಆದುದರಿಂದ ನೀನು ನಡೆ. ನಾವು ಅಗ್ನಿಗೃಹಕ್ಕೆ ಹೋಗಿ ಅಗ್ನಿಯನ್ನು ತೆಗೆದುಕೊಂಡು ಒಡನೆಯೇ ಬರುವೆವು. (ಎಂದು ಪತ್ನಿಯೊಡನೆಯೂ ಸೊಸೆಯೊಡನೆಯೂ ಹೊರಟು ಹೋಗುವನು.)

ಶಂಖಚೂಡ—ನಾನು ಗರುಡನಬಳಿಗೆ ಹೋಗುವೆನು. (ಎಂದು ಮುಂದೆ ನೋಡಿ)

ವೃತ್ತಂ || ಶೋಣಿತದಲ್ಲಿ ನಾಂದ ನಿಜಚಂಚುವಿನುತ್ಕಷದಿಂ ತಟಸ್ಥಳಂ | ದೋಣಿವೊಲಾಗೆ,ಕಣ್ಬೊಗರ ಕೇಸುರಿಯಿಂ ಸುಡೆ ಕಾನನಾಂತರಂ || ಕ್ಷೋಣಿಯೊಳೂರೆ ಬಜ್ಜರದ ಪಾಂಗಿನ ಕೂರುಗುರ್ಗಳ್ ಸುದೂರದೊಳ್ | ಕಾಣಿಪನಲ್ತೆರಮ್ಯಮಲಯಾಚಲಕೂಟದೊಳೀ ಫಣಿದ್ವಿಷಂ || ೯೧ ||

ಗರುಡ—(ಪೀಠದಮೇಲೆ ಕುಳಿತುಕೊಂಡು ಮುಂಗಡೆಯಲ್ಲಿ ಜೀಮೂತವಾಹನ ನನ್ನು ಕೆಡಹಿಕೊಂಡು ಪ್ರವೇಶಿಸಿ) ನಾನು ಹುಟ್ಟಿದ್ದು ಮೊದಲುಗೊಂಡು ಎಷ್ಟೋ ಸರ್ಪಗಳನ್ನು ತಿನ್ನುತ್ತಾ ಇರುವೆನು. ಆದರೆ ಇಂಥಾ ಆಶ್ಚರ್ಯವನ್ನು ಮಾತ್ರ ಯಾವದಿವಸವೂ ನೋಡಲಿಲ್ಲ. ಈ ಮಹಾತ್ಮನಿಗೆ ತನ್ನ ದೇಹ ಹೋಗುವ್ರದೆಂಬ ವ್ಯಸನವು ಸ್ವಲ್ಪವಾದರೂ ಇಲ್ಲ. ಇದಲ್ಲದೆ ಸ್ವಲ್ಪ ಸಂತೋಷವೂ ಇರುವಂತಿದೆ. ಇದೋ ಈಗ;

ವೃತ್ತಂ || ಎನಿತೊಂದೀತನ ನೆತ್ತರಂ ಕುಡಿದೊಡಂ ಧೈರ್ಯಾಬ್ಧಿಯಾದೀತನಾ |
ನನದೊಳ್ ತೋರದುಸೇದೆ! ಬಾಡನೆನಿತಂ ನಾನೀಳ್ದೊಡಂ ಕಾಂತಿಗುಂ ||
ದನಿವಂ! ಪೊಂಪುಳಿಯುಣ್ಮೆ ಪೊಣ್ಮೆ ತಿವನೀಘುಕ್ತ್ಯಾವಶಿಷ್ಟಾಂಗದ | ಲ್ಲಿ
ನಿತಾಂಪೊಲ್ಲಮೆಗೆಯ್ದೊಡಂ ಹಿತನವೋಲೆನ್ನಂ ಸಮಾಲೋಕಿಪಂ || ೯೨ ||

ಈತನ ಧೈರ್ಯವನ್ನೂ ಸಂತೋಷವನ್ನೂ ನೋಡಿ ನನಗೆ ತುಂಬಾ ಕುತೂಹಲ ವುಂಟಾಗಿರುವುದು. ಇರಲಿ, ಇವನನ್ನು ನಾನು ತಿನ್ನುವುದಿಲ್ಲ; ಯಾರೋ ಏನೋ ವಿಚಾರಿಸಿ ತಿಳಿದುಕೊಳ್ಳುವೆನು.

ಜೀಮೂತವಾಹ—(ಮಾಂಸವನ್ನು ತಿನ್ನದಿರುವ ಗರುಡನನ್ನು ನೋಡಿ)

ಕಂದ || ಮುಸುಕಿದ ನರಂಗಳತ್ತಣಿ |
ನೊಸರ್ಗುಂ ರಕ್ತಂಮುದೀಯತನುವಿನೊಳಿನ್ನುಂ ||
ಎಸೆಗುಂಮಾಂಸಂನಿನ್ನಯ |
ಪಸಿವಡಗಿದುದಿಲ್ಲಮುಣ್ಣದೇಕಿರ್ದಪೆ? ಪೇಳ್ || ೯೩ ||

ಗರುಡ—(ಮನಸ್ಸಿನಲ್ಲಿ) ಆಶ್ಚರ್ಯ! ಆಶ್ಚರ್ಯ! ಈತನು ಈ ಅವಸ್ಥೆಯಲ್ಲಿ ದ್ದರೂ ಧೈರ್ಯವಾಗಿಯೇ ಮಾತನಾಡುವನಲ್ಲ. (ಪ್ರಕಾಶಂ)

ಕಂದ || ನಿನ್ನಯ ವಕ್ಷಸ್ಥಳದೊಳ್ |
ಕೆನ್ನೀರಂಪೀರ್ದುದೆನ್ನ ಚಂಚುಪುಟಂನಾ ||
ನಿನ್ನೇನೆಂಬೆಂನಿನ್ನೀ |
ಯುನ್ನತಧೀರತೆಯೆ ಸೆಳೆದುದೆನ್ನಯುಬಗೆಯಂ || ೯೪ ||

ಆದುದರಿಂದ ನೀನು ಯಾರೆಂದು ಕೇಳಲಪೇಕ್ಷಿಸುವೆನು.

ಜೀಮೂತವಾಹನ—ಹೀಗೆ ಹಸಿದಿರುವ ನೀನು ನನ್ನ ವೃತ್ತಾಂತವನ್ನು ಕೇಳು ವುದು ಯುಕ್ತವಲ್ಲ. ನನ್ನ ರಕ್ತಮಾಂಸಗಳಿಂದ ತೃಪ್ತನಾಗು.

i)

ii)

Is it to mention the mark
of the [illegible] in my breast.
have you now
marked the slough
on my body?

[illegible]

[illegible]

[illegible]

[illegible]

[illegible]

[illegible]

obscuring the
splendour of many gems
by the veil of smoke
of the fire of thy dreadful
poison?

ಶಂಖಚೂಡ—(ಜಾಗ್ರತೆಯಾಗಿ ಸಮೀಪಕ್ಕೆ ಬಂದು) ಅಯ್ಯಾ, ಗರುಡನೆ, ಸ್ವಲ್ಪ ನಿಲ್ಲುನಿಲ್ಲು. ಈತನು ನಾಗನಲ್ಲ, ಈತನನ್ನು ಬಿಡು. ನನ್ನನ್ನು ತಿನ್ನು. ವಾಸುಕಿಯು ನಿನ್ನ ಆಹಾರಾರ್ಥವಾಗಿ ನನ್ನನ್ನು ಕಳುಹಿಸಿರುವನು.

(ಎಂದು ಎದೆಯನ್ನು ಕೊಡುವನು)

ಜೀಮೂತವಾಹನ—(ಶಂಖಚೂಡನನ್ನು ನೋಡಿ ಮನಸ್ಸಿನಲ್ಲಿ) ಅಯ್ಯೋ! ಈ ಶಂಖಚೂಡನು ಇಲ್ಲಿಗೆ ಬಂದುದರಿಂದ ನನ್ನ ಮನೋರಥವು ವ್ಯರ್ಥವಾಯಿತು.

ಗರುಡ—(ಇಬ್ಬರನ್ನೂ ನೋಡಿ ಮನಸ್ಸಿನಲ್ಲಿ) ಇಬ್ಬರೂ ವಧ್ಯಚಿಹ್ನವನ್ನು ವಹಿಸಿರುವರು. ಆದರೆ ಇವರಿಬ್ಬರಲ್ಲಿ ಯಾವನು ನಾಗನೋ ತಿಳಿಯದು.

ಶಂಖಚೂಡ—ನೀನು ಭ್ರಾಂತಿಪಡುವುದು ಯುಕ್ತವೇ ಸರಿ. ಏಕಂದರೆ

ವೃತ್ತಂ || ಮೆಯ್ಗೇಸ್ವಸ್ತಿಕನಿರ್ಸ್ವರೆಮ್ಮೆರ್ದೆಗಳೊಳ್ ಮದ್ದೇಹಮಂ ಪತ್ತಿದೀ |
ಪೆರೆಯಂ ಕಾಣೆಯ ? ಮಾತನಾಡುವೆರಡುಂ ಜಿಹ್ವಾಗ್ರಮಂನೋಡೆಯಾ ?
ಗರಳೋಗ್ರಾನಲಧೂಮಕೀರ್ಣಮಣಿಯಿಂದೊಪ್ಪುತ್ತೆ ಶೋಕಾತಿಸೀ |
ತ್ಕರಣೋತ್ಸರ್ಪಿಯೆನಿಪ್ಪ ಮುಪ್ಪೆಡೆಯುಮಂ ನೋಟಕ್ಕೆ ನೀಂತಾರೆಯಾ ||

ಗರುಡ—(ಶಂಖಚೂಡನ ಹೆಡೆಯನ್ನೂ ಜೀಮೂತವಾಹನನನ್ನೂ ನೋಡುತ್ತಾ) ನಾನು ಕೊಲ್ಲಬೇಕೆಂದು ಚಿಂತಿಸುತ್ತಿದ್ದೆನಲ್ಲಾ ! ಇವನು ಯಾರು ?

ಶಂಖಚೂಡ—(ಜೀಮೂತವಾಹನನನ್ನು ಕುರಿತು) ಅಯ್ಯಾ, ವಿದ್ಯಾಧರ ಕುಲಕ್ಕೆ ತಿಲಕಪ್ರಾಯನಾದ ಜೀಮೂತವಾಹನನೆ! ಪರಮಕಾರುಣಿಕನಾದ ನೀನು ಇಂಥಾ ಕಠೋರವಾದ ಕಾರ್ಯಕ್ಕೆ ಪ್ರವರ್ತಿಸಬಹುದೆ ?

ಗರುಡ—(ಮನಸ್ಸಿನಲ್ಲಿ)

ವೃತ್ತಂ || ಮೇರುವಿನಲ್ಲಿ ಮಂಧರದ ಕಂಧರದಲ್ಲಿ ಮಹೇಂದ್ರಶೈಲದೊಳ್ | ತಾರನಗೇಂ
ದ್ರದೊಳ್ ಮಲಯಭೂಧರದೊಳ್ ತುಹಿನಾದ್ರಿಕೂಟದೊಳ್ || ಚಾರಣ
ಸಂಚಯಂ ಜಗಮನೀಕ್ಷಿಪಪೇಕ್ಷೆಯಿನೈತರುತ್ತೆಮು | ನ್ನಾರ ಚರಿತ್ರಮಂ
ನಲಿದುಪಾಡಿದುದಂ ಕಿವಿಯಾರೆ ಕೇಳ್ದೆನೋ || ೯೬ ||

ಆ ವಿದ್ಯಾಧರಕುಮಾರನಾದ ಜೀಮೂತವಾಹನನೇ ಈತನು ! ಹೇಗೂ ನಾನು ಮಹತ್ತರವಾದ ಅಪಕೀರ್ತಿಯೆಂಬ ಕೆಸರಿನಲ್ಲಿ ಮುಳುಗಿದೆನು.

ಜೀಮೂತವಾಹನ—ಅಯ್ಯಾ, ನಾಗಶ್ರೇಷ್ಠನೆ! ನೀನು ಯಾತಕ್ಕೆ ಹೀಗೆ ವ್ಯಾಕುಲನಾಗಿರುವೆ ?

ಶಂಖಚೂಡ—ಅಯ್ಯಾ ಮಹಾತ್ಮನೆ! ಆದರೆ ನಾನು ವ್ಯಾಕುಲಪಡುವುದಕ್ಕೆ ಇದು ಸಮಯವಲ್ಲವೋ?

ಕಂದ || ಕುಡಲಾರದೆನ್ನತನುವಂ |
ಕಡುದುಗುಡವನಾಂತು ಪಕ್ಷಿರಾಜಂಗೀನಿ ||
ನ್ನೊಡಲಂ ತೆರಿಸುತೆ ಬಾಳ್ವೀ |
ಜಡಸಂ ಪಾತಾಳದಡಿಗವೊಂದಿಪುದುಚಿತಂ || || ೯೭ ||

ಗರುಡ—ಕಾರುಣಿಕನಾದ ಈ ಮಹಾತ್ಮನು ನನ್ನ ಆಹಾರಕ್ಕೆ ಗೋಚರನಾದ ಈ ನಾಗನನ್ನು ಕಾಪಾಡುವುದಕ್ಕಾಗಿ ತನ್ನ ದೇಹವನ್ನೇ ಒಪ್ಪಿಸಿದನು. ಇದರಿಂದ ನಾನು ಮಹಾ ದುಷ್ಕಾರ್ಯವನ್ನೇ ಮಾಡಿದೆನು. ಇನ್ನು ಬಹಳವಾಗಿ ಹೇಳಿ ಫಲವೇನು? ಬೋಧಿಸತ್ವನನ್ನೇ ಕೊಲ್ಲಬೇಕೆಂದು ಚಿಂತಿಸಿದೆನು. ಆದುದರಿಂದ ಮಹತ್ತರವಾದ ಈ ಪಾಪಕ್ಕೆ ಅಗ್ನಿಪ್ರವೇಶವೇ ಪ್ರಾಯಶ್ಚಿತ್ತವಲ್ಲದೆ ಬೇರೆ ಯಾವುದೂ ಕಾಣಲಿಲ್ಲ. ಅಗ್ನಿಯನ್ನು ಎಲ್ಲಿ ಸಂಪಾದಿಸಲಿ? (ಎಂದು ನಾಲ್ಕು ಕಡೆಯಲ್ಲಿಯೂ ನೋಡಿ) ಓಹೋ! ಕೆಲವರು ಅಗ್ನಿಸಮೇತರಾಗಿ ಈಕಡೆಗೇ ಬರುತ್ತಿರುವರು. ನಾನೂ ಇವರನ್ನೇ ಕಾದುಕೊಂಡಿರುವೆನು.

ಶಂಖಚೂಡ—ಅಯ್ಯಾ! ಇದೊ ನೋಡು, ನಿನ್ನ ತಾಯಿತಂದೆಗಳು ಬಂದಿರುವರು.

ಜೀಮೂತವಾಹನ—(ಗಾಬರಿಯಿಂದ) ಅಯ್ಯಾ ಶಂಖಚೂಡನೆ! ನನ್ನನ್ನು ಕುಳ್ಳಿರಿಸಿ ಈ ಬಹಿರ್ವಾಸವನ್ನು ಹೊದಿಸಿ ಸಮೀಪದಲ್ಲಿಯೇ ನಿಂತು ನನ್ನನ್ನು ಹಿಡಿದುಕೊಂಡಿರು. ಇಲ್ಲದಿದ್ದರೆ ಈ ದುರವಸ್ಥೆಯಲ್ಲಿರುವ ನನ್ನನ್ನು ನಮ್ಮ ತಾಯಿಯು ನೋಡಿ ಪ್ರಾಣತ್ಯಾಗ ಮಾಡದೆ ಇರಲಾರಳು.

ಶಂಖಚೂಡ—(ಪಾರ್ಶ್ವದಲ್ಲಿ ಬಿದ್ದಿದ್ದ ಬಹಿರ್ವಾಸವನ್ನು ತೆಗೆದುಕೊಂಡು ಅವನಿಗೆ ಹೊದಿಸುವನು.)

ಜೀಮೂತಕೇತು—(ಹೆಂಡತಿಯೊಡನೆಯೂ ಸೊಸೆಯೊಡನೆಯೂ ಪ್ರವೇಶಿಸಿ) ಹಾ! ಪುತ್ರಾ! ಜೀಮೂತವಾಹನ!

ವೃತ್ತಂ || ಇವನೆಮ್ಮೊಂದಿಗನೀತನನ್ಯನೆನುತಂ ಕಾರುಣ್ಯದೊಳ್ ಭೇದಮುಂ | ಟೆ
ವಿಲೋಕಿಪ್ಪೊಡನೇಕರಂ ಪೊರೆವುದೋ ಮೇಣೊರ್ವನಂ ಕಾವುದೋ ||
ಸ್ವವಪುರ್ದಾನದಿನೆನ್ನದಿತ್ತೊಡಲನಾತಾರ್ಕ್ಷ್ಯಂಗೆನೀಂಪಾವನು|ತ್ಸವದಿಂ
ಪಾಲಿಸಿಪೆತ್ತರಂ ಪ್ರಿಯೆಯುನೆಮ್ಮಾವಂಶಮುಂ ನೆಗ್ಗಿದೈ || ೯೮ ||

See the Technique

Many [illegible]

No 2

Find the [illegible] for [illegible]
Talking
& [illegible] [illegible]

ದೇವಿ—(ಮಲಯವತಿಯನ್ನು ಕುರಿತು) ಮಗುವೆ, ಅಳಬೇಡ, ಅಳಬೇಡ, ನಿನ್ನ ಬಾಷ್ಪಧಾರೆಗಳಿಂದ ಈ ಅಗ್ನಿಯು ಆರಿಹೋಗುವಂತಾಯಿತಲ್ಲವೆ?

(ಎಲ್ಲರೂ ಹೊರಡುವರು.)

ಗರುಡ—ಹಾ! ಪುತ್ರ! ಜೀಮೂತವಾಹನಾ! ಎಂದು ಅಳುತ್ತಿರುವವನು ನಿಜವಾಗಿ ಇವನ ತಂದೆಯೇ! ಇನ್ನು ಯೋಚಿಸಿ ಫಲವೇನು? ಇವನ ಮಗನನ್ನು ನಾನು ಕೊಂದ ಕಾರಣ ಈತನಿಗೆ ನಾನು ನನ್ನ ಮುಖವನ್ನು ತೋರಿಸಲು ನಾಚಿಕೊಳ್ಳುವೆನು. ಆದಕಾರಣ ಇವರು ತಂದಿರುವ ಅಗ್ನಿಯು ನನಗೆ ದೊರಕುವ ಬಗೆ ಹೇಗೆ? ಅಥವಾ ಅಗ್ನಿಗಾಗಿ ನಾನು ಇಷ್ಟು ಯೋಚನೆ ಮಾಡಬೇಕೆ? ಸಮುದ್ರದ ತೀರದಲ್ಲಿಯೇ ಇರುವೆನಲ್ಲವೆ? ಆದುದರಿಂದ ಇದೋ ಈಗ—

ವೃತ್ತಂ || ಜಗತೀಚಕ್ರಮನೊರ್ಮೆನುಂಗಿದಪೆನಾನೆಂದಂತಕಂ ನೀಳ್ದನಾ| ಲಗೆಯ
ಗ್ರಂಚಲಿಪಂತೆವೋಲಳುರ್ದು ಮುನ್ನೀರೇಳುಮಂ ಸೆಯ್ಯ ಬಿಂ|| ದುಗೆ
ತೋಡಾಗಿಸಲಾರ್ತ ಪೇರುರಿ ಮದೀಯೋತ್ಪಾತವಾತಂಗಳಿಂ| ಮುಗಿ
ಲುದ್ದಂ ನೆಗೆದಾಡೆ ಕಾಲಶಿಖಿಯಂತಿರ್ಪೌರ್ವನೊಳ್ ಬಿಳ್ದಪೆಂ ||೯೯||

(ಎಂದು ಏಳುವುದಕ್ಕೆ ಯತ್ನಿಸುವನು.)

ಜೀಮೂತವಾಹನ—ಅಯ್ಯಾ ಪಕ್ಷಿರಾಜನೆ! ಈ ಉದ್ಯೋಗವನ್ನು ಬಿಡು ಬಿಡು. ಈ ಪಾಪಕ್ಕೆ ಇದು ಪ್ರತೀಕಾರವಲ್ಲ.

ಗರುಡ—(ಮೊಣಕಾಲೂರಿ ನಿಂತು ಕೈಮುಗಿದು) ಅಯ್ಯಾ ಮಹಾತ್ಮನೇ! ಆದರೆ, ಯಾವುದು ಹೇಳು?

ಜೀಮೂತವಾಹನ—ಸ್ವಲ್ಪತಾಳು. ನಮ್ಮ ತಾಯಿತಂದೆಗಳು ಬಂದಿರುವರು. ಆದಕಾರಣ ಇವರಿಗೆ ವಂದಿಸುವೆನು.

ಜೀಮೂತಕೇತು—(ನೋಡಿ ಸಂತೋಷದಿಂದ) ದೇವಿಯೆ! ದೈವಯೋಗದಿಂದ ನೀನೇ ಪುಣ್ಯವತಿ. ವತ್ಸನಾದ ಈ ಜೀಮೂತವಾಹನನು ಸಾಯದೆ ಬದುಕಿರುವನು. ಅಲ್ಲದೆ ಶಿಷ್ಯನ ಹಾಗೆ ಕೈಮುಗಿದುಕೊಂಡಿರುವ ಗರುಡನಿಂದ ಸೇವೆಯನ್ನೂ ಮಾಡಿಸಿಕೊಳ್ಳುತ್ತಿರುವನು.

ದೇವಿ—ಮಹಾರಾಜನೆ! ಅಕ್ಷತಶರೀರನಾದ ಪುತ್ರನ ಮುಖವನ್ನು ನೋಡಿದ ಕಾರಣ ಕೃತಾರ್ಥಳಾದೆನು.

ಮಲಯವತಿ—(ಮನಸ್ಸಿನಲ್ಲಿ) ಆರ್ಯಪುತ್ರನು ಜೀವಂತನಾಗಿರುವನೋ ಇಲ್ಲವೋ ಎಂಬ ಸಂದೇಹವು ಈಗ ಪರಿಹೃತವಾಯಿತು.

ಜೀಮೂತಕೇತು—(ಸಮೀಪಕ್ಕೆ ಬಂದು) ವತ್ಸನೆ! ಬಾ, ನನ್ನನ್ನು ಆಲಿಂಗಿಸು.

ಜೀಮೂತವಾಹನ—(ಏಳುವುದಕ್ಕೆ ಹೋದಾಗ ಬಹಿರ್ವಾಸವು ಕೆಳಗೆ ಬೀಳಲು ಮೂರ್ಛೆಹೋಗುವನು.)

ಶಂಖಚೂಡ—ಕುಮಾರನೆ! ಸಂತೈಸಿಕೊ, ಸಂತೈಸಿಕೊ.

ಜೀಮೂತಕೇತು—ನೋಡಿದರೂ ನನ್ನನ್ನು ಹೇಗೆ ಬಿಟ್ಟುಹೋದೆ?

ದೇವಿ—ಹಾ! ಪುತ್ರನೆ! ವಾಙ್ಮಾತ್ರದಿಂದಲೂ ನನ್ನನ್ನು ಬಹುಮಾನಿಸದೆ ಹೋದೆಯಾ?

ಮಲಯವತಿ—ಹಾ! ಆರ್ಯಪುತ್ರನೆ! ಗುರುಜನವನ್ನೂ ಉಪೇಕ್ಷಿಸಿದೆಯಾ?

(ಎಂದು ಮೂರ್ಛೆ ಹೊಂದುವಳು.)

ಶಂಖಚೂಡ—ಅಯ್ಯೋ ಪಾಪಿಯಾದ ಶಂಖಚೂಡನೆ! ಪ್ರತಿಕ್ಷಣದಲ್ಲಿಯೂ ಹೀಗೆ ಮರಣಕ್ಕಿಂತಲೂ ಹೆಚ್ಚಾದ ದುಃಖವನ್ನು ಅನುಭವಿಸುವುದಕ್ಕಿಂತ ನೀನು ನಿಮ್ಮ ತಾಯಿಯ ಗರ್ಭದಲ್ಲಿರುವಾಗಲೇ ಸಾಯಬಾರದಾಗಿತ್ತೆ?

ಗರುಡ—ಇವೆಲ್ಲವೂ ಅಸಮೀಕ್ಷ್ಯಕಾರಿಯಾಗಿ ಪಾಪಿಯಾದ ನನ್ನ ದೋಷವು ಆದುದರಿಂದ ಹೀಗೆ ಮಾಡುವೆನು. (ಎಂದು ರೆಕ್ಕೆಗಳಿಂದ ಬೀಸುತ್ತಾ) ಅಯ್ಯಾ, ಮಹಾತ್ಮನೆ! ಸಂತೈಸಿಕೊ, ಸಂತೈಸಿಕೊ.

ಜೀಮೂತವಾಹನ—(ಸಂತೈಸಿಕೊಂಡು) ಅಯ್ಯಾ ಶಂಖಚೂಡನೆ! ಗುರುಜನವನ್ನು ಸಮಾಧಾನಪಡಿಸು.

ಶಂಖಚೂಡ—ಆರ್ಯನೆ! ಸಂತೈಸಿಕೊ, ಸಂತೈಸಿಕೊ. ಅಮ್ಮಾ! ಸಂತೈಸಿಕೊ, ಸಂತೈಸಿಕೊ; ಚೇತರಿಸಿಕೊಂಡ ಜೀಮೂತವಾಹನನನ್ನು ನೀವು ನೋಡಲಿಲ್ಲವೊ? ಇದೋ ಎದ್ದನು. ನಿಮ್ಮನ್ನೇ ಸಮಾಧಾನಪಡಿಸಬೇಕೆಂದು ಕುತೂಹಲಗೊಂಡಿರುವನು.

(ಇಬ್ಬರೂ ಸಂತೈಸಿಕೊಳ್ಳುವರು.)

ದೇವಿ—(ಸೆರಗಿನಿಂದ ಮುಖವನ್ನು ಮುಚ್ಚಿಕೊಳ್ಳುತ್ತಾ) ಆಹಾ! ನಮಗೆ ಬಂದಿದ್ದ ಆಪತ್ತು ತೇಲಿಹೋಯಿತು. ಆದುದರಿಂದ ಅಳಬಾರದು. ಮಗುವೆ, ಅಳಬೇಡ, ಅಳಬೇಡ. ಮೇಲಕ್ಕೆ ಏಳು. ಈಗ ನೀನು ನಿನ್ನ ಪತಿಯ ಮುಖವನ್ನು ನೋಡುವುದು ಒಳ್ಳೆಯದು.

ಮಲಯವತಿ—(ಚೇತರಿಸಿಕೊಂಡು) ಹಾ! ಆರ್ಯಪುತ್ರನೆ.

ದೇವಿ—(ಮಲಯವತಿಯ ಕೈಯಿಂದ ಅವಳ ಬಾಯನ್ನು ಮುಚ್ಚಿ) ಮಗುವೆ, ಬೇಡಬೇಡ, ಏಕೆ ಅಳುವೆ?

ಜೀಮೂತಕೇತು—(ಕಂಬನಿದುಂಬಿ ಮನಸ್ಸಿನಲ್ಲಿ)

ಕಂದ || ಅವಶಿಷ್ಟಾಂಗಂಪೋಗೆನಿ|
ರವಲಂಬತೆಯಿಂದಮೆಂಬವೊಲ್ ಕೊರಲೊಳ್ಪಾ ||

To a mother who gave him life & Bod

[illegible]

[illegible]

[illegible]

ಣವನಿರಿಸಿ ಮರುಗುತಿಪ್ಪಿರ್ಪೆ।
ಕುವರನನೀಕ್ಷಿಸಿಯುಮಿರ್ಪೆನೇಂ ಪಾತಕಿಯೋ॥ ॥೧೦೦॥

ಮಲಯವತಿ—ಅಯ್ಯೋ! ಈ ರೀತಿಯಲ್ಲಿರುವ ಆರ್ಯಪುತ್ರನನ್ನು ನೋಡಿದರೂ ಇನ್ನೂ ಬದುಕಿರುವೆನಲ್ಲಾ! ಲೋಕದಲ್ಲಿ ನನಗಿಂತಲೂ ನಿರ್ಭಾಗ್ಯರು ಯಾರಿರುವರು?

ದೇವಿ—(ಜೀಮೂತವಾಹನನ ಮೈ ಸವರುತ್ತಾ ಗರುಡನನ್ನು ಕುರಿತು) ಅಯ್ಯೋ! ನೃಶಂಸ! ನವಯೌವನಾಲಂಕೃತವಾದ ಈತನ ಶರೀರವನ್ನು ಹೇಗೆ ಈ ದುರವಸ್ಥೆಗೆ ಗುರಿಮಾಡಿದೆ?

ಜೀಮೂತವಾಹನ—ಅಮ್ಮಾ! ಹಾಗೆನ್ನಬೇಡ; ಇವನೇನುಮಾಡಿದನು! ಚೆನ್ನಾಗಿ ವಿಚಾರಿಸಿ ನೋಡಿದರೆ ಮೊದಲೂ ಹೀಗೆಯೇ ಇತ್ತಲ್ಲವೆ?

ಕಂದ॥ ಅಡಗುಮಿದುಳೆಲ್ವುಕೆನ್ನೀರ್।
ಕಡುನೆಣಮುಂ ಮಿಗೆ ಜಿಗಿಲ್ತು ಪಂದೊವಲೆತ್ತಂ॥
ಅಡಸಿ ಜುಗುಪ್ಸಿತಮಾದೀ।
ಯೊಡಲೊಳ್ ಸುಭಗತೆಯ ಸುದ್ದಿಯೇಂ ತೋರುಗುಮೇ ॥೧೦೧॥

ಗರುಡ—ಅಯ್ಯಾ ಮಹಾತ್ಮನೆ! ನರಕಾಗ್ನಿಜ್ವಾಲೆಗೆ ಸಿಕ್ಕಿ ನಾನು ನರಳಬೇಕಾಯಿತಲ್ಲಾ! ಎಂದು ವ್ಯಸನಪಡುತ್ತಿರುವೆನು. ಆದುದರಿಂದ ನನ್ನ ಪಾಪವೆಲ್ಲಾ ಹೋಗುವಂತೆ ಏನಾದರೂ ಉಪದೇಶಮಾಡು.

ಜೀಮೂತವಾಹನ—

ವೃತ್ತಂ॥ ಇನಿಸುಂ ಪ್ರಾಣಿಗೆ ಹಿಂಸೆಯಂ ಬಗೆಯದಿರ್ ಮುಂಗೆಯ್ದ ಪಾಪಕ್ಕಮಿಂ।
ದನುತಾಪಂಬಡೆ ಪಾವುಗಳ್ಗೆ ಭಯಮಂ ಕೊಟ್ಟಾಯುಸಂಬಟ್ಟುಸೈ॥ ಪಿನಕಾ
ಳ್ಪಿಂಚೆಯನೊಂದು ನೀನೆಸಗಿದಲ್ಪಂ ಪಾತಕಂ ಪೋಪುದೈ। ಘನನೀರಹ್ರದ
ಮಧ್ಯದೊಳ್ ಲವಣಲೇಶಂಬೀಳಲೇಂ ಕಾಣ್ಬುದೇ? ॥೧೦೨॥

ಗರುಡ—

ಕಂದ॥ ಮೊದಲಿಂದಿನ್ನೆಗಮಜ್ಞಾ।
ನದ ನಿದ್ರೆಯನಿಂಬುಕೆಯ್ದೊರಂಗಿದ ನನ್ನಂ॥
ಸದಯತೆಯಿಂ ನೀನೆಚ್ಚರಿ।
ಸಿದ ಕತದಿಂ ಕೊಲ್ಲೆನೊಂದುಮಂ ಪನ್ನಗಮಂ ॥೧೦೩॥

ಈಗಲಾದರೋ,

ವೃತ್ತಂ || ಒಂದೆಡೆ ಸುಣ್ಮಳಲ್ಗೆ ಪಡಿಯಪ್ಪೊಡಲಂ ಸಲೆ ಸಿಂಪಿಗೆಯ್ದು ಜೆ| ಲ್ವೊಂದಿದ
ದೀವಿಯಂತೆವೊಲದೊಂದೆಡೆ ಬಟ್ಟೊಡಲಿಂದಮಬ್ಧಿಯೊಳ್ || ಸುಂದರ
ಮಪ್ಪದೊಂದು ಸುಳಿಯುಂದದಿನ್ನೊಂದೆಡೆ ಕೂಲದಿಂದೆ ಕೂ| ಲಂದಳ
ರ್ವಂದು ಸೇತುಸಮಮಾಗುತೆ ಪಾವುಗಳಾಡುಗೊಳ್ಮೆಯಿಂ || ೧೦೪ ||

ಮತ್ತೂ—

ವೃತ್ತಂ || ತಮದೊಡ್ಡಂಗೆಲೆವಂದಸೋರ್ಮ್ಮಡಿ ಸಡಿಲ್ದೀಸಾಡೆ ಪಿಂಗಾಲೊಳ| ರ್ಯಮ
ಬಾಲಾತಪತಾಮ್ರಮಾದ ಕದಪುಂ ಸಿಂದೂರಮಂ ತಳ್ತವೋಲ್ || ಭ್ರಮೆ
ಯಂ ಮಾಡೆ ಭುಜಂಗಮಾಂಗನೆಯರೀ ಶ್ರೀಚಂದನಾರಣ್ಯದೊಳ್ | ಸುಮ
ಬಾಣಾಹವಖೇದವಂ ಸುರೆದು ಪೇಳ್ಗೀನಿನ್ನ ಸತ್ಕೀರ್ತಿಯಂ || ೧೦೫ ||

ಜೀಮೂತವಾಹನ—ಅಯ್ಯಾ, ಮಹಾನುಭಾವನೆ, ಭಾಪುಭಾಪು! ನಿನ್ನ ಶಾಂತಿ ಗುಣವು ದಿನೆದಿನೇ ಅಭಿವೃದ್ಧಿ ಹೊಂದಲಿ. (ಶಂಖಚೂಡನನ್ನು ಕುರಿತು) ಅಯ್ಯಾ ಶಂಖಚೂಡನೆ! ಈಗ ನೀನು ನಿನ್ನ ಮನೆಗೆ ಹೋಗಬಹುದು.

ಶಂಖಚೂಡ—(ನಿಟ್ಟುಸಿರುಬಿಟ್ಟು ತಲೆಯನ್ನು ಬಗ್ಗಿಸಿಕೊಳ್ಳುವನು.)

ಜೀಮೂತವಾಹನ—(ನಿಟ್ಟುಸಿರುಬಿಟ್ಟು ತಾಯಿಯನ್ನು ನೋಡಿ ಶಂಖಚೂಡ ನನ್ನು ಕುರಿತು)

ಕಂದ || ಎಲರುಣಿವಗೆಯನ ಚಂಚುವಿ|
ನಳಿದಪೆ ನೀನೀಗಳೆಂದು ಶಂಕಿಸಿ ಬಗೆಯೊಳ್ ||
ಕಳವಳಿಸುತೆ ನಿನ್ನಾ ತಾ|
ಯಳುಂಬಮಾದಳಲನಾಂತು ತೊಳಲುತ್ತಿರ್ಪಳ್ || ೧೦೬ ||

ದೇವಿ—(ಕಂಬನಿದುಂಬಿ) ಗರುಡನ ಬಾಯಿಗೆ ತುತ್ತಾದರೂ ಗಾಸಿಹೊಂದದೆ ಇರುವ ಪುತ್ರನನ್ನು ನೋಡುವಳಲ್ಲ! ಆಕೆಯು ಎಷ್ಟು ಪುಣ್ಯವತಿಯೋ ಕಾಣೆ.

ಶಂಖಚೂಡ—ಅಮ್ಮಾ, ಈತನು ಕ್ಷೇಮದಿಂದಿದ್ದರೆ ನಿನ್ನ ಮಾತೇ ನಿಜ.

ಜೀಮೂತವಾಹನ—(ಸಂಕಟವನ್ನು ಸೂಚಿಸುತ್ತಾ) ಇದುವರೆಗೂ ನಾನು ಪರೋಪಕಾರತತ್ಪರನಾಗಿದ್ದೆನು. ಆದುದರಿಂದ ನನಗೆ ಯಾವ ಯಾತನೆಯೂ ತೋರ ಲಿಲ್ಲ. ಈಗ ಆ ಯಾತನೆಗಳು ಮರ್ಮಭೇದಕಗಳಾಗಿ ನನ್ನನ್ನು ಬಾಧಿಸುತ್ತಿರುವುವು.

(ಎಂದು ಮರಣಾವಸ್ಥೆಯನ್ನು ನಟಿಸುವನು.)

ಜೀಮೂತಕೇತು—(ಗಾಬರಿಯಿಂದ) ಅಪ್ಪಾ! ಮಗುವೆ! ಯಾಕೆ ಹೀಗೆ ಮಾಡುವೆ?

[illegible]
[illegible]
[illegible]
[illegible]
[illegible]
[illegible]
[illegible]

ದೇವಿ—ಅಯ್ಯೋ! ಇದೇಸು ಹೀಗಿರುವನು? (ಎಂದೆದೆಯನ್ನು ಬಡಿದು ಕೊಳ್ಳುತ್ತಾ) ಅಯ್ಯೋ! ಇನ್ನೇನು ಗತಿ! ನಮ್ಮ ಮಗುವಿಗೆ ಮರಣಸಂಕಟ ವುಂಟಾಗಿರುವುದಲ್ಲಾ!

ಮಲಯವತಿ—ಹಾ! ಆರ್ಯಪುತ್ರನೆ! ನನ್ನನ್ನು ತೊರೆದು ನೀನೊಬ್ಬನೇ ಹೋಗಬೇಕೆಂದು ಯೋಚಿಸಿರುವ ಹಾಗೆ ಕಾಣುತ್ತೀಯಲ್ಲಾ!

ಜೀಮೂತವಾಹನ—(ಕೈಮುಗಿಯಬೇಕೆಂದಪೇಕ್ಷಿಸುತ್ತಾ) ಎಲೈ ಶಂಖ ಚೂಡನೆ! ನನ್ನ ಕೈಗಳನ್ನು ಸೇರಿಸು.

ಶಂಖಚೂಡ—(ಅವನ ಕೈಗಳನ್ನು ಸೇರಿಸಿ ಕಂಬನಿದುಂಬಿ) ಅಯ್ಯೋ! ಲೋಕವು ಅನಾಯಕವಾಯಿತು.

ಜೀಮೂತವಾಹನ—(ಅರೆಮುಚ್ಚಿದ ಕಣ್ಣಿನಿಂದ ತನ್ನ ತಂದೆತಾಯಿಗಳನ್ನು ನೋಡುತ್ತಾ) ಇದೇ ನನ್ನ ಕಡೆಯ ನಮಸ್ಕಾರ.

ವೃತ್ತಂ || ಮಿಡುಕಲೆಬಾರದೆಳ್ಳನಿತು ಮೆಂಗವಿುದಕ್ಕಟ! ಸತ್ವಮಿರ್ದೊಡಂ | ನುಡಿ
ಯನದೊಂದುಮಂ ಸ್ಫುಟಪದಾಕ್ಷರಮಂ ಕಿವಿ ಕೇಳಲಾರಿದೇ || ಗಡ!
ಜನಕಾ! ವಿಲೋಚನಪುಟಂ ಮಿಗೆ ಮುಚ್ಚಿಮುಗುಳ್ದುದಯ್ಯೊಮೇ | ಗಡ
ವುರ್ದು ಬಲ್ಪುಗುಂದಿ ಕುದಿವೆನ್ನಸುವುಂಗಡ ಕಂಠದೇಶಮಂ || ೧೦೭ ||

ಅಥವಾ ಇದರಿಂದೇನು ಫಲ? (ಇಂದೆನ್ನ ತನುವನಿತ್ತಾನೆಂಬ ಪದ್ಯವನ್ನು ಹೇಳಿ ನೆಲದ ಮೇಲೆ ಬೀಳುವನು.)

ದೇವಿ—ಹಾ! ಪುತ್ರ! ಗುರುಚರಣವತ್ಸಲಾ! ಜೀಮೂತವಾಹನಾ! ಪುನಃ ನಿನ್ನನ್ನು ನಾನೆಲ್ಲಿ ನೋಡಲಿ?

ಜೀಮೂತಕೇತು—ಹಾ! ಪುತ್ರ! ಜೀಮೂತವಾಹನಾ! ಪ್ರಣಯಿಜನವತ್ಸಲ! ಹಾ! ಸರ್ವಗುಣನಿಧಿ! ಎಲ್ಲಿಹೋದೆ? ನನ್ನ ಮಾತಿಗೆ ಪ್ರತ್ಯುತ್ತರವನ್ನು ಕೊಡ ಬಾರದೆ? (ಎಂದು ಕೈಯನ್ನು ಮೇಲೆತ್ತಿ) ಕಷ್ಟ ಕಷ್ಟ!

ವೃತ್ತಂ || ವಿನಯಕ್ಕಾಲಯಮಿಲ್ಲದಾಯ್ತು ಸಹನಕ್ಕಿಂಬಿಲ್ಲದಾಯಿತ್ತಾಗಳ್| ಘನ
ಸತ್ಯಕ್ಕೆಡೆಯಿಲ್ಲದಾಯ್ತು ನೆಗಳ್ದಾಬೀರಕ್ಕೆಬೀಡಿಲ್ಲದಾ || ಯ್ತುನವೋ
ದಾರತೆಗಿರ್ಕೆವೋಯ್ತುದಯೆಗಂ ದಿಕ್ಕಿಲ್ಲದಾಯ್ತಕ್ಕಟಾ | ತನಯಾ!
ಹಾ! ಬರಿದಾಯ್ತಿದೆಲ್ಲಜಗಮುಂ ಲೋಕಾಂತರಕ್ಕಯ್ದೆ ನೀಂ || ೧೦೮ ||

ಮಲಯವತಿ—ಹಾ! ಆರ್ಯಪುತ್ರನೆ! ನನ್ನನ್ನು ಬಿಟ್ಟು ನೀನೆಲ್ಲಿ ಹೋದೆ? ಅಯ್ಯೋ! ನಿರ್ಭಾಗ್ಯಳಾದ ಮಲಯವತಿಯೆ! ಇದನ್ನು ನೋಡುವುದಕ್ಕಾಗಿಯೇ ನೀನಿನ್ನೂ ಬದುಕಿರುವೆಯೋ?

ಶಂಖಚೂಡ—ಪ್ರಾಣಗಳಿಗಿಂತಲೂ ಆಪ್ತನಾದ ನನ್ನನ್ನು ಬಿಟ್ಟು ನೀನೆಲ್ಲಿಗೆ ಹೋಗುವೆ? ನಾನೂ ನಿನ್ನ ಸಂಗಡಲೇ ಬರುವೆನು.

ಗರುಡ—ಕಷ್ಟ ಕಷ್ಟ! ಈತನು ಮೃತನಾದನು. ಈಗ ನಾನೇನು ಮಾಡಲಿ?

ದೇವಿ—(ಕಣ್ಣೀರು ಸುರಿಸುತ್ತಾ ಮೇಲೆ ನೋಡಿ) ಅಯ್ಯೋ, ಪೂಜ್ಯರಾದ ಲೋಕಪಾಲಕರೆ! ಅಮೃತಸೇಚನವನ್ನಾದರೂ ಮಾಡಿ ನಮ್ಮ ಮಗುವನ್ನು ಬದುಕಿಸಬಾರದೇ?

ಗರುಡ—(ಸಂತೋಷದಿಂದ ಮನಸ್ಸಿನಲ್ಲಿ) ಆಹಾ! ಅಮೃತಶಬ್ದೋಚ್ಚಾರಣ ದಿಂದ ಈಕೆಯು ನನಗೆ ಚೆನ್ನಾಗಿ ಜ್ಞಾಪಿಸಿದಳು. ನನಗೆ ಬಂದ ಅಪಕೀರ್ತಿಯು ನಿರ್ಮೂಲವಾಯಿತೆಂದು ತಿಳಿಯುವೆನು. ಆದುದರಿಂದ ಈಗ ಇಂದ್ರನನ್ನು ಪೂಜಿಸಿ ಆತನ ಅನುಗ್ರಹದಿಂದ ಅಮೃತವರ್ಷವನ್ನು ಕರೆಸಿ ಅದರಿಂದ ಈ ಜೀಮೂತವಾಹನ ನನ್ನೂ, ಮೊದಲು ನಾನು ತಿಂದು ಎಲುವುಗಳು ಮಾತ್ರ ಉಳಿದಿರುವ ಈ ಸರ್ಪ ಗಳನ್ನೂ ಬದುಕಿಸುವೆನು. ಆ ಇಂದ್ರನೂ ಒಂದುವೇಳೆ ಅಮೃತವೃಷ್ಟಿಯನ್ನು ಕರೆಯದಿದ್ದರೆ,

ವೃತ್ತಂ ‖ ಎರಕೆಗಳಿಂದೆಮೇಲೆಳೆದುಪಾಶಿಯನಾಯತವೇಗದಿಂದ ಮಾ| ಮರುತನ
ನಿಕ್ಕಿ ಕಣ್ಣುರಿಗೆ ಸೋವತಮಾಗಿಸಿ ಪಾವಕಾರ್ಕರಂ ‖ ಸುರಪನ ವಜ್ರ
ಮಂ ಧನದನಾಗದೆಯಂ ಜಮನಾಂತದಂಡಮಂ| ಮುರಿಯುತೆ ಪರ್ಪಿಪೆಂ
ಸುಧೆಯನಳ್ದಿದೆರಂಕೆಗಳಿಂ ಕ್ಷಣಾರ್ಧದೊಳ್ ‖ ‖ ೧೦೯ ‖

(ಎಂದು ಹೊರಟುಹೋದನು.)

ಜೀಮೂತಕೇತು—ವತ್ಸ! ಶಂಖಚೂಡ! ಏಕಿನ್ನೂ ನಿಂತಿರುವೆ? ಕಟ್ಟಿಗೆಯನ್ನು ತಂದು ಚಿತಿಯನ್ನು ಸಿದ್ಧಪಡಿಸು; ನಾವೂ ಇವನೊಡನೆಯೇ ಸಹಗಮನಮಾಡುವೆವು.

ದೇವಿ—ಅಯ್ಯಾ, ಜಾಗ್ರತೆಮಾಡು; ನಿಮ್ಮಣ್ಣನು ನಮ್ಮನ್ನು ಎಷ್ಟುಹೊತ್ತು ಬಿಟ್ಟಿದ್ದಾನು?

ಶಂಖಚೂಡ—(ಕಂಬನಿದುಂಬಿ) ಅಪ್ಪಣೆ, ಈ ಸಹಗಮನ ವಿಷಯದಲ್ಲಿ ನಾನು ನಿಮಗಿಂತಲೂ ಮುಂದಾಳಾಗಿರುವೆನು. (ಎಂದೆದ್ದು ಚಿತಿಯನ್ನು ಮಾಡಿ)

ಆರ್ಯನೆ! ಚಿತಿಯು ಸಿದ್ಧವಾಯಿತು.

ಜೀಮೂತಕೇತು—ಅಯ್ಯೋ! ಕಷ್ಟ ಕಷ್ಟ!

ವೃತ್ತಂ ‖ ಶಿರದೊಳ್ ನುಣ್ಬೊಗರೇರೆ ಮೌಳಿ ಸುಳಿಯುಂ ಭ್ರೂಮಧ್ಯದೊಳ್ ತೋರೆ
ತಾ| ವರೆಯಂ ಕಣ್ಣುಮೆದೂರೆಪೋರೆ ವರಲಕ್ಷ್ಮೀಕಾಂತನೊಳ್ ಪೇರುರಂ‖

Deus
ex Machina

2nd Time
purify

use for Marriage
use for Resurrection

ಕರದೊಳ್ ಚಕ್ರದರೇಖೆ ಕಾಣುತಿರೆಯುಂ ಹಾ! ವತ್ಸ! ಮದ್ದುಷ್ಕೃತೋ|
ತ್ಕರದಿಂ ಚಕ್ರಪತಿತ್ವಮಂ ತೊರೆದು ನೀಂ ಲೋಕಾಂತರಕ್ಕಯ್ದಿದಯ್ ||

ದೇವಿಯೆ! ಇನ್ನೇತಕ್ಕೆ ಶೋಕಿಸುವೆ? ಏಳು, ಚಿತಿಯನ್ನು ಹತ್ತೋಣ.

(ಎಲ್ಲರೂ ಏಳುವರು.)

ಮಲಯವತಿ—(ಕೈಮುಗಿದು, ಆಕಾಶವನ್ನು ನೋಡುತ್ತಾ) ಭಗವತಿ! ಗೌರಿ! ವಿದ್ಯಾಧರ ಚಕ್ರವರ್ತಿಯು ನಿನಗೆ ಪತಿಯಾಗುವನು-ಎಂದು ನೀನು ಅಪ್ಪಣೆಕೊಟ್ಟೆ. ಆದರೆ ಮಂದಭಾಗ್ಯಳಾದ ನನ್ನ ಭಾಗಕ್ಕೆ ನೀನೂ ಸುಳ್ಳುಗಾರಳಾದೆಯಾ?

ಗೌರಿ—(ತಟ್ಟನೆ ಬಂದು) ಅಯ್ಯಾ ಜೀಮೂತಕೇತುವೆ! ನಿಲ್ಲು ನಿಲ್ಲು, ಇದು ಸಾಹಸ ಮಾಡುವುದಕ್ಕೆ ಸಮಯವಲ್ಲ.

ಜೀಮೂತಕೇತು—ಓಹೋ! ಇದೇನು! ಪೂಜ್ಯಳಾದ ಗೌರಿಯೇ ಬಂದಳು.

ಗೌರಿ—(ಮಲಯವತಿಯನ್ನು ಕುರಿತು) ಮಗುವೆ! ನಾನು ಸುಳ್ಳುಗಾರಳೆ?

(ಎಂದು ಜೀಮೂತವಾಹನನ ಬಳಿಗೆ ಬಂದು ಕಮಂಡಲುವಿನ ನೀರನ್ನು ಚಿಮುಕಿಸಿ)

ಕಂದ || ಜಗತೀವಲಯಕ್ಕದವಳ|
ಲೊಗೆಯದವೋಲ್ ಸ್ವೈಜಜೀವದಿಂದಮುಮಿಾಗಳ್ ||
ಮಿಗೆ ಪೊರೆವ ನಿನ್ನ ನೆನ್ನೀ|
ಬಗೆ ಮೆಚ್ಚಿತು ಮಗುವೆ ಬರ್ದುಕು ನೀಂ ಚಿರಕಾಲಂ || ೧೧೧ ||

ಜೀಮೂತವಾಹನ—(ಮೇಲಕ್ಕೆ ಏಳುವನು.)

ಜೀಮೂತಕೇತು—(ಸಂತೋಷದಿಂದ) ದೇವಿಯೇ! ನೀನೇ ಪುಣ್ಯವತಿ! ಜೀಮೂತವಾಹನನು ಸ್ವಲ್ಪವೂ ಗಾಸಿಪಡದೆ ಪುನಃ ಮೇಲಕ್ಕೆದ್ದನು.

ದೇವಿ—(ಸಂತೋಷದಿಂದ) ಪೂಜ್ಯಳಾದ ಈ ಗೌರಿಯ ಅನುಗ್ರಹವೇ ಕಾರಣವಲ್ಲವೆ? (ಎಂದು ಗೌರಿಗೆ ನಮಸ್ಕಾರ ಮಾಡುವಳು.)

ದೇವಿ—ಜೀಮೂತಕೇತು—(ಜೀಮೂತವಾಹನನನ್ನು ಆಲಿಂಗಿಸಿಕೊಳ್ಳುವರು.)

ಮಲಯವತಿ—ದೈವಯೋಗದಿಂದ ಆರ್ಯಪುತ್ರನು ಬದುಕಿದನು, (ಎಂದು ಗೌರಿಗೆ ವಂದಿಸುವಳು.)

ಜೀಮೂತವಾಹನ—(ಗೌರಿಯನ್ನು ನೋಡಿ ಕೈಮುಗಿದು)

ಕಂದ || ಬಯಸಿದುದೊಂದಕ್ಕೆರಡಂ|
ದಯದಿಂದಂ ಕುಡುತೆ ವಿನತಜನತಾತಾಪ||

ತ್ರಯಹರೆ ವಿದ್ಯಾಧರ ದೇ|
ವಿಯೆನಿಪ ಗಿರಿತನಯೆ ನಿನ್ನ ಕಾಲ್ಗೆರಗಿದಪೆಂ || ೧೧೨ ||

(ಎಂದು ವಂದಿಸುವನು.)

(ಎಲ್ಲರೂ ಮೇಲೆ ನೋಡುವರು.)

ಜೀಮೂತಕೇತು—ಓಹೋ ಇದೇನು. ಮೋಡವಿಲ್ಲದೆ ಮಳೆಯು ಸುರಿಯುತ್ತಿದೆ!

ಗೌರಿ—ಪಕ್ಷಿರಾಜನಾದ ಗರುಡನು ದೇವಲೋಕದಿಂದ ಈ ಅಮೃತವೃಷ್ಟಿಯನ್ನು ಕರೆಯುತ್ತಿರುವನು. (ಎಂದು ಬೆರಲಿಂದ ತೋರಿಸುತ್ತಾ) ಏನು! ನೀನು ಇದನ್ನು ನೋಡಲಿಲ್ಲವೊ?

ವೃತ್ತಂ || ತಲೆಯೊಳ್ ರಂಜಿಸೆ ರನ್ನಮಂಗಮಖಿಲಂಮೆಯ್ವೋರೆಮುನ್ನಂತೆಕುಂ| ಫಲಿ
ವೃಂದಂ ಸುಧೆಗಾಸೆವಟ್ಟು ರಸನಾಯುಗ್ಮಾಗ್ರಭಾಗಂಗಳಿಂ || ನೆಲನಂ
ನಕ್ಕುತೆ ವಕ್ರಮಾಗಿಪರಿತಂದಾನಂದದಿಂದೆಯ್ದುಗುಂ| ಮಲಯೋರ್ವೀ
ಧರನಿರ್ಝರೋದಕದವೋಲ್ ವಾರಾಶಿಯಂ ವೇಗದಿಂ || ೧೧೩ ||

(ಎಂದು ಜೀಮೂತವಾಹನನನ್ನು ಕುರಿತು) ವತ್ಸ ಜೀಮೂತವಾಹನ! ನಿನಗೆ ಪ್ರಾಣದಾನ ಮಾಡಿದ್ದು ಮಾತ್ರವೇ ಸಾಲದು. ಆದುದರಿಂದ ಇದೂ ಒಂದು ಅನುಗ್ರಹವಿರಲಿ;

ವೃತ್ತಂ || ಮದಿಸಿರ್ಪಂಚೆಗಳೋಳಿತೋಳ್ದಲೆಗಳಿಂ ತಳ್ಪೊಯ್ಯೆಹೇಮಾಂಬುಜಾ| ತದ
ಬಂಡಿಂ ಕೆಸರಾದುದೆಂದೆನಿಸಿದೆನ್ನೀಮಾನಸೋದ್ದೇಶದೊಳ್ || ಉದಿಸುತ್ತಂ
ಪರಿಪೂತಮಾದಜಳದಿಂ ಮಾಣಿಕ್ಯಕುಂಭಂಗಳಿಂ| ಮುದದಿಂ ವಿರಾಜಿಸಿ
ನಿನ್ನನಾನೆಸಗುವೆಂ ವಿದ್ಯಾಧರಾಧೀಶನಂ || ೧೧೪ ||

ಮತ್ತೂ

ಕಂದ || ಇದುಕಾಂಚನಚಕ್ರಂ ಬೆ|
ಳ್ಪೊದವಿದ ಚೌಜಂತದಾನೆಯಿದು ಮೇಣಿದುಕ ||
ಗ್ಗುದುರೆ ಮಲಯವತಿ ಯಿವಳೀ|
ಸದಮಳ ರತ್ನಂಗಳಂವಿಲೋಕಿಸುನೃಪತೀ || ೧೧೫ ||

ಮತಂಗದೇವನೇ ಮುಂತಾದ ವಿದ್ಯಾಧರ ರಾಜರೂ ನನ್ನಿಂದ ಪ್ರೇರಿತರಾಗಿ ತಮ್ಮ ಕಿರೀಟಮಣಿಗಳ ಕಾಂತಿಯಿಂದ ಇಂದ್ರಚಾಪಗಳ ಭ್ರಾಂತಿಯನ್ನುಂಟು ಮಾಡುತ್ತಾ ಭಕ್ತಿಪೂರ್ವಕವಾಗಿ ತಲೆಬಾಗಿ ನಿನಗೆ ನಮಸ್ಕರಿಸುತ್ತಿರುವರು. ಇನ್ನೇನು ಪ್ರಿಯವನ್ನು ಮಾಡಲಿ?

ಜೀಮೂತವಾಹನ—

ವೃತ್ತಂ || ಗಿರಿಸುತೆ ನಿನ್ನ ದರ್ಶನಮದಾಯ್ತುಳಿದಂಗಡ ಶಂಖಚೂಡನೀ | ಗರುಡನು
ಮೆಯ್ದಿದಂ ವಿಸಯಮುಂ ಮೊದಲಲ್ಲವನುಂಡ ಪಾವುಗಳ್ || ಹರಣಮು
ನಾಂತುವೀಪಿತೃಜನಂ ಮುದಪಾಯುವಿಪನ್ನಮಲ್ತುಮೇ | ಣ್ಕೊರೆತು
ದುಸಾರ್ವಭೌಮಪದಮಿಂಪೆರತಾವುದಪೇಕ್ಷಣೀಯಮೌ || ೧೧೬ ||

ಆದರೂ ಇದೊಂದಿರಲಿ.

(ಭರತವಾಕ್ಯಂ)

ವೃತ್ತಂ || ನೀಡುಗೆ ವೃಷ್ಟಿಯಂ ಸಮಯದೊಳ್ಮುಗಿಲ್ಕಾಡುಗೆ ಸೋಗೆ ಯಾವಗಂ |
ಬಾಡದ ಸಸ್ಯಮೆಂಬ ಪಸುರೇರ್ದುಡೆಯೊಂದುಗೆ ಧಾತ್ರಿ ಮುಚ್ಚರಂ ||
ಮೂಡದೆ ಪುಣ್ಯಮಂ ಪಡೆದೆಡೆಗ್ಗಡೆಯಾಗದೆ ಬಂಧು ಮಿತ್ರರಿಂ | ಕೂಡಿ
ವಿನೋದದಿಂ ಬೆರೆತು ಬೀಗುಗೆ ಕೆಮ್ಮನೆ ಸರ್ವಲೋಕಮುಂ || ೧೧೭ ||

(ಎಂದೆಲ್ಲರೂ ಹೊರಟುಹೋಗುವರು.)

ನಾಗಾನಂದ ನಾಟಕಂ ಸಂಪೂರ್ಣಂ

ವೃತ್ತಂ || ದುರುಳರನಿಕ್ಕಿ ಸತ್ಪುರುಷರಂ ಪರಿಪಾಲಿಸಿ ದಿವ್ಯಕೀರ್ತಿಯಂ |
ಪರಪಿ ದಿಗಂತದೊಳ್ ಭಳಿರೆ ಈತನಪಾಸಟಿವರ್ಪ್ಪರಾರೊಎಂ ||
ದೊರೆವವೊಲೆಲ್ಲರಂತಣಿಸಿ ಭೂವನಿತಾಮಣಿ ತನ್ನ ತೋಳ್ಗೆಸಾ |
ರ್ತ್ತರೆ ಮಹಿಷಾಸುರಾಖ್ಯ ಪುರದೊಳ್ ಮೆರೆವಂ ವರಚಾಮಭೂಮಿಪಂ ||

ಕಂದ || ಅರಸನ ಸಂಮುಖದೊಳ್ ಗರ |
ಪುರಸುಬ್ರಹ್ಮಣ್ಯಶಾಸ್ತ್ರಿನಾಮಕವೀಂದ್ರಂ ||
ಮೆರೆದಿರ್ಪ್ಪಸುಭಯಭಾಷಾ |
ಪರಿಣತಿಸಮಧಿಗತಸರಸಕವಿತಾರಾಜ್ಯಂ || || ೨ ||

ಕಂದ || ಜನಿಸಿತದೀಯೋದರದೊಳ |
ಗನಂತನಾರಾಯಣಾಖ್ಯನೊರ್ವಂವಿದ್ವ ||
ಜ್ಜನತಾಸಂಗದೆ ಕವಿತಾಂ |
ಗನೆಗಯ್ವಿಡಿದನೆನೆ ಕೇವಲಮೆ ? ಬುಧಸಂಗಂ || || ೩ ||

ಕಂದ || ಖ್ಯಾತಶ್ರೀಮತ್ಸಜ್ಜಯ |
ತಾತಾರ್ಯಪದಾಬ್ಜಪರ್ಯುಪಾಸನದಿಂದಂ ||
ಮಾತೇಂತೆಗೆಸಾಹಿತ್ಯದ |
ರೀತಿಯನರಿದಂ ಸಮಂತುನಿಜಶೈಶವದೊಳ್ || || ೪ ||

ಕಂದ || ನಾಗಾನಂದಂಕೃತಿಮು |
ನ್ನಾಗಿರೆಸಕ್ಕದದೆಬಲಮಣೀನಿಧಿಯುಗಸಂ ||
ಖ್ಯಾಗಣ್ಯಮಾನಕಲಿವ |
ರ್ಷಾಗಮನದೊಳೀತನದನೆಕನ್ನಡಿಸಿರ್ಪಂ || || ೫ ||

ಕಂದ || ಗುಣಿಗಳಿದರಲ್ಲಿ ದೋಷಮ |
ನೆಣಿಸದೆ ಗುಣಮಂಪರಿಗ್ರಹಿಸಿಬೀಗುಗೆಬಂ ||
ಡುಣಿಗರಿವೂವಿನ ಮುಳ್ಳಂ |
ಗಣಿಸದೆ ಸವಿಬಂಡನುಂಡುತಣಿವಂತಿರೆವೋಲ್ || || ೬ ||

ಕಂದ || ಚಳಿವೆಟ್ಟಣುಗಿಯ ನಳಿತೋಳ್ |
ಪೊಳೆವುದೊಸೆಳೆಮಿಂಚಿನಂತೆ ವೋಲಾವುದರೊಳ್ ||
ಎಳೆದೇರನಕರಿಗೊರಲದು |
ಸಲಪುಗೆಕಾಲಾಂಬುದೋಪಮಂಬಿಡದೆಮ್ಮಂ || || ೭ ||

PRINTED IN INDIA AT THE WESLEY PRESS AND PUBLISHING HOUSE, MYSORE CITY